ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಡಾ.ಬೆಟಗೇರಿ ಕೃಷ್ಣಶರ್ಮ

ಡಾ. ನಿಜಲಿಂಗಪ್ಪ ಮಟ್ಟಿಹಾಳ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಡಾ. ಬೆಟಗೇರಿ ಕೃಷ್ಣಶರ್ಮ

ಡಾ. ನಿಜಲಿಂಗಪ್ಪ ಮಟ್ಟಿಹಾಳ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**BETAGERI KRISHANA SHARMA** A Monograph on Betageri Krishna Sharma in Kannada Written by:Dr. Nijalingappa Mattihal, Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xvi + 100
Copies : 1000
Price : ₹ 60.00

ಮೊದಲ ಮುದ್ರಣ : ೨೦೧೨
ಪುಟಗಳು : xvi + ೧೦೦
ಪ್ರತಿಗಳು : ೧೦೦೦
ಬೆಲೆ : ₹ ೬೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
ಮೆ॥ ಪ್ರಿಂಟ್ ಪಾರ್ಕ್
೧೪೮೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ವಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಎಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ

# ಲೇಖಕರ ಮಾತು

ಒಂದು ನಾಡಿನ ಶ್ರೀಮಂತಿಕೆಯನ್ನು ಅದು ಹೊಂದಿರುವ ಧನಕನಕಗಳಿಂದ ಅಳೆಯಲಾಗದು; ಬದಲಾಗಿ ಆ ನಾಡನ್ನು ಕಟ್ಟಿದ ವಜ್ರಸದೃಶ ವ್ಯಕ್ತಿತ್ವಗಳಿಂದ ಅಳೆಯಲಾಗುತ್ತದೆ ಎಂಬ ಮಾತಿನ ಹಿನ್ನೆಲೆಯಲ್ಲಿ 'ಕನ್ನಡ ಕಟ್ಟಿದವರು' ಮಾಲಿಕೆ ವಿಶೇಷ ಗಮನಾರ್ಹ. ಹಿಂದಣ ಹೆಜ್ಜೆಗಳ ಬೆಳಕನ್ನು ವರ್ತಮಾನದ ಮನಸ್ಸುಗಳಲ್ಲಿ, ಭವಿಷ್ಯತ್ತಿನ ಕನಸುಗಳಲ್ಲಿ ಜೀವಂತವಾಗಿ ಉಳಿಸಿಕೊಳ್ಳುತ್ತ ಹೊಸಸೃಷ್ಟಿಯ ಬೆರಗಿನತ್ತ ಸಾಗುವ ಪರಂಪರೆಯ ಈ ಹಾದಿ ಬಹುಸಂಖ್ಯಾತ ಸಾಮಾನ್ಯರನ್ನು ತಲುಪುವ ಗುರಿಯನ್ನು ಹೊಂದಿರುವುದು ಸ್ಪಷ್ಟವಿದೆ. ಜಾಗತೀಕರಣದ ಒತ್ತಡಗಳ ಈ ಸಂದರ್ಭದಲ್ಲಿ ಭಾಷೆ–ಸಂಸ್ಕೃತಿಗಳು ಎದುರಿಸುತ್ತಿರುವ ಬಿಕ್ಕಟುಗಳಿಂದಾಗಿ ದೇಶಿ ಬದುಕಿನ ರಕ್ಷಕರಾದ ಸಾಮಾನ್ಯರ ಅಸ್ತಿತ್ತ್ವವೇ ಆತಂಕದಲ್ಲಿದೆ. ಭಿನ್ನ ತಳಿಗಳನ್ನು ಕಸಿ ಮಾಡಿಕೊಳ್ಳುವ ಆತುರದಲ್ಲಿ ಸ್ವಂತದ ಬೇರುಗಳು ನಾಶವಾಗದ ಹಾಗೆ ಕಾಪಾಡುವ ಕಾಯಕದ ಅಂಗವಾಗಿ ರೂಪುಗೊಂಡಿರುವ ಪುಸ್ತಕ ಪ್ರಾಧಿಕಾರದ ಈ ಯೋಜನೆ ಅಭಿನಂದನಾರ್ಹ. ಇಂಥ ಯೋಜನೆಯನ್ನು ರೂಪಿಸಿ ಮುನ್ನಡೆಸುತ್ತಿರುವ ನಾಡಿನ ಪ್ರಮುಖ ಕವಿ, ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೆ ಧನ್ಯವಾದಗಳು ಸಲ್ಲಬೇಕು.

ಕನ್ನಡ ಕಟ್ಟುವ ಕೆಲಸ ಅಂತಿಮವಾಗಿ ಸಾಹಿತ್ಯ, ಸಂಸ್ಕೃತಿಗಳ ತಳಹದಿಯ ಮೇಲೆ ಬದುಕನ್ನು ರೂಪಿಸುವ, ಮಾನವೀಯ ನೆಲೆಗಳನ್ನು ಜನತೆಯ ಹೃದಯಗಳಲ್ಲಿ ಪ್ರೇರೇಪಿಸುವ ಆಶಯವನ್ನು ಹೊಂದಿದೆ. ನಿರಂತರವಾಗಿ ಈ ಕಾರ್ಯವನ್ನು ಸಹಸ್ರಾರು ವರ್ಷಗಳಿಂದ ಅಸಂಖ್ಯಾತ ಮಹನೀಯರು ನಿರ್ವಹಿಸುತ್ತ ಬಂದಿದ್ದು, ಅವರನ್ನು ನೆನೆಯುವುದು ಕೂಡ ಕಟ್ಟುವ ಕಾಯಕದ ಮುಂದುವರೆದ ಪ್ರಕ್ರಿಯೆಯೇ. ಈ ದೆಸೆಯಲ್ಲಿ ಡಾ. ಬೆಟಗೇರಿಯ ಕೃಷ್ಣಶರ್ಮ (ಆನಂದಕಂದ) ಅವರ ಜೀವನ ಹಾಗೂ ಕೃತಿಗಳನ್ನು ಕುರಿತು ಪರಿಚಯ–ವಿಶ್ಲೇಷಣೆಗಳನ್ನು ಒಳಗೊಂಡ ಈ ಕೃತಿ ರಚಿಸಲು ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೆ ಹಾಗೂ ಗೌರ್ವಾನಿತ ಸದಸ್ಯರು, ಹಿರಿಯರೂ ಆದ ಪ್ರೊ. ಸಿ.ವಿ.ಕೆರಿಮನಿ ಅವರಿಗೂ ಹಾಗೂ ಈ ಯೋಜನೆಗೆ ಕಾರಣರಾದ ಎಲ್ಲರಿಗೂ ನಾನು ಕೃತಜ್ಞನಾಗಿರುವೆ. ನನ್ನ ಬದುಕು ಬರಹಗಳಿಗೆ ನಿರಂತರವಾಗಿ ಪ್ರೀತಿಯಿಂದ ಮಾರ್ಗದರ್ಶನ ಮಾಡುತ್ತಿರುವ ಗೌರ್ವಾನಿತ ನನ್ನ

ವಿದ್ಯಾ ಗುರುಗಳೂ, ನಾಡಿನ ಶ್ರೇಷ್ಠ ಕವಿಗಳೂ ಆದ ಡಾ. ಸೋಮಶೇಖರ ಇಮ್ರಾಪೂರ ಅವರಿಗೂ ಹಾಗೂ ಮಾತೃಸ್ವರೂಪರಾದ ಡಾ. ಶಾಂತಾ ಇಮ್ರಾಪೂರ ಅವರಿಗೂ ಹೃದಯಪೂರ್ವಕ ವಂದನೆಗಳು. ಈ ಕೃತಿ ರಚನೆಯ ಸಂದರ್ಭದಲ್ಲಿ ಹಲವು ರೀತಿಯ ಸಲಹೆ-ಸೂಚನೆಗಳನ್ನು ನೀಡಿದ ಗುರುಗಳಾದ ಡಾ. ಎಸ್.ಎಸ್.ಭದ್ರಾಪೂರ, ಡಾ. ಶ್ರೀಪಾದ ಶೆಟ್ಟಿ, ಪ್ರೊ.ಟಿ.ಎಂ. ಭಾಸ್ಕರ್ ಸ್ನೇಹಿತರಾದ ಡಾ. ಕಾ.ವೆಂ.ಶ್ರೀನಿವಾಸಮೂರ್ತಿ, ಡಾ. ರಂಗರಾಜ ವನದುರ್ಗ, ಪ್ರೊ. ಬಸವರಾಜ ವಕ್ಕುಂದ, ಡಾ. ಬಸವರಾಜ ಡೋಣೂರ, ಡಾ. ಶಿವಾನಂದ ಕೆಳಗಿನಮನಿ, ಡಾ.ನಿಂಗಪ್ಪ ಮುದ್ದೇನೂರ ಅವರಿಗೂ ಹಾಗೂ ಈ ಕೃತಿ ರಚನೆಯ ಸಂದರ್ಭದಲ್ಲಿ ಹಲವು ಗ್ರಂಥಗಳನ್ನು ನೀಡಿದ ಶ್ರೀ ಸುರೇಶ ಬೆಟಗೇರಿ ಅವರಿಗೂ ಕೃತಜ್ಞತೆಗಳು.

೨೦ನೇ ಶತಮಾನದ ಕನ್ನಡ ಸಾಹಿತ್ಯದ ಸುವರ್ಣಯುಗ ಎನಿಸಿದ ನವೋದಯ ಕಾಲಘಟ್ಟದಲ್ಲಿ ಕನ್ನಡಿಗರ ಸಾಂಸ್ಕೃತಿಕ ಬದುಕಿನ ಭಾಗವಾಗಿರುವ ಬದುಕಿನ ತಮ್ಮ ಅನೇಕ ಮುಖದ ಕೊಡುಗೆಗಳ ಮೂಲಕ ಡಾ. ಕೃಷ್ಣಶರ್ಮ ಬೆಟಗೇರಿಯವರು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯವರು, ಧಾರವಾಡವನ್ನು ತಮ್ಮ ಕರ್ಮಭೂಮಿಯಾಗಿಸಿಕೊಂಡವರು. ಭಾರತ ಹಾಗೂ ಕರ್ನಾಟಕಾಂತರ್ಗತ ವಿಶ್ವದ ಆದರ್ಶವನ್ನು ಏಕೀಕರಣ ಭೂಮಿಕೆಯಾಗಿಸಿಕೊಂಡಿದ್ದ ಕಾಲಘಟ್ಟದಲ್ಲಿ ಬಾಳಿ, ಬದುಕಿನ ಸಮಗ್ರ ಮುಖಗಳ ದಾರ್ಶನಿಕ ಹೊಳಹುಗಳನ್ನು ತಮ್ಮ ಅಭಿವ್ಯಕ್ತಿಯಲ್ಲಿ ಮೈಗೂಡಿಸಿಕೊಂಡಿದ್ದ ಆನಂದಕಂದರು ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿಯೂ ಕೃಷಿಗೈದಿದ್ದಾರೆ. ಕಾವ್ಯ, ಸಣ್ಣಕಥೆ, ಕಾದಂಬರಿ, ನಾಟಕ, ರೂಪಕ, ವಿಮರ್ಶೆ, ಸಂಶೋಧನೆ, ಜನಪದ ಸಾಹಿತ್ಯ, ಆತ್ಮಕಥೆ, ಪತ್ರಿಕಾ ಸಂಪಾದನೆ ಇವೇ ಮೊದಲಾದ ಪ್ರಕಾರ ಹಾಗೂ ಕ್ಷೇತ್ರಗಳಲ್ಲಿ ಆನಂದಕಂದರ ಸಾಧನೆ ಚಾರಿತ್ರಿಕವಾಗಿ ಮಹತ್ವದ್ದು. ಅಷ್ಟೇ ಅಲ್ಲ ಗ್ರಾಮೀಣ ಪರಿಸರದ ಜಾನಪದ ಬದುಕಿನ ದೇಶೀ ಸತ್ವಗಳನ್ನು ತಮ್ಮ ಕೃತಿಗಳ ಜೀವಾಳವಾಗಿಸಿಕೊಂಡಿರುವುದರಿಂದ ಜಾಗತೀಕರಣದ ಈ ಸಂದರ್ಭದಲ್ಲಿ ಸಾಂಸ್ಕೃತಿಕ ಅಸ್ಮಿತೆಯ ಹುಡುಕಾಟದ ದೃಷ್ಟಿಯಿಂದಲೂ ಅವರ ಬದುಕು ಹಾಗೂ ಸಾಹಿತ್ಯದ ಅಧ್ಯಯನ-ಅವಲೋಕನಗಳಿಗೆ ವಿಶೇಷ ಪ್ರಸ್ತುತತೆ ಒದಗುತ್ತದೆ. ಇಂಥ ಆಶಯಗಳ ನೆಲೆಯಿಂದ ಆನಂದಕಂದರ ಬದುಕು ಬರಹಗಳ ಸ್ಥೂಲ ಅವಲೋಕನಕ್ಕೆ ಇಲ್ಲಿ ಯತ್ನಿಸಲಾಗಿದೆ. 'ಕನ್ನಡ ಕಟ್ಟಿದವರು' ಎಂಬ ಶೀರ್ಷಿಕೆಯ ನಿರೀಕ್ಷಿತ ಆಶಯ ಇದೇ ಎಂಬುದು ನನ್ನ ಭಾವನೆ. ತಮ್ಮ ಸಾಹಿತ್ಯಬದುಕಿನ ಆರಂಭದ ದಿನಗಳಲ್ಲಿಯೇ ಇಂಥ ಖಚಿತ ಜೀವನ ದೃಷ್ಟಿಯೊಂದು ಸ್ವತಃ ಆನಂದಕಂದರಲ್ಲಿ ಹುರಿಗೊಂಡಿತ್ತು.

ಡಾ. ಬೆಟಗೇರಿ ಕೃಷ್ಣಶರ್ಮರು ಕನ್ನಡ ನಾಡು-ನುಡಿ ಕಂಡ ಅಪರೂಪದ ವ್ಯಕ್ತಿ, ಕನ್ನಡದ ಬಹುದೊಡ್ಡ ಶಕ್ತಿ. ಕನ್ನಡ ಸೇವೆಯೇ ಎಲ್ಲಕ್ಕಿಂತ ಮಿಗಿಲು ಎಂದು

ಭಾವಿಸಿದವರು, ಬದುಕಿದವರು ಮತ್ತು ಬರೆದವರು. ಮಾಸ್ತಿಯವರಿಗಿಂತ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ಕನ್ನಡ ಸಾಹಿತ್ಯ, ಸಂಸ್ಕೃತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಕನ್ನಡ ನಾಡು–ನುಡಿ, ಸಂಸ್ಕೃತಿಯ ರಕ್ಷಣೆ ಎಂಬುದು ಇಂದು ಕೇವಲ ವೇದಿಕೆಯ ಮಾತುಗಳಾಗುತ್ತಿರುವ ಈ ಸಂದರ್ಭದಲ್ಲಿ ಡಾ. ಬೆಟಗೇರಿ ಕೃಷ್ಣಶರ್ಮರು ಕನ್ನಡದ ಬಗೆಗೆ ಇಟ್ಟುಕೊಂಡಿದ್ದ ಭಕ್ತಿ, ನಿಷ್ಠೆ, ಪ್ರೀತಿ, ಗೌರವ, ಪ್ರಾಮಾಣಿಕತೆ, ಆದರ್ಶಗಳು ಅನುಕರಣೀಯವಾದವುಗಳು. ಅವುಗಳನ್ನು ಓದುಗರಿಗೆ ಪರಿಚಯಿಸುವುದು ಈ ಕೃತಿಯ ಮುಖ್ಯ ಆಶಯವಾಗಿದೆ.

ಡಾ. ನಿಜಲಿಂಗಪ್ಪ ಮಟ್ಟಿಹಾಳ

# ಪರಿವಿಡಿ


ಅರಿಕೆ

೧. ಡಾ. ಬೆಟಗೇರಿ ಕೃಷ್ಣಶರ್ಮರ ಜೀವನ ೧–೩೨

೧. ಜನನ ಮತ್ತು ಮನೆತನದ ಹಿನ್ನೆಲೆ

೨. ಬಾಲ್ಯ, ವಿದ್ಯಾಭ್ಯಾಸ, ಆಸಕ್ತಿ, ಪ್ರೇರಣೆಗಳು

೩.ವೃತ್ತಿ ಜೀವನ

೪. ಕೌಟುಂಬಿಕ ಜೀವನ

೫. ವಿವಿಧ ಕ್ಷೇತ್ರಗಳಲ್ಲಿ ಸಾಧನೆ

೨. ಆನಂದಕಂದರ ಸೃಜನಾತ್ಮಕ ಸಾಹಿತ್ಯ ೩೩–೫೫

೧. ಆನಂದಕಂದರ ಕಾವ್ಯ

೨. ಆನಂದಕಂದರ ಸಣ್ಣ ಕಥೆಗಳು

೩. ಆನಂದಕಂದರ ಕಾದಂಬರಿಗಳು

೪. ಆನಂದಕಂದರ ನಾಟಕ–ರೂಪಕಗಳು

೩. ಆನಂದಕಂದರ ಸೃಜನೇತರ ಸಾಹಿತ್ಯ ೫೬–೬೧

೧. ವಿಮರ್ಶೆ, ಸಂಶೋಧನೆ, ಸಂಸ್ಕೃತಿ

೪. ಪತ್ರಿಕೋದ್ಯಮ–ಸಾಂಸ್ಕೃತಿಕ ಪರಿಚಾರಿಕೆ ೬೨–೧೦೦

೧. ಪತ್ರಿಕಾಕರ್ತನಾಗಿ ಆರಂಭದ ಅನುಭಗಳು

೨. 'ಜಯಂತಿ' ಸಂಪಾದಕರಾಗಿ ಬೆಟಗೇರಿ ಕೃಷ್ಣಶರ್ಮರು

೩. 'ಜಯಂತಿ'ಯ ಧ್ಯೇಯೋದ್ದೇಶಗಳು ಹಾಗೂ ಸಾಧನೆ

೪. ದೇಶ ಸೇವೆ–ರಾಷ್ಟ್ರೀಯತೆಯ ವಿಶಾಲ ಭೂಮಿಕೆ

೫. ರಾಷ್ಟ್ರೀಯ ಕವಿಯಾಗಿ ಆನಂದಕಂದರ ಪಾತ್ರ

೬. ಸ್ವಾತಂತ್ರ್ಯ ಹೋರಾಟದಲ್ಲಿ 'ಜಯಂತಿ'ಯ ಪಾತ್ರ

೭. ಕನ್ನಡ ಕಟ್ಟಿದ ಪ್ರಸಂಗಗಳು ಮತ್ತು ಸಂದರ್ಭಗಳು

೮.	ಅನುಬಂಧ
* ಡಾ. ಬೆಟಗೇರಿ ಕೃಷ್ಣಶರ್ಮರ ವಂಶಾವಳಿ
* ಭಾವಚಿತ್ರಗಳು
* ಗ್ರಂಥಋಣ

# ೧. ಡಾ.ಬೆಟಗೇರಿ ಕೃಷ್ಣಶರ್ಮರ ಜೀವನ

ಯಾವುದೇ ಲೇಖಕನ ಜೀವನ ಎಷ್ಟೇ ವೈಯಕ್ತಿಕ ವೈಶಿಷ್ಟ್ಯಗಳಿಂದ ಕೂಡಿದ್ದರೂ, ಕೌಟುಂಬಿಕ ಸ್ಥಿತಿಗತಿಗಳ ಸೀಮಿತ ಪರಿಧಿಗೆ ಒಳಪಟ್ಟಿದ್ದರೂ ಒಂದು ಭಾಗದ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಪ್ರಭಾವವೇ ಅವನ ಬದುಕಿನ ನಿರ್ಣಾಯಕ ಹಂತವಾಗಿರುತ್ತದೆ. ಆ ಕಾರಣದಿಂದಲೇ ಲೇಖಕನ ಬದುಕು ಹಾಗೂ ಅಭಿವ್ಯಕ್ತಿಗಳು ಸಮಷ್ಟಿ ಬದುಕಿನ ಪ್ರಾತಿನಿಧಿಕ ರೂಪಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಆನಂದಕಂದರು ಹುಟ್ಟಿ ಬೆಳೆದ ಮನೆತನ, ಸಾಮಾಜಿಕ ಪರಿಸರ, ಸಾಂಸ್ಕೃತಿಕ ನೆಲೆಗಳನ್ನು ಒಂದೊಂದಾಗಿ ನಿರೂಪಿಸುತ್ತ ಅವರ ಶೈಕ್ಷಣಿಕ, ಸೃಜನಶೀಲ ಹಾಗೂ ಕೌಟುಂಬಿಕ ಬದುಕು ಸಾಗಿ ಬಂದ ಪರಿಯನ್ನು ಹಂತ ಹಂತವಾಗಿ ಗುರುತಿಸುವ ಪ್ರಯತ್ನ ಇದಾಗಿದೆ. ಇವೆಲ್ಲ ಅವರ ಬದುಕಿನಲ್ಲಿ ಒಂದರೊಳಗೊಂದಾಗಿ ಹಾಸು ಹೊಕ್ಕಾಗಿರುವ ಬದುಕನ್ನು ಅರ್ಥೈಸುವ, ವಿಶ್ಲೇಷಿಸುವ, ಸಮಕಾಲೀನರೊಂದಿಗೆ ಸ್ಪಂದಿಸುವ ಹಾಗೂ ಜನಪರ ಮುಖಿಯಾದ ನಿಲುವು ಶ್ರೀ ಬೆಟಗೇರಿ ಕೃಷ್ಣಶರ್ಮ ಅವರದು. ಈ ಮಾತಿನ ಯತಾರ್ಥತೆಯನ್ನು ಅವರ ವೈವಿಧ್ಯಪೂರ್ಣವಾದ ಸಾಹಿತ್ಯ ಕೃಷಿ ಹಾಗೂ ಬದುಕಿನಲ್ಲಿ ಕಂಡುಂಡ ಸುಖ ದುಃಖದ ನೆಲೆಗಳನ್ನು ಗುರುತಿಸುವುದು ಪ್ರಮುಖ ಉದ್ದೇಶವಾಗಿದೆ. ಈ ಪುಸ್ತಕದ ಉದ್ದೇಶಿತ ಹಿನ್ನೆಲೆಯಲ್ಲಿ ಸೂಚಿಸಲಾದ ಸ್ಥೂಲ ವರ್ಗೀಕರಣಕ್ಕನುಗುಣವಾಗಿ ಬಿಡಿಸಿಡಲಾಗುವುದು. ಅಂತಿಮವಾಗಿ ಇಲ್ಲಿನ ನಿರೂಪಣೆ ಒಂದು ಕಾಲದ, ಒಂದು ಪ್ರದೇಶದ ಜೀವನ ಚಿತ್ರಣವನ್ನು ಹಾಗೂ ಒಂದು ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ವೈಶಿಷ್ಟ್ಯಗಳನ್ನು ಗುರುತಿಸುವ, ದಾಖಲಿಸುವ ಕಡೆಗೆ ಮುಖ ಮಾಡಿರುತ್ತದೆ.

ಬೆಳಗಾವಿ ಕರ್ನಾಟಕದ ಗಡಿ ಜಿಲ್ಲೆ. ಭಾಷಾವಾರು ಪ್ರಾಂತಗಳ ವಿಂಗಡಣೆ ಹಾಗೂ ಅದಕ್ಕೆ ಪೂರಕವಾದ ಮಹಾಜನ ವರದಿಗಳ ತೀರ್ಮಾನಗಳಿಂದ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂಬುದು ಸರ್ವವಿದಿತ. ಆದಾಗ್ಯೂ ಇಂದಿಗೂ ಅದನ್ನು ರಾಜಕೀಯ ಉದ್ದೇಶಕ್ಕಾಗಿ ಗಡಿ ವಿವಾದದ ಕೇಂದ್ರವಾಗಿ ಉಳಿಸಿಕೊಳ್ಳಲು ಕೆಲ ಮರಾಠಿಗರು ಯತ್ನಿಸುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಆನಂದಕಂದರ ಬರಹಗಳು ಅಚ್ಚಗನ್ನಡ ದೇಶೀಯತೆ ಆ ಪ್ರದೇಶ ಅಪ್ಪಟ ಕನ್ನಡತನದ ಸಾಂಸ್ಕೃತಿಕ ಬೇರುಗಳನ್ನು ಹೊಂದಿರುವುದಕ್ಕೆ ಸಾಕ್ಷಿ ನುಡಿಯುತ್ತದೆ.

೧. **ಜನನ ಮತ್ತು ಮನೆತನದ ಹಿನ್ನೆಲೆ** : ಕವಿಭೂಷಣ ಡಾ. ಬೆಟಗೇರಿ ಕೃಷ್ಣಶರ್ಮರು ಹುಟ್ಟಿದ್ದು ೧೬-೦೪-೧೯೦೦ ರಂದು. (ಶಾರ್ವರಿ ಸಂವತ್ಸರದ ಚೈತ್ರವದ್ಯ ಪ್ರತಿಪದೆ, ಶಾಲಿವಾಹನ ಶಕೆ ೧೮೨೨) ತಂದೆ ಶ್ರೀನಿವಾಸರಾಯರು, ತಾಯಿ ರಾಧಾಬಾಯಿ. ಹುಟ್ಟಿದೂರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಬೆಟಗೇರಿ. ಇದು ಸಿಂದಿಕುರಬೇಟ್ಟ ದೇಸಾಯರ ವಶಕ್ಕೆ ಸೇರಿದ ಒಂದು ಇನಾಮು ಹಳ್ಳಿ, ಅಲ್ಲಿನ ವತನದಾರ ಗೌಡರ ಮನೆತನದಲ್ಲಿ ಹುಟ್ಟಿದ ಶ್ರೀನಿವಾಸರಾಯರು ಬಗರನಾಳ ಎಂಬ ವತನೀಯ ಹಳ್ಳಿಯೊಂದರ ಕುಲಕರ್ಣಿಕೆಯನ್ನು ವೃತ್ತಿಯಾಗಿ ನಿರ್ವಹಿಸುತ್ತಿದ್ದರು. ಕುಲಕರ್ಣಿ, ಪಾಟೀಲ, ಹುದ್ದಾರ ಎಂಬ ಹೆಸರುಗಳೂ ಈ ಮನೆತನಕ್ಕೆ ಬಳಕೆಯಲ್ಲಿದ್ದು, ಬೆಟಗೇರಿ ಕೃಷ್ಣಶರ್ಮರು ತಮ್ಮ ಹುಟ್ಟಿದೂರನ್ನು ತಮ್ಮ ಹೆಸರಿನೊಂದಿಗೆ ಜನಪ್ರಿಯಗೊಳಿಸಿದರು. ಶ್ರೀನಿವಾಸರಾಯರದು ಹಿಂದೂ ಸಾಂಪ್ರದಾಯಿಕ ಅವಿಭಕ್ತ ಕುಟುಂಬವಾಗಿದ್ದಿತು. ಆನಂದಕಂದರ ತಾಯಿ ರಾಧಾಬಾಯಿ ಶ್ರೀನಿವಾಸರಾಯರ ಎರಡನೆಯ ಧರ್ಮಪತ್ನಿ. ಕೃಷ್ಣಾತಾಯಿ ಶ್ರೀನಿವಾಸರಾಯರ ಮೊದಲ ಧರ್ಮಪತ್ನಿಯಾಗಿದ್ದರು. ಇವರು ಬೆಳಗಾವಿಯ ಪ್ರತಿಷ್ಠಿತ ನಾಯಕರ ಮನೆತನಕ್ಕೆ ಸೇರಿದವರಾಗಿದ್ದರು. ಇವರಿಗೆ ರಾಘವೇಂದ್ರ ಹಾಗೂ ಉಡುಪಿರಾಯ ಎಂಬ ಎರಡು ಗಂಡುಮಕ್ಕಳಿದ್ದರು. ಕೃಷ್ಣಾತಾಯಿಯವರ ಅಕಾಲಿಕ ಮರಣದಿಂದ ಶ್ರೀನಿವಾಸರಾಯರು ಎರಡನೆಯ ಮದುವೆಯಾಗಬೇಕಾಯಿತು. ರಾಧಾಬಾಯಿ ಯವರಿಗೆ ಒಟ್ಟು ಹತ್ತು ಜನ ಮಕ್ಕಳು. ನಾಲ್ಕು ಹೆಣ್ಣು, ಆರು ಗಂಡು. ಇವರಲ್ಲಿ ಬದುಕಿ ಉಳಿದವರು ಎಂಟು ಜನ. ಎರಡು ಹೆಣ್ಣುಮಕ್ಕಳು ಹಾಗೂ ಎರಡು ಗಂಡುಮಕ್ಕಳ ನಂತರದ ಐದನೆಯ ಸ್ಥಾನ ಆನಂದಕಂದರದು.

ಕೃಷ್ಣಶರ್ಮರ ಹಿಂದಿನ ೩೦೦ ವರ್ಷಗಳ ಒಂಭತ್ತು ತಲೆಮಾರುಗಳ ವಂಶಾವಳಿಯನ್ನು ಗುರುತಿಸಲಾಗಿದೆ.[೧] ಈ ಪಟ್ಟಿಯಲ್ಲಿ ಮೊದಲಿಗನೆಂದು, ಮೂಲಪುರುಷನೆಂದು ಗುರುತಿಸಿರುವುದು ಬಾಳಾಜಿ ಪಂತನನ್ನು. ಈ ಬಾಳಾಜಿಪಂತ ಮರಾಠರ ರಾಜಸೇವೆಯಲ್ಲಿದ್ದ. ಮರಾಠವಾಡ ಪ್ರದೇಶದ ಪರಭಣಿ ಜಿಲ್ಲೆಯ ಗಂಗಾಖೇಡ ತಾಲೂಕಿನ ಗಂಗಥಡಿ ಎಂಬ ಪುಟ್ಟ ಗ್ರಾಮ ಇವನ ಮೂಲಸ್ಥಳ. ಗೋಕಾಕ ನಾಡಿನ ನಾಡಗೌಡರ 'ಗೌಡ-ನಿಸವತೆನಾಡಗೌಡ'ನಾಗಿ ನೇಮಕಗೊಂಡು ಪ್ರಸ್ತುತ ಬೆಟಗೇರಿಗೆ ಬಂದು ನೆಲೆಸಿದನು. ಇಲ್ಲಿ ಪಡೆದ ಆಡಳಿತಾಧಿಕಾರದ ಕಾರಣದಿಂದ ಗೌಡ, ಪಾಟೀಲ, ಹುದ್ದಾರ ಹೆಸರುಗಳ ಜತೆಗೆ ಜೀವನ ನಿರ್ವಹಣೆಗೆ ಉಂಬಳಿ ಜಮೀನುಗಳು ಒದಗಿದವು.

---

೧. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು. ೧೧-೧೪.

ಆನಂದಕಂದರ ವಂಶಪರಂಪರೆಯ ಹತ್ತು ತಲೆಮಾರುಗಳಲ್ಲಿ ಉಂಟಾದ ಧಾರ್ಮಿಕ ಶ್ರದ್ಧೆಯಲ್ಲಿನ ಬದಲಾವಣೆ ಕುರಿತು ಕೆಲವು ವಿವರಗಳನ್ನು ಇಲ್ಲಿಯೇ ಪ್ರಸ್ತಾಪಿಸುವುದು ಸೂಕ್ತ. "ಮೂಲಪುರುಷನ ಕಾಲಕ್ಕೆ ಈ ಪಾಟೀಲರ ಮನೆತನಕ್ಕೆ ಜೆಜೂರಿಯ ಶ್ರೀ ಮಲ್ಹಾರಿ ಆರಾಧ್ಯದೈವವೂ ಕುಲದೇವನೂ ಆಗಿದ್ದ. ಸನ್ನತಿಯ ಶ್ರೀ ಚಂದ್ರಲಾಪರಮೇಶ್ವರಿ ಕುಲದೇವತೆಯೆನಿಸಿದ್ದಳು. ಅವರ ಮನೆತನ ಶೈವಬ್ರಾಹ್ಮಣ ಮನೆತನವೆನಿಸಿತ್ತು. ಬಾಳಾಜಿ ಪಂತನ ಮಗ ಶ್ರೀನಿವಾಸರಾಯ, ಆತನ ಒಬ್ಬನೇ ಮಗ ಮಲ್ಹಾರಿರಾಯ ಕುಲದೇವನ ಹೆಸರನ್ನೇ ಪಡೆದವನು. ಈತನ ಮಗ ಲಕ್ಷ್ಮಣರಾಯ. ಲಕ್ಷ್ಮಣರಾಯನಿಗೆ ಬಹುಕಾಲ ಮಕ್ಕಳಾಗದ್ದರಿಂದ ತಿರುಪತಿಯ ತಿಮ್ಮಪ್ಪನಿಗೆ ಹರಕೆ ಹೊತ್ತನಂತೆ. ತಿಮ್ಮಪ್ಪನ ವರಪ್ರಸಾದದ ಕುರುಹೆಯಿಂದ ಎಂಬಂತೆ ಎರಡು ಪುತ್ರರತ್ನಗಳು ಅವರತಿಸಿದಾಗ ಹಿರಿಯ ಮಗನಿಗೆ ತಿಮ್ಮಪ್ಪನೆಂದೇ ಹೆಸರಿಟ್ಟ. ಆತ ವೆಂಕಟೇಶನ ಪರಮಭಕ್ತನಾಗಿ ವೈಷ್ಣವನೆನಿಸಿದ. ಕಿರಿಯ ಮಗನನ್ನು ಶ್ರೀನಿವಾಸನೆಂದು ಕರೆದ. ಈ ಘಟನೆಯಿಂದ ಈ ಮನೆತನಕ್ಕೆ ತಿರುಪತಿಯ ತಿಮ್ಮಪ್ಪನೇ ಕುಲದೇವನಾದ, ಲಕ್ಷ್ಮೀದೇವಿ ಕುಲದೇವತೆಯಾದಳು. ಮನೆಯಲ್ಲಿ ವೈಷ್ಣವ ಸಂಪ್ರದಾಯ ಪ್ರಾರಂಭವಾಗಿ ಶೈವ ಮನೆತನ ವೈಷ್ಣವ ಬ್ರಾಹ್ಮಣ ಮನೆತನವಾಯಿತು. ಈ ಮನೆತನದಲ್ಲಿ ಶ್ರೀನಿವಾಸರಾಯನ ಶಾಖೆ ವೈಷ್ಣವ ಪರಂಪರೆಯಲ್ಲಿಯೇ ನಡೆದು ಬಂದಿದೆ. ಶ್ರೀನಿವಾಸರಾಯನ ಶಾಖೆಯಲ್ಲಿ ಮುಂದಿನ ವ್ಯಕ್ತಿಗಳ ಹೆಸರುಗಳೆಲ್ಲ ಶ್ರೀ ವಿಷ್ಣುವಿನ ಹೆಸರುಗಳಾಗಿವೆ. ಶೈವ ಸಂಪ್ರದಾಯದ ಹೆಸರುಗಳನ್ನು ನಾವಿಲ್ಲಿ ಕಾಣುವದಿಲ್ಲ. ಆದರೆ ತಿಮ್ಮಪ್ಪನ ಶಾಖೆಯಲ್ಲಿ 'ಮಲ್ಹಾರರಾಯ' ಎಂಬ ಹೆಸರು ಹಲವು ಸಲ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಣವೆಂದರೆ ಮಲ್ಹಾರಿಯ ಉಪಾಸನೆಯನ್ನು ಇವರು ಕಾಯ್ದುಕೊಂಡೇ ಬಂದಿದ್ದರು."[೨] ಈ ಬಗೆಯ ಧಾರ್ಮಿಕ ಸಮನ್ವಯದ ಹಿನ್ನೆಲೆಯುಳ್ಳ ಈ ಮನೆತನದ ಮುಂದಿನ ತಲೆಮಾರುಗಳಲ್ಲಿ ವೆಂಕಟರಾಯ, ಶ್ರೀನಿವಾಸರಾಯ ಹೆಸರುಗಳು ಪುನರಾವರ್ತನೆಗೊಳ್ಳುತ್ತಲೇ ಬಂದಿವೆ.*

ತಂದೆ ತಾಯಿಗಳ ಆನುವಂಶಿಕ ಪ್ರಭಾವ ಮಕ್ಕಳ ಮೇಲೆ ಆಗುವಂತೆಯೇ ಅವರ ಆಸಕ್ತಿ, ಅಭಿರುಚಿ, ಗುಣ–ಸ್ವಭಾವಗಳು, ಆರ್ಥಿಕ ಸ್ಥಿತಿಗತಿಗಳು, ಸಾಮಾಜಿಕ ಸ್ಥಾನಮಾನಗಳು ಮೊದಲಾದವುಗಳ ಪ್ರಭಾವವೂ ಸಹಜವಾಗಿಯೇ ಆಗುತ್ತದೆ. ಸೂಕ್ಷ್ಮ ಸಂವೇದನೆಯ ಸೃಜನಶೀಲ ಮನಸ್ಸುಗಳ ಮೇಲಂತೂ ಆ ಪ್ರಭಾವ ಗಾಢವಾದುದು. ಕೃಷ್ಣಶರ್ಮರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವರ ತಂದೆ–ತಾಯಿಗಳ

---

೨. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ರೆ.ಕುಲಕರ್ಣಿ, ಪು. ೧೨

* ಶ್ರೀ ಬೆಟಗೇರಿ ಕೃಷ್ಣಶರ್ಮರ ವಂಶಾವಳಿಯ ಚಿತ್ರಣವನ್ನು ಈ ಪುಸ್ತಕಿಯ ಅನುಬಂಧದಲ್ಲಿ ನೋಡಬಹುದು.

ಪಾತ್ರ ಮಹತ್ವದ್ದು. ಆ ತಂದೆ-ತಾಯಿಗಳ ವ್ಯಕ್ತಿತ್ವದ ಹಿನ್ನೆಲೆ ಕುರಿತು, ಜೀವನ ಸಂದರ್ಭಗಳ ಕುರಿತು ಕೆಲವು ಸಂಗತಿಗಳನ್ನಿಲ್ಲಿ ಪ್ರಸ್ತಾಪಿಸಲಾಗಿದೆ.

ಕೃಷ್ಣಶರ್ಮರ ತಂದೆ ರಾಧಾಬಾಯಿಯವರನ್ನು ಎರಡನೆಯ ಮದುವೆಯಾದ ಸಂದರ್ಭದಲ್ಲಿ ಅವರಿಗೆ ನಲವತ್ತರ ಪ್ರಾಯ. ರಾಧಾಬಾಯಿಗೆ ಆಗ ೧೭-೧೮ರ. ಹರೆಯ. ಅವಿಭಕ್ತ ಕುಟುಂಬದ ಅನುಕೂಲ, ಪ್ರತಿಕೂಲ ಸನ್ನಿವೇಶಗಳ ತೊಡಕನ್ನು ಎದುರಿಸಿ ಈ ದಾಂಪತ್ಯ ಬದುಕನ್ನು ನಿರ್ವಹಿಸಿದ ಬಗೆ ಆ ಕಾಲದ ಕೌಟುಂಬಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುವಂತಿದೆ.

ಆನಂದಕಂದರು ತಮ್ಮ ತಂದೆಯವರೊಂದಿಗಿನ ಒಡನಾಟ ಕುರಿತು ಹೇಳುವ ಮಾತುಗಳು ಹೀಗಿವೆ: "ವತನದಾರ ಗೌಡರ ಮನೆಯಲ್ಲಿ ಹುಟ್ಟಿದ ನಮ್ಮ ತಂದೆ ಶ್ರೀನಿವಾಸರಾಯರು ನಮ್ಮ ಒಂದು ವತನೀಯ ಹಳ್ಳಿಯ ಕುಲಕರ್ಣಿಕೆಯನ್ನು ಹೊಂದಿದ್ದರು. ನನ್ನ ಚಿಕ್ಕಂದಿನಲ್ಲಿಯೇ ಅವರು ಕಣ್ಮರೆಯಾದರೂ ಮರೆಯತಕ್ಕ ವ್ಯಕ್ತಿ ಅವರಲ್ಲ. ಇದ್ದಷ್ಟು ಸ್ವಲ್ಪ ದಿನಗಳಲ್ಲಿಯೇ ಅವರು ತಮ್ಮ ಅನೇಕ ನೆನಪುಗಳನ್ನು ನಮ್ಮಲ್ಲಿ ಅಚ್ಚೊತ್ತಿ ಹೋಗಿದ್ದಾರೆ. ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದವರಾದರೂ ನಮ್ಮ ತಂದೆಯವರು ಅನೇಕ ನಾಗರಿಕ ಸಂಸ್ಕಾರಗಳನ್ನು ಪಡೆದವರಾಗಿದ್ದರು. ಕನ್ನಡ ಭಾಷೆಯನ್ನು ಓದಲೂ ಬರೆಯಲೂ ಬಾರದ ಆ ಕಾಲದಲ್ಲ ನಮ್ಮ ತಂದೆಯವರು ಕನ್ನಡ ಅಕ್ಷರಗಳನ್ನು ಸುಂದರವಾಗಿ ಬರೆಯುತ್ತಿದ್ದರು. ಕನ್ನಡವನ್ನು ಓದುತ್ತಿದ್ದರು. ಆದರೂ ಮರಾಠಿ ಭಾಷೆಯು ಅವರಿಗೆ ಮನೆಮಾತಿನಂತೆ ಸಹಜವಾಗಿತ್ತು. ಜೋತಿಷ್ಯದಲ್ಲಿ ಅವರು ಅದು ಹೇಗೆ ಪಾಂಡಿತ್ಯವನ್ನು ಗಳಿಸಿದ್ದರೆಂಬುದನ್ನು ನಾನರಿಯೆ. ಏಕೆಂದರೆ ನಾನು ಚಿಕ್ಕ ಕೂಸಿದ್ದಾಗ ಅವರು ನಮ್ಮ ತಾಯಿಯ ಮುಂದೆ ಆಗಾಗ ಹೇಳುತ್ತಿದ್ದರಂತೆ. 'ಇವನ ಭವಿಷ್ಯ ಬಹಳ ಚೆನ್ನಾಗಿದೆ. ಎಲ್ಲ ಮಕ್ಕಳಂತೆ ಇವನಲ್ಲ. ಇವನಿಂದ ನಮ್ಮ ಮನೆತನದ ಕೀರ್ತಿ ಬೆಳಗುವುದು."[೩] ಈ ಮಾತು ನಿಜವಾದದ್ದು ಈಗ ಚರಿತ್ರೆ.

ಸಂಗೀತದಲ್ಲಿ ವಿಶೇಷ ಆಸಕ್ತರಾಗಿದ್ದ ಕೃಷ್ಣಶರ್ಮರ ತಂದೆ ಶ್ರೀನಿವಾಸರಾಯರು ತಬಲಾ ಬಾರಿಸುವುದರಲ್ಲಿ ಪ್ರವೀಣರಾಗಿದ್ದರು. ಬಯಲಾಟ, ಹರಿಕೀರ್ತನೆ, ಸಂಗೀತ ಪ್ರಸಂಗಗಳಲ್ಲಿ ಶಾಸ್ತ್ರೀಯವಾಗಿ ತಬಲಾ ಬಾರಿಸುತ್ತಿದ್ದ ರಾಯರು ತಂಬೂರಿಯ ಶ್ರುತಿಯೊಂದಿಗೆ ಪದಗಳನ್ನು ಹಾಡಬಲ್ಲವರಾಗಿದ್ದರು. ಗಣಪತಿ ಮೂರ್ತಿ ಮೊದಲಾಗಿ ವಿಧವಿಧ ಬೊಂಬೆಗಳನ್ನು, ತಯಾರಿಸುವುದರಲ್ಲಿ, ಬಣ್ಣ ಹಚ್ಚುವುದರಲ್ಲಿ, ಮೂರ್ತಿಶಿಲ್ಪದಲ್ಲಿ ತಜ್ಞತೆ ಅವರಿಗಿತ್ತು. ಈ ಆಸಕ್ತಿಗಳ ಅಂತರ್ಮುಖತೆ ಅವರಲ್ಲಿ ವ್ಯಾವಹಾರಿಕ ಬದುಕಿನ ನಿರ್ಲಿಪ್ತತೆಗೆ ಕಾರಣವಾಗಿತ್ತು. ಆದ್ದರಿಂದ ಅವರ ತಮ್ಮನೇ

೩. ನನ್ನ ನೆನಪುಗಳು - ಆನಂದಕಂದ ಪು. ೮

ಅವರನ್ನು ಕೌಟುಂಬಿಕ ವ್ಯವಹಾರಗಳಲ್ಲಿ ತೊಡಗದಂತೆ ನೋಡಿಕೊಂಡು ವೈಯಕ್ತಿಕವಾಗಿ ಲಾಭ ಮಾಡಿಕೊಂಡು ಬೇರೆಯಾಗಿ ಹೋಗುತ್ತಾನೆ. ಇದರಿಂದ ಕುಟುಂಬ ಬಡತನದ ಸುಳಿಯಲ್ಲಿ ಸಿಲುಕುವಂತಾಗುತ್ತದೆ. ಇವರ ಮತ್ತೊಬ್ಬ ಮಗನೂ ಇಂಥದೇ ಸ್ವಾರ್ಥ ಸಾಧಿಸಿಕೊಂಡು ಬಡತನದ ಪರಂಪರೆಯನ್ನು ಮತ್ತಷ್ಟು ಬೆಳೆಸಿದ.

ಆದರೆ ಶ್ರೀನಿವಾಸರಾಯರ ನಿಷ್ಕಲ್ಮಶ ಮನಸ್ಸು, ಅಚಲ ದೈವಭಕ್ತಿ ತಮ್ಮನ್ನು ಎಂಥ ಸಂಕಷ್ಟಗಳಿಂದಲೂ ಪಾರು ಮಾಡುತ್ತದೆ ಎಂದು ನಂಬಿದವರಾಗಿದ್ದರು. ೧೯೦೭ ನೆಯ ಇಸ್ವಿಯಲ್ಲಿ ನಾಡಿಗೆ ಒದಗಿದ ಬರಗಾಲದ ಸಂದರ್ಭದಲ್ಲಿ ತಮ್ಮ ಕುಟುಂಬವನ್ನು ಅವರ ಕುಲಕರ್ಣಿಕೆಯ ಊರಾದ ಬಗರನಾಳದ ರೈತರು ಸಾಕಿ ಸಲುಹಿದ ರೀತಿ ಅವರ ಈ ನಂಬಿಕೆಗೆ ಜೀವಂತ ಸಾಕ್ಷಿ. ತಾವು ಅಧಿಕಾರ ನಡೆಸುವ ಊರಿನ ರೈತರ ನಡುವೆ ತಮ್ಮ ನಿಸ್ವಾರ್ಥ ಸಜ್ಜನಿಕೆಯಿಂದ ತುಂಬ ಪ್ರೀತಿಪಾತ್ರರಾಗಿದ್ದಾರೆಂಬ ಸಂಗತಿಯೂ ಇಂಥ ಅನೇಕ ಪ್ರಸಂಗಗಳಿಂದ ತಿಳಿದುಬರುತ್ತದೆ. ಕೃಷ್ಣಶರ್ಮರ ಉಪನಯನವಾದ ವರ್ಷ ಅಂದರೆ ೧೯೧೨ನೇ ಇಸ್ವಿಯಲ್ಲಿ ಶ್ರೀನಿವಾಸರಾಯರು ತೀರಿಕೊಂಡರು. ಅವರು ವೆಂಕಟರಮಣನ ಗಿರಿಗೆ ಹೋದಾಗ ತೀರಿಕೊಂಡದ್ದು ಶುಭಯೋಗಾಯೋಗವೆಂದು ಭಾವಿಸಿದರು.

ಕೃಷ್ಣಶರ್ಮರ ತಾಯಿಯ ಬಗೆಗಿನ ಪ್ರೀತಿ ಗೌರವಗಳು ತಂದೆಗಿಂತಲೂ ಮಿಗಿಲಾದುವೆಂಬುದು ಗಮನಾರ್ಹ. ಅದಕ್ಕೆ ಕಾರಣ ಬಹುಶಃ ತಾಯಿಯೊಂದಿಗೆ ಹೆಚ್ಚುಕಾಲ ಬದುಕಬೇಕಾಗಿ ಬಂದದ್ದೂ ಇರಬಹುದು. ಅದನ್ನು ಕೃಷ್ಣಶರ್ಮರ ಬಾಯಿಂದಲೇ ಕೇಳಬೇಕು. "ನನ್ನ ಜೀವನವನ್ನು ಒಂದು ಬಗೆಯ ಮಾನವತೆಯ ಪ್ರಜ್ಞೆಯ ಬೆಳಕಿನಲ್ಲಿ ಮೊದಲಿನಿಂದಲೂ ನಡೆಯಿಸಿಕೊಂಡು ಬಂದವಳು ನಮ್ಮ ತಾಯಿ ರಾಧಾಬಾಯಿ. ಅಂತಹ ತಾಯಿ ನನಗೆ ದೊರೆಯದೇ ಹೋಗಿದ್ದರೆ ನಾನು ನನ್ನ ಇಂದಿನ ಜೀವನದ ರೀತಿಯನ್ನು ಕಾಣದೆ ಇರಬಹುದಾಗಿತ್ತು. ಅವಳ ಜೀವನದ ಪ್ರಭೆಯ ಬೆಳಕಿನಲ್ಲಿಯೇ ನಾನು ನನ್ನ ಇಂದಿನ ಜೀವನವನ್ನು ಸಾಗಿಸುತ್ತ ಬಂದಿದ್ದೇನೆ."[೪]

ಆನಂದಕಂದರ ತಾಯಿ ರಾಧಾಬಾಯಿ ಅವರ ತವರು ಮನೆಯ ಹೆಸರು ತಾರಾಬಾಯಿ. ಕಂಕಣವಾಡಿ ಎಂಬ ದೇಸಗತಿಯ ಊರಿನವರು. ಆ ಊರಿನ ದೇಸಾಯರಿಗೆ ಮುತಾಲಿಕ ದೇಸಾಯರಾಗಿದ್ದ ಮನೆತನ ಅವರದು. ಕೊಲ್ಹಾಪುರ ಮಹಾರಾಜರು ಈ ದೇಸಗತಿಯನ್ನು ವಶಪಡಿಸಿಕೊಂಡದ್ದರಿಂದ ದೇಸಾಯರು ಹಾಗೂ ಮುತಾಲಿಕ ದೇಸಾಯರು ತಮ್ಮ ಸ್ಥಾನಮಾನಗಳನ್ನು ಕಳೆದುಕೊಂಡರು.

---

೪. ನನ್ನ ನೆನಪುಗಳು – ಆನಂದಕಂದ, ಪು. ೧

ಮುತಾಲಿಕ ದೇಸಾಯಿ ಮನೆತನದ ಹಿರಿಯರಾದ ನಾರಾಯಣರಾಯರ ಐದನೆಯ ಮಗಳು ರಾಧಾಬಾಯಿ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡದ್ದರಿಂದ ಈಕೆ ಕೊಳವಿ ಗ್ರಾಮದಲ್ಲಿದ್ದ ಸೋದರತ್ತೆಯ ಮನೆಯಲ್ಲಿ ಬೆಳೆದಳು. ಆ ಮನೆಯಲ್ಲಿ ತುಳಸಮ್ಮನೆಂಬ ಕುರುಡು ವಿಧವೆಯೊಬ್ಬಳಿದ್ದಳು. ಅವಳ ಪ್ರಭಾವದಿಂದ ಸಾಂಪ್ರದಾಯಿಕ ಹಾಡು, ಕವನ ಹಾಗೂ ವೈಷ್ಣವರ ಆಚಾರ ವಿಚಾರಗಳನ್ನು ರಾಧಾಬಾಯಿ ಕಲಿತುಕೊಂಡಿದ್ದಳು. ಅಕ್ಷರ ವಿದ್ಯೆ ಕಲಿಯದಿದ್ದರೂ ಅನೇಕ ಬಗೆಯ ಗೃಹಿಣಿ ಸಂಸ್ಕಾರಗಳನ್ನು ಪಡೆದಿದ್ದ ಇವಳು ತನ್ನ ವಯಸ್ಸಿನ ಮಲಮಕ್ಕಳಿರುವ ಮನೆಗೆ ಸೊಸೆಯಾಗಿ ಬಂದಳು. ತನಗಿಂತ ಹಿರಿಯಳಾದ ಮೈದುನನ ಹೆಂಡತಿಯ ಕೈಯೊಳಗೆ ಬಾಳಬೇಕಾಗಿ ಬಂದ ಈಕೆ ಮೊದಲ ಹೆಂಡತಿಯ ಮಕ್ಕಳನ್ನು ಮಲಮಕ್ಕಳಂತೆ ಕಾಣುತ್ತಿರಲಿಲ್ಲ. ಓರಗಿತ್ತಿಯ ಕಿರುಕುಳ ಇವಳ ಬದುಕನ್ನು ನರಕವಾಗಿಸಿತ್ತು. ಗಂಡನ ಪ್ರೀತಿಯೊಂದೇ ಅವಳಿಗೆ ಆಸರೆಯಾಗಿತ್ತು. ಮದುವೆಯಾಗಿ ಮೂರು-ನಾಲ್ಕು ವರ್ಷ ಮಕ್ಕಳಾಗದ್ದರಿಂದ ಬಂಜೆ ಎಂಬ ನಿಂದೆಯನ್ನೂ ಆಕೆ ಸಹಿಸಬೇಕಾಯಿತು. ಇಂಥ ಸನ್ನಿವೇಶದಲ್ಲಿ ಸರಾಸರಿ ಎರಡು ವರ್ಷಗಳಿಗೊಂದು ಹೆರಿಗೆಯಂತೆ ಹತ್ತು ಮಕ್ಕಳನ್ನು ಪಡೆದು ಮಕ್ಕಳ ಸುಖವನ್ನು ಅನುಭವಿಸುವಂತಾಯಿತು. ಅದರಲ್ಲಿ ಬದುಕಿ ಉಳಿದವರು ಎಂಟು ಜನ.

ಸಾಂಪ್ರದಾಯಿಕ ಭಾರತೀಯ ಗ್ರಾಮೀಣ ಮಹಿಳೆಯ ವಿಶಿಷ್ಟ ಮಾದರಿಯಾಗಿ ಆನಂದಕಂದರ ತಾಯಿ ರಾಧಾಬಾಯಿಯ ಅಪರೂಪದ ತಾಯ್ತನ ಶಿಕ್ಷಣ ಪಡೆಯದಿದ್ದರೂ ಧಾರ್ಮಿಕ, ಸಾಂಸ್ಕೃತಿಕ ಸಂಸ್ಕಾರಗಳನ್ನು ಮೈಗೂಡಿಸಿಕೊಳ್ಳುವ; ಸಾಮಾಜಿಕ, ಕೌಟುಂಬಿಕ ನೆಲೆಗಳಲ್ಲಿ ಮೌಲ್ಯಪ್ರಜ್ಞೆಯನ್ನು ರೂಢಿಸುವ; ಬದುಕನ್ನು ಎಲ್ಲ ಬಗೆಯ ತೊಡಕುಗಳೊಂದಿಗೆ ಎದುರಿಸುವ, ಸಹಿಸುವ ಅಪರೂಪದ ನಿದರ್ಶನವಿದು. ಧರ್ಮ, ಜಾತಿ, ವರ್ಗ, ವರ್ಣಗಳನ್ನು ಹಾಗೂ ಸ್ತ್ರೀ ಪುರುಷ ತರತಮಗಳನ್ನು ಮೀರಿದ ಮಾನವೀಯ ದುರಂತ ಹಾಗೂ ಮನುಷ್ಯ ಸಹಜವಾದ ಸಮಸ್ಯೆಗಳ ವಿಶಾಲ ವ್ಯಾಪ್ತಿಯಲ್ಲಿ ಗ್ರಹಿಸುವಾಗ ಇಂಥ ವ್ಯಕ್ತಿಗಳಿಗೆ ಒಂದು ಸಂಸ್ಕೃತಿಯ ಸತ್ವಶಾಲಿ ಮೌಲ್ಯಗಳ ಪ್ರಾತಿನಿಧಿಕ ಜೀವಂತಿಕೆ ಒದಗುತ್ತದೆ. ಇಂಥ ಸಂದರ್ಭಗಳಲ್ಲಿ ದೈವಿಕ ನಂಬಿಕೆ, ಆಚರಣೆಗಳು ಕೂಡ ಬದುಕಿನ ದುರಂತಗಳನ್ನು ಸಹಿಸಿಕೊಳ್ಳುವ ಶ್ರದ್ಧೆ ಶಕ್ತಿಯಾಗುತ್ತವೆ. ಆನಂದಕಂದರ ತಂದೆ-ತಾಯಿ ಇಬ್ಬರಲ್ಲೂ ಇಂಥ ಶ್ರದ್ಧೆಯ ತಳಹದಿಯಿದೆ. ತಾಯಿಯಲ್ಲಿ ಈ ಅಂಶ ಪರಾಕಾಷ್ಠೆ ತಲುಪಿದ್ದು, ಅದು ಆನಂದಕಂದರ ಬದುಕಿನ ಹಾಗೂ ಅಭಿವ್ಯಕ್ತಿಯ ಜೀವಸೆಲೆಯಾಗಿ ಹರಿದುಬಂದಂತಿದೆ.

ತಾಯಿಯ ಮನೆಯಲ್ಲಾಗಲೀ, ಗಂಡನ ಮನೆಯಲ್ಲಾಗಲಿ ಸರಳ ನೆಮ್ಮದಿಯ ಬದುಕನ್ನು ಪಡೆಯದ ರಾಧಾಬಾಯಿಗೆ ದೈವಭಕ್ತಿ, ಭಜನೆ ಹಾಗೂ ಕೀರ್ತನೆಯ

ಹಾಡುಗಳು ಆಪ್ಯಾಯಮಾನ್ಯವೆನಿಸಿದ್ದು ಸಹಜವೇ. ಆ ಕುರಿತು ಆನಂದಕಂದರ ನೆನಪುಗಳು ಹೀಗಿವೆ: "ಬೆಳಗಿನಲ್ಲಿ ಐದು ಗಂಟೆಯಷ್ಟೊತ್ತಿಗೆ ಎದ್ದವಳು ಗಜೇಂದ್ರಮೋಕ್ಷ, ಉದಯರಾಗ, ಅನೇಕ ದಾಸರ ಪದಗಳು, ಮನೆವಾರ್ತೆಯ ಹಾಡುಗಳು ಇವುಗಳಿಂದಲೇ ತನ್ನ ಜೀವನವನ್ನು ಮುಂದುವರೆಸುವಳು. ಮಧ್ಯಾಹ್ನದ ಸ್ನಾನವಾದ ನಂತರ ಮಡಿಯಿಂದ ದೇವರ ಪೆಟ್ಟಿಗೆಯನ್ನು ಒಂದು ಪೀಠದಲ್ಲಿಟ್ಟು ಪೂಜೆ, ಪ್ರದಕ್ಷಣೆ, ನಮಸ್ಕಾರಗಳನ್ನು ಸಲ್ಲಿಸುವಳು. ಆಗ ಅವಳು ಹೇಳುತ್ತಿದ್ದ ಕನ್ನಡ ಮಂತ್ರಗಳನ್ನು ಇತ್ತೀಚೆಗೆ ನಾನು ಎಲ್ಲಿಯೂ ಕೇಳಿಲ್ಲ. ನಮ್ಮ ತಾಯಿ ಹೇಳುತ್ತಿದ್ದ ಅನೇಕ ಹಾಡುಗಳೂ ಮಂತ್ರಗಳೂ ಅವಳ ಜೀವದೊಂದಿಗೆ ಮರೆಯಾದವು. ನನ್ನ ಹದಿನೆಂಟನೆಯ ವರ್ಷದವರೆಗೆ ಅವಳು ಬದುಕಿದ್ದಳಾದರೂ ಸಾವಿನ ನೆಲೆಯನ್ನರಿಯದ ನನಗೆ ಅವುಗಳನ್ನು ಬರೆದಿಟ್ಟುಕೊಳ್ಳಬೇಕೆಂಬ ಬುದ್ಧಿ ಬರಲಿಲ್ಲ. ಅವುಗಳ ಹಾನಿಯೆಂದರೆ ನಮ್ಮ ಸಾಹಿತ್ಯಕ್ಕೆ ಒದಗಿದ ಹಾನಿ."[೫] ಜನಪದ ಸಾಹಿತ್ಯ ಸಂಸ್ಕೃತಿಗಳ ವಿಷಯದಲ್ಲಿ ಇಂಥ ಹಾನಿ ಪ್ರತಿಯೊಂದು ಹಳ್ಳಿಯಲ್ಲೂ ಸಂಭವಿಸಿರುವುದಕ್ಕೆ ಇದೊಂದು ನಿದರ್ಶನ.

ಆರ್ಥಿಕ ಸ್ಥಿತಿ ತೃಪ್ತಿಕರವಲ್ಲದ ಕುಟುಂಬವೊಂದನ್ನು ತನ್ನ ಬಿಗಿ ಹಿಡಿತದಿಂದ ಕೊರತೆ ಕಾಣಿಸಿದ ಹಾಗೆ ನಿರ್ವಹಿಸಿಕೊಂಡು ಬಂದ ಹೆಗ್ಗಳಿಕೆ ರಾಧಾಬಾಯಿ ಯವರದು. ಹಬ್ಬ ಹರಿದಿನಗಳಲ್ಲಿ ಆಚರಣೆ–ಸಂಭ್ರಮಗಳಿಗೆ ಅವಕಾಶವಾಗುವಂತೆ, ವರ್ಷದುದ್ದಕ್ಕೂ ಮನೆಯಲ್ಲಿ ಹಾಲು–ಹೈನು ತಪ್ಪದಂತೆ ಮನೆ ನಡೆಸಿದ ತಾಯಿ ಕುರಿತು ಕವಿ ಹೃದಯ ತುಂಬಿ ನೆನೆಯುತ್ತಾರೆ. ನೊಂದ ಜೀವಗಳಲ್ಲಿಯೇ ಮಾನವೀಯತೆ ಕೊನರುವದು ವಿಶೇಷ ಸಂಗತಿ. ರಾಧಾಬಾಯಿಯವರು ತನ್ನ ಕಷ್ಟ ಕೋಟಲೆಗಳನ್ನು ಮೀರಿ ಪರರ ಹಿತಕ್ಕಾಗಿ ಹೆಣಗಾಡುವ ಪ್ರಸಂಗಗಳು ಅವರ ವ್ಯಕ್ತಿತ್ವದ ಘನತೆಗೆ, ಮಾನವೀಯ ಸ್ಪಂದನೆಗಳಿಗೆ ಸಾಕ್ಷಿಯಾಗಿವೆ. ಊರಲ್ಲಿದ್ದ ಪರಂಪರೆಯ ವೈದ್ಯ ಮನೆತನವೊಂದರ ಸಂಪರ್ಕದಲ್ಲಿ ತಾನು ಪಡೆದ ಅಲ್ಪ ಸ್ವಲ್ಪ ತಿಳಿವನ್ನು ಆಧರಿಸಿ ಅನೇಕ ಬಳಕೆಯ ರೋಗಗಳಿಗೆ ಔಷಧ ಕೊಡುವುದನ್ನು ರೂಢಿಸಿಕೊಂಡಿದ್ದ ಅವರು ಜಾತಿ ಮತ ಪಂಥಗಳ ಭೇದವಿಲ್ಲದೆ ರೋಗಿಗಳ ಮನೆಯವರೆಗೆ ಹೋಗಿ ಶುಶ್ರೂಷೆ ನಡೆಸುತ್ತಿದ್ದದ್ದು ಗಮನಾರ್ಹ. ಪರವೂರಿನ ಕೂಸೊಂದರ ಮಲಬದ್ಧತೆಯನ್ನು ಹೋಗಲಾಡಿಸಿದ ಸಂದರ್ಭದಲ್ಲಿ ಪೋಷಕರು ಕೇಳಿದಷ್ಟು ಹಣ ಕೊಡಲು ಸಿದ್ಧರಿದ್ದರೂ ಅದನ್ನೇನೂ ಅಪೇಕ್ಷಿಸದೆ ದೇವರ ಹರಕೆ ತೀರಿಸಲು ಐದ್ಹಾಣೆ ಮಾತ್ರ ಸ್ವೀಕರಿಸುವ ಅವರ ನಿಸ್ವಾರ್ಥ ಸೇವೆ ಹಳ್ಳಿಗರ ಮೆಚ್ಚುಗೆಗೆ ಪಾತ್ರವಾಗಿತ್ತು. ೧೯೧೯ ರಲ್ಲಿ ಭಾರತಾದ್ಯಂತ ಹಬ್ಬಿದ ಇನ್‌ಫ್ಲ್ಯೂಯೆಂಜಾ ಬೇನೆಗೆ ತುತ್ತಾದ ರೋಗಿಗಳನ್ನು ಉಪಚರಿಸಿ ಅನೇಕರ ಜೀವ ಉಳಿಸಿದ

೫. ನನ್ನ ನೆನಪುಗಳು – ಆನಂದಕಂದ, ಪು. ೩, ೪

ರಾಧಾಬಾಯಿಯವರು ಕೊನೆಗೆ ಇನ್‌ಫ್ಲ್ಯೂಯೆಂಜಾ ರೋಗಕ್ಕೆ ಬಲಿಯಾದದ್ದು ವಿಪರ್ಯಾಸವೇ ಸರಿ.

**೨. ಬಾಲ್ಯ, ವಿದ್ಯಾಭ್ಯಾಸ, ಆಸಕ್ತಿ, ಪ್ರೇರಣೆಗಳು :**

ಈ ನಾಲ್ಕು ಸಂಗತಿಗಳು ಒಂದರೊಳಗೊಂದು ಹೆಣೆದುಕೊಂಡಿದ್ದರಿಂದ ಹಾಗೂ ಪರಸ್ಪರ ಪೂರಕ ನೆಲೆಗಳಾಗಿರುವುದರಿಂದ ಅವುಗಳನ್ನು ಹಾಗೆಯೇ ಗುರುತಿಸುತ್ತ ವಿವರಿಸಲಾಗಿದೆ. ಇಂಥ ಮನೆತನದ ಹಿನ್ನೆಲೆ, ತಂದೆ-ತಾಯಿಯಗಳ ಸರಳ, ತ್ಯಾಗಮಯ ಬದುಕಿನ ಕೌಟುಂಬಿಕ ಪರಿಸರ, ಗ್ರಾಮೀಣ ಸಾಂಸ್ಕೃತಿಕ ಗಾಢಪ್ರಭಾವಗಳ ಹಿನ್ನೆಲೆಯಲ್ಲಿ ತಮ್ಮ ಬಾಲ್ಯವನ್ನು ಕಳೆದ ಆನಂದಕಂದರು ಅನೇಕ ಕುತ್ತುಗಳನ್ನು, ಸವಾಲುಗಳನ್ನು ಎದುರಿಸುತ್ತಲೇ ತಮ್ಮ ಕ್ರಿಯಾಶೀಲ ಹಾಗೂ ಸೃಜನಶೀಲ ನೆಲೆಗಳನ್ನು ರೂಪಿಸಿಕೊಂಡರು.

ಆನಂದಕಂದರಿಗೆ ಹುಟ್ಟಿದಾಗ ಇಟ್ಟ ಹೆಸರು ಕೃಷ್ಣ ಮನೆಯವರೆಲ್ಲ ಕರೆಯುತ್ತಿದ್ದ ಹೆಸರು ಈಶ. ಜ್ಯೋತಿಷ್ಯವನ್ನು ಬಲ್ಲ ತಂದೆ 'ಕೃಷ್ಣ ಕೀರ್ತಿಶಾಲಿಯಾಗುತ್ತಾನೆ' ಎಂಬ ಭವಿಷ್ಯ ನುಡಿದಿದ್ದರೆ, 'ಹತ್ತರ ಜೊತೆ ಹನ್ನೊಂದನೆಯವ'ನೆಂಬುದು ತಾಯಿಯ ವಾಸ್ತವ ದೃಷ್ಟಿ. ಆನಂದಕಂದರ ಆಪತ್‌ಪರಂಪರೆಗಳ ಸರಣಿ ಎರಡು ವರ್ಷದಿಂದಲೇ ಆರಂಭವಾಗುತ್ತದೆ. ಅಣ್ಣನ ಮಗಳು ಎಂಟು ವರ್ಷದ ಆಯಿಲಿ ಎರಡು ವರ್ಷದ ಈಶನನ್ನು ಎತ್ತಿಕೊಂಡು ಬಚ್ಚಲ ಗುಂಡಿಯಲ್ಲಿ ಬಿದ್ದುಬಿಡುತ್ತಾಳೆ. ಆಯಿಲಿ ಮೇಲೆದ್ದು ಹೊರಗೆ ಬಂದರೆ ಕೊಳಕಿನಲ್ಲಿ ಮುಳುಗಿ ಕೈಗೆ ಸಿಗದ ಈಶನನ್ನು ಸಾಕಷ್ಟು ಹುಡುಕಾಟದ ನಂತರ ಕಾಲ್ಗಡಗ ಕೈಗೆ ಹತ್ತುವ ಮೂಲಕ ಪತ್ತೆ ಮಾಡಲಾಗುತ್ತದೆ. ಬಚ್ಚಲಿನ ಕಪ್ಪು ಕೊಚ್ಚೆ ಗಂಟಲೊಳಗೂ ಸೇರಿ ಕೃಷ್ಣನ ಉಸಿರು ಕಟ್ಟಿಹೋಗಿ ಎಲ್ಲರೂ ಉಸಿರು ಬಿಗಿಹಿಡಿದು ಕುಂತ ಸಂದರ್ಭ ಸೃಷ್ಟಿಯಾಗಿತ್ತು. ಪವಾಡ ಸದೃಶ್ಯವಾಗಿ ಬದುಕಿ ಉಳಿದ ಈಶನಿಗೆ ಹಲವು ದಿನ ವಾಂತಿಭೇದಿಯಲ್ಲೂ ಕೊಚ್ಚೆಯೇ ಬರುತ್ತಿತ್ತಂತೆ! ಈಶ ಹದಿನಾಲ್ಕು ವರ್ಷದವನಾದಾಗ ತೀವ್ರವಾದ ವಿಷಮಶೀತಜ್ವರಕ್ಕೆ ತುತ್ತಾಗಿ ಸಾವು ಬದುಕಿನ ಹೋರಾಟ ನಡೆಸಬೇಕಾಯಿತು. ಅದರ ಮುರುವರ್ಷವೇ ಪ್ಲೇಗಿಗೆ ಬಲಿಯಾದ ಈಶ ಮೂಡಲಗಿಯ ರಂಗಬೋಧಸ್ವಾಮಿಗಳ ಕೃಪಾಶೀರ್ವಾದದಿಂದ ಬದುಕಿ ಉಳಿದದ್ದು ಮತ್ತೊಂದು ಪವಾಡವೇ. ಹೀಗೆ ಬಾಲಕ ಕೃಷ್ಣನ ಜೀವಜ್ಯೋತಿಗೆ ಹತ್ತು ಹಲವು ಸಲ ಪ್ರಾಣಾಂತಿಕವಾದ ಆಪತ್ತಿನ ಬಿರುಗಾಳಿ ಜೋರಾಗಿ ಬೀಸುತಿತ್ತು. ಇನ್ನೇನು ದೀಪ ನಂದಿ ಹೋಯಿತೇನೋ ಎಂಬ ಆಂತಕದಲ್ಲಿರುವಾಗಲೆ ಆ ಜೀವನ ಜ್ಯೋತಿ ಮತ್ತೆ ಮಿಣುಗುತ್ತ ತನ್ನ ಅಸ್ತಿತ್ವವನ್ನು ತೋರಿ ಹಡೆದವರಿಗೆ ಸಂತಸವನ್ನು ತರುತಿತ್ತು.

ಸಾಕಷ್ಟು ಭೂಮಿ, ಒಂದು ಊರಿನ ಶಾನುಭೋಗ ಹುದ್ದೆ ಇದ್ದಾಗಲೂ ಕುಟುಂಬವು ಸುಸೂತ್ರವಾಗಿತ್ತು ಎಂದು ಹೇಳುವಂತಿರಲಿಲ್ಲ. ಅವಿಭಕ್ತ ಕುಟುಂಬದ ಆಂತರಿಕ ತೊಡಕುಗಳು, ಆರ್ಥಿಕ ಮುಗ್ಗಟ್ಟುಗಳು ಮಕ್ಕಳ ಶಿಕ್ಷಣದ ಮೇಲೆ ನೇರ ಪ್ರಭಾವ ಬೀರುವಂತಿದ್ದವು. ಇಂಥ ವಾತಾವರಣದಲ್ಲಿ ತಮ್ಮ ವೈಯಕ್ತಿಕ ಆರೋಗ್ಯದ ಏಳು ಬೀಳುಗಳ ನಡುವೆ ಆನಂದಕಂದರು ಶಾಲಾ ಶಿಕ್ಷಣ ಪಡೆಯಬೇಕಾಯಿತು. ವಿಧಿ, ಪರಿಸ್ಥಿತಿಯ ಒತ್ತಡ ಹಾಗೂ ಸ್ವಪ್ರಯತ್ನದ ಪೌರುಷದ ಮಾರ್ಗ– ಈ ಮೂರನ್ನೂ ಅವಲಂಬಿಸಿದ ಅವರ ಬಾಲ್ಯ ಅವರ ಒಟ್ಟು ಬದುಕಿನ ಮುನ್ಸೂಚನೆಯಂತಿತ್ತು.

'ಹಲ್ಲು ಇದ್ದಾಗ ಕಡಲೆ ಇಲ್ಲ, ಕಡಲೆ ಇದ್ದಾಗ ಹಲ್ಲು ಇಲ್ಲ'ಎಂಬ ಗಾದೆಮಾತೊಂದಿದೆ. ಬೆಟಗೇರಿ ಕೃಷ್ಣಶರ್ಮರು ಕಲಿಯುವ ಸಂದರ್ಭಕ್ಕೆ ಈ ಮಾತು ಅನ್ವಯಿಸುತ್ತದೆ. ಇಂದು ಶಿಕ್ಷಣ ಕುರಿತು ಜಾಗೃತಿ, ಅಭಿಯಾನಗಳೊಂದಿಗೆ ಸರಕಾರದಿಂದ ಕೋಟ್ಯಾಂತರ ರೂಪಾಯಿಗಳ ಅನುದಾನ ಬಿಡುಗಡೆಯಾಗುತ್ತಿದೆ. ಆದರೆ ಕೃಷ್ಣಶರ್ಮರು ಕಲಿಯುವ ಕಾಲದ ಸ್ಥಿತಿಯೇ ಬೇರೆಯಾಗಿತ್ತು. ಶಾಲೆಗಳು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದವು. ಹೆಸರಿಗೆ ಊರಿನ ಶಾನಭೋಗಿಕೆ ಇದ್ದರೂ ಬಡತನ ಬಿಡದೆ ಬೆನ್ನುಹತ್ತಿ ಕಾಡುತಿತ್ತು. ತಂದೆಯವರಿಗೆ ವಯಸ್ಸಾಗಿತ್ತು. ದೇವರಿದ್ದಾನೆಂಬ ಆಶಾವಾದದ ಮಾತೊಂದೇ ಅವರಿಗೆ ಆಸರೆಯಾಗಿತ್ತು. ಅಣ್ಣಂದಿರು ತಮ್ಮಂದಿರ ಶಿಕ್ಷಣದ ಬಗ್ಗೆ, ಮನೆತನದ ನಿರ್ವಹಣೆಯ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದರು. ಇಂತಹ ನಿರುತ್ತೇಜಕ ವಾತಾವರಣದಲ್ಲಿ ತಮ್ಮ ಪ್ರತಿಭೆ ಮತ್ತು ಯೋಗ್ಯತೆಗೆ ತಕ್ಕಂತಹ ಶಿಕ್ಷಣವನ್ನು ಅವರಿಗೆ ಪಡೆಯಲು ಸಾಧ್ಯವಾಗಲೇ ಇಲ್ಲ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ 'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಮಾತಿನಂತೆ ಶಾಲೆಯಲ್ಲಿ ಕಲಿತದ್ದು ಕಡಿಮೆಯಾದರೂ, ಜೀವನದ ಪಾಠಶಾಲೆಯಲ್ಲಿ ಕಲಿತು, ತಾವು ಕಲಿತದ್ದನ್ನು ಇನ್ನೊಬ್ಬರಿಗೆ ಕಲಿಸುವ ಮೂಲಕ ಬೆಟಗೇರಿ ಕೃಷ್ಣಶರ್ಮರು ಲೋಕಶಿಕ್ಷಕರಾದರು. ಆ ಕಾಲಕ್ಕೆ ಕೃಷ್ಣಶರ್ಮರು ಉನ್ನತ ಶಿಕ್ಷಣವನ್ನು ಪಡೆದು ಅವರ ವಿದ್ವತ್ತನ್ನು ದುಡಿಸಿಕೊಂಡಿದ್ದರೆ, ಕನ್ನಡ ನಾಡು ಅವರನ್ನು ಒಬ್ಬ ಮಹಾನ್ ಸಾಂಸ್ಕೃತಿಕ ಚಿಂತಕನನ್ನಾಗಿ ಗೌರವಿಸುವ ಎಲ್ಲ ಸಾಧ್ಯತೆ ಇತ್ತು. ಆದರೆ ಅವರಿಗೆ ಅಂಥ ಯೋಗ ಕೂಡಿ ಬರಲಿಲ್ಲ.

ಬೆಟಗೇರಿಯಲ್ಲಿ ಆಗ ನಾಲ್ಕನೆಯ ಇಯತ್ತೆಯವರೆಗೆ ಮಾತ್ರ ಇದ್ದ ಒಂದು ಕನ್ನಡ ಶಾಲೆ ಇತ್ತು. ಆನಂದಕಂದರ ಅಣ್ಣ ಬಲರಾಮ ನಾಲ್ಕನೆಯ ಇಯತ್ತೆ ವರೆಗೆ ಓದಿ ಮುಂದಿನ ಶಿಕ್ಷಣ ಮುಂದುವರೆಸಲಾಗದೆ ಮನೆಯ ದನಗಳನ್ನು ಮೇಯಿಸುವ ಕೆಲಸಕ್ಕೆ ತೊಡಗಿದ್ದ. ಇದೇ ಗತಿಗೆ ತಿರುಗಬೇಕಿದ್ದ ಆನಂದಕಂದ ಅವರು ನಾಲ್ಕನೆಯ ಇಯತ್ತೆ ಮುಗಿಸಿದ ವರ್ಷವೇ ಅಲ್ಲಿನ ಶಾಲೆಯಲ್ಲಿ ಐದನೆಯ

ಇಯತ್ತೆ ಆರಂಭಿಸಿದ್ದರಿಂದ ಮತ್ತೊಂದು ವರ್ಷ ಅವರ ಶಿಕ್ಷಣ ಮುಂದುವರೆ ದಂತಾಯಿತು. ಬಲರಾಮಣ್ಣನೂ ಇವರ ಜತೆಗೆ ಐದನೆಯ ಇಯತ್ತೆ ಮುಗಿಸಿಕೊಂಡ. ಇಬ್ಬರು ಸೋದರರಲ್ಲೂ ವಿಶೇಷ ಬುದ್ಧಿವಂತಿಕೆ ಇತ್ತು. ಇದನ್ನು ಗಮನಿಸಿದ, ಆ ವರ್ಷ ಅವರ ತರಗತಿಯ ಪರೀಕ್ಷೆ ತೆಗೆದುಕೊಳ್ಳಲು ಬಂದಿದ್ದ ಶಿಕ್ಷಣಾಧಿಕಾರಿಗಳಾದ ಗೋವಿಂದ ವೆಂಕಟೇಶ ದೇಶಪಾಂಡೆ ಎಂಬುವರು ತಂದೆ ಶ್ರೀನಿವಾಸರಾಯರನ್ನು ಕರೆಸಿ ಈ ಹುಡುಗರ ಭವಿಷ್ಯ ಕುರಿತು ಮಾತನಾಡುತ್ತಾರೆ. 'ನಿಮ್ಮ ಮಕ್ಕಳು ಬಹಳ ಬುದ್ಧಿವಂತರಿದ್ದಾರೆ. ಇವರನ್ನು ಇಲ್ಲಿಯೇ ಕೊಳೆಸಬೇಡಿರಿ. ಯೋಗ್ಯ ಇಂಗ್ಲೀಷ ಶಿಕ್ಷಣ ಕೊಡಿಸಿರಿ' ಎಂದು ಸಲಹೆ ನೀಡುತ್ತಾರೆ. ತಂದೆಯ ಮನಸ್ಸಿಗೆ ಇದು ಸಂಪೂರ್ಣ ಒಪ್ಪಿಗೆಯಿದ್ದರೂ ಮನೆತನದ ಆಗಿನ ಪರಿಸ್ಥಿತಿ ಅನುಕೂಲಕರವಾಗಿರಲಿಲ್ಲ. ತಮ್ಮ ಅಸಹಾಯಕತೆಗೆ ನೊಂದುಕೊಂಡು ಶ್ರೀನಿವಾಸರಾಯರು ಸುಮ್ಮನಾಗುತ್ತಾರೆ. ಅದೇ ವರ್ಷ ಸಾಲಮಾಡಿ ತಿರುಪತಿಗೆ ಹೋದ ಶ್ರೀನಿವಾಸರಾಯರು ಅಲ್ಲಿಯೇ ವಿಧಿವಶರಾಗುತ್ತಾರೆ. ಇಂಥ ಪರಿಸ್ಥಿತಿಯಲ್ಲೂ ಧೃತಿಗೆಡದ ಸೋದರರು ಐದು ಮೈಲು ದೂರದ ಮಮದಾಪುರಕ್ಕೆ ಕಾಲ್ನಡಿಗೆಯಿಂದ ಓಡಾಡಿ ಮುಲ್ಕಿ ಪರೀಕ್ಷೆಗಾಗಿ ಅಭ್ಯಾಸ ಮಾಡುತ್ತಾರೆ. ೧೯೧೦ರಲ್ಲಿ ಬೆಳಗಾವಿಗೆ ಹೋಗಿ ಪರೀಕ್ಷೆ ಬರೆದು ಮುಲ್ಕಿ ಪರೀಕ್ಷೆ ಪಾಸು ಮಾಡಿಕೊಳ್ಳುತ್ತಾರೆ.

ಇಬ್ಬರು ಸಹೋದರರೂ ಬೆಟಗೇರಿಯಲ್ಲಿ ಐದನೆಯ ಇಯತ್ತೆಯವರೆಗೆ ಓದುವ ಸಂದರ್ಭದಲ್ಲಿ ಅವರ ತಂದೆ ತಾಯಿ ಹಾಗೂ ಬಹುತೇಕ ಕುಟುಂಬ ನೆಲೆಸಿದ್ದು ಬಗರನಾಳದಲ್ಲಿ. ಮಲ ಅಣ್ಣ ರಾಘವೇಂದ್ರರಾಯನ ಕುಟುಂಬ ಮಾತ್ರ ಬೆಟಗೇರಿಯಲ್ಲಿದ್ದು, ಅವರೊಂದಿಗೆ ಈ ಸಹೋದರರು ಉಳಿದುಕೊಂಡಿದ್ದರು. ಈ ರಾಘವೇಂದ್ರರಾಯನ ಸ್ವಾರ್ಥ ಹಾಗೂ ಖಯಾಲಿಗಳ ಕುರಿತು ಆನಂದಕಂದರು ತಮ್ಮ ನೆನಪುಗಳಲ್ಲಿ ರೋಚಕವಾಗಿ ದಾಖಲಿಸಿದ್ದಾರೆ. ಇನ್ನೊಬ್ಬ ಮಲ ಅಣ್ಣ ಉಡುಪಿರಾಯ ಮ್ಯಾಟ್ರಿಕ್‌ವರೆಗೆ ಓದಿ ಕೆಲಸ ಸಿಗದೆ ತಂದೆಯ ಕುಲಕರ್ಣಿಕೆಯನ್ನು ತಾನೇ ವಹಿಸಿಕೊಂಡು ನಿರ್ವಹಿಸುತ್ತಿದ್ದ, ಅವನಿಗೆ ತಾನು ಇಂಗ್ಲೀಷ ಓದಿದವನೆಂಬ ಪ್ರತಿಷ್ಠೆ ಬೇರೆ. ಅದಕ್ಕೆ ತಕ್ಕಂತೆ ತಾಳ ಹಾಕಿ ತನ್ನ ಸ್ವಾರ್ಥ ಸಾಧನೆಯ ನಾಟಕಕ್ಕೆ ಬಳಸಿಕೊಳ್ಳುತ್ತಿದ್ದ ಅವನ ಹೆಂಡತಿ ಶ್ರೀಮಂತರ ಮನೆಯಿಂದ ಬಂದವಳಾಗಿದ್ದಳು. ಮೇಲೆ ಒಂದೇ ಕುಟುಂಬವಾಗಿ ಬದುಕುತ್ತಿದ್ದರೂ ಒಳಗೊಳಗೆ ಸಂಬಂಧಗಳೆಲ್ಲ ಶಿಥಿಲಗೊಂಡಿದ್ದವು. ಅವಿಭಕ್ತ ಕುಟುಂಬಗಳ ವಿಘಟನೆಯ ಮಾದರಿಯಾಗಿ ಈ ಮನೆತನದ ಆಗು ಹೋಗುಗಳನ್ನು ಗಮನಿಸಬಹುದು.

ಆನಂದಕಂದರು ಪ್ರಾಥಮಿಕ ಶಿಕ್ಷಣ ಪಡೆಯುವಾಗಿನ ಕೆಲವು ವಿವರಗಳು ಎಳೆಯ ವಯಸ್ಸಿನಲ್ಲಿಯೇ ಅವರು ಎಂತಹ ಪ್ರತಿಭಾಶಾಲಿಯಾಗಿದ್ದರು, ಆಗಿನ ಶಿಕ್ಷಣ

ಮೇಲೆ ಬೆಳಕು ಚೆಲ್ಲುವಂತಿವೆ. ವರ್ಣಮಾಲೆ, ಅಂಕಿಮಗ್ಗಿಗಳನ್ನು ಒಂದೆರಡೇ ದಿನಗಳಲ್ಲಿ ಸಮರ್ಥವಾಗಿ ಕಲಿತು ಒಪ್ಪಿಸಿದ ಆನಂದಕಂದರ ಬುದ್ಧಿಶಕ್ತಿಯನ್ನು ಮೆಚ್ಚಿಕೊಂಡ ಶಿಕ್ಷಕರು, ಶಿಕ್ಷಣಾಧಿಕಾರಿಗಳು ನೇರವಾಗಿ ಒಂದು ವರ್ಷ ಮುಂದಿನ ಕ್ಲಾಸಿಗೆ ಸೇರಿಸುತ್ತಾರೆ. ನಾಲ್ಕು ತರಗತಿಗಳಿಗೆಲ್ಲ ಕಲಿಸುತ್ತಿದ್ದ ಏಕಮಾತ್ರ ಮಾಸ್ತರರಾದ ವೆಂಕಣ್ಣ ಮಾಸ್ತರರನ್ನು ಕುರಿತ ವಿವರಗಳು ಆನಂದಕಂದರು ಬಾಲ್ಯದಲ್ಲಿಯೇ ಎಷ್ಟು ಸೂಕ್ಷ್ಮ ಸಂವೇದನಾಶೀಲರಾಗಿ ಸಂದರ್ಭಗಳನ್ನು ಗ್ರಹಿಸಬಲ್ಲವರಾಗಿ ದ್ದರೆಂಬುದಕ್ಕೆ ನಿದರ್ಶನವಾಗಿವೆ. 'ಬಾಲಬೋಧಿನಿ'ಯ ರ ಠ ಈ ಕ ಪದ್ಧತಿ, ಅಲ್ಲಿನ ವರ್ಣ ಚಿತ್ರಗಳು, ಕವಿತೆಗಳು ಆನಂದಕಂದರನ್ನು ತುಂಬಾ ಆಕರ್ಷಿಸಿದ್ದವು. ಒಂದೇ ದಿನದಲ್ಲಿ ಅವನ್ನೆಲ್ಲ ಓದಿ ಮುಗಿಸಿದ್ದ ಆನಂದಕಂದರು ಶಿಕ್ಷಣಾಧಿಕಾರಿಗಳು ಬಂದಾಗ ಒಪ್ಪಿಸಿದ್ದರಿಂದ ಮತ್ತೆ ಒಂದನೆಯ ಕ್ಲಾಸಿಗೆ ಬಡ್ತಿ ಪಡೆದುಕೊಳ್ಳುತ್ತಾರೆ. ಈ ರೀತಿಯ ವಿಶೇಷ ಆಸಕ್ತಿ ಶ್ರದ್ಧೆಗಳಿಂದ ಐದನೆಯ ಕ್ಲಾಸಿನವರೆಗೆ ಓದಿದ ಆನಂದಕಂದರು ವೆಂಕಟೇಶ ದೇಶಪಾಂಡೆ ಅವರಿಂದ ಮೆಚ್ಚುಗೆಯ ಪುಸ್ತಕ ಕಾಣಿಕೆ ಪಡೆದಿದ್ದರು. ಮುಂದಿನ ಶಿಕ್ಷಣ ಕುರಿತು ಪ್ರೋತ್ಸಾಹದ ಮಾತುಗಳನ್ನು ಕೇಳಿದ್ದರು. ಆದರೂ ಶಿಕ್ಷಣ ಮುಂದುವರೆಸಲು ಸಾಧ್ಯವಾಗದ ಅಸಹಾಯಕತೆಯ ನೋವನ್ನು ಅವರು ಹೀಗೆ ತೋಡಿಕೊಂಡಿದ್ದಾರೆ. "ಐದನೆಯ ತರಗತಿಯಲ್ಲಿ ಪಾಸಾದ ನಮಗೆ ಎಲ್ಲಿಗೆ ಹೋಗಬೇಕು ಎನ್ನುವ ಪ್ರಶ್ನೆ ಎದುರಾಯಿತು. ಆಗ ಗೋಕಾಕದಂತಹ ಪಟ್ಟಣದಲ್ಲಿ ಕೂಡ ಒಂದು ಹೈಸ್ಕೂಲು ಇರಲಿಲ್ಲ. ಇಂಗ್ಲೀಷ್ ಕಲಿಯಲು ನಾವು ಬೆಳಗಾವಿಗೇ ಹೋಗಬೇಕಾಗಿತ್ತು. ಆದರೆ ಬೆಳಗಾವಿಯಲ್ಲಿ ಇಟ್ಟು ಕಲಿಸುವುದಕ್ಕೆ ತಕ್ಕಂತಹ ಆರ್ಥಿಕ ಸ್ಥಿತಿ ನಮಗೆಲ್ಲಿಯದು? ತಂದೆ ವೃದ್ಧರು, ಮೇಲಾಗಿ ವಿರಕ್ತ ಸ್ವಭಾವದವರು. ಹಿರಿಯಣ್ಣನಾದ ರಾಘಣ್ಣನು ಯಾವ ಚಿಂತೆಯನ್ನೂ ಮಾಡದವನು. ಇನ್ನು ಮನೆಯ ಹಿರಿಯತನ ನಿರ್ವಹಿಸುತ್ತಿದ್ದ ಉಡುಪಣ್ಣನ ಮನೋಭಾವದ ಬಗ್ಗೆ ಈಗಾಗಲೇ ಹೇಳಲಾಗಿದೆ. ಅವನು ಯಾವುದನ್ನೂ ಹಚ್ಚಿಕೊಳ್ಳದೆ ಉದಾಸೀನನಾಗಿದ್ದನು. ಹೀಗಿರುವಾಗ ಮುಂದಿನ ಶಿಕ್ಷಣಕ್ಕೆ ನಮಗೆಲ್ಲಿಯ ದಾರಿ? ನಾವು ನಿರ್ವಾಹವಿಲ್ಲದೆ ಮನೆಯಲ್ಲಿಯೇ ಉಳಿದುಬಿಟ್ಟೆವು. ಆಗ ಸುಮ್ಮನೆ ಕೂಡುವುದೇಕೆಂದು ನಮ್ಮ ಮನೆಯಲ್ಲಿಯ ಹಿಂಡುವ ದನಗಳನ್ನು ಮೇಯಿಸಿಕೊಂಡು ಬರುತ್ತಿದ್ದೆವು. ಆಗ ಮನೆಯಲ್ಲಿ ಯಾರೂ ತಾಟುಗಳಲ್ಲಿ ಊಟ ಮಾಡುತ್ತಿರಲಿಲ್ಲ. ನಾವು ಎಲೆಯಲ್ಲಿಯೇ ಊಟ ಮಾಡಬೇಕೆನ್ನುವ ಸಂಪ್ರದಾಯವಿದ್ದಿತು. ಇನ್ನೂ ಅದನ್ನು ಮೀರಿರಲಿಲ್ಲ. ಇವೆಲ್ಲ ಮನೆಗೆಲಸಗಳಲ್ಲಿ ಮುಂದೆ ನಾವೇನು ಮಾಡಬೇಕೆನ್ನುವುದು ಗೊತ್ತಿದ್ದರೂ ನಿರ್ವಾಹವಿಲ್ಲದೆ ಅದನ್ನು ಮರೆತು ಮನೆಗೆಲಸದಲ್ಲಿ ದಿನಗಳನ್ನು ನೂಕುತ್ತಿದ್ದೆವು."[೬]

---

೬. ನನ್ನ ನೆನಪುಗಳು – ಆನಂದಕಂದ, ಪು. ೩೯

ಶಿಕ್ಷಣವನ್ನು ಮುಂದುವರೆಸುವ ಮತ್ತೊಂದು ಸಂದರ್ಭ ಇದ್ದಕ್ಕಿದ್ದಂತೆ ಒದಗಿ ಬಂದು, ಅಷ್ಟೇ ಬೇಗ ಕಮರಿ ಹೋದದ್ದು ಧಾರವಾಡದಲ್ಲಿ ನಡೆಯುತ್ತದೆ. ಕೊಲ್ಹಾಪುರದಲ್ಲಿ ಗಂಡನನ್ನು ಕಳೆದುಕೊಂಡು ಧಾರವಾಡದಲ್ಲಿ ಬಂದು ನೆಲೆಸಿ ಊಟದ ಮನೆ ನಡೆಸುತ್ತಿದ್ದ ಆನಂದಕಂದರ ತಾಯಿಯ ಅಕ್ಕ ಅಂದರೆ ದೊಡ್ಡಮ್ಮ ಅನಿರೀಕ್ಷಿತವಾಗಿ ಹಿರಿಯಣ್ಣ ಹನುಮಣ್ಣನಿಂದ ಪರಿಚಯವಾಗುತ್ತಾಳೆ. ತನಗೆ ಯಾರೂ ಇಲ್ಲವೆಂದೂ ಮಕ್ಕಳು ಇಲ್ಲಿ ಬಂದು ಶಿಕ್ಷಣ ಪಡೆಯಬಹುದೆಂದೂ ಹೇಳಿಕೊಂಡ ದೊಡ್ಡಮ್ಮನ ಮಾತಿನಂತೆ ಆನಂದಕಂದರು ಟ್ರೇನಿಂಗ್ ಕಾಲೇಜಿನ ಪ್ರ್ಯಾಕ್ಟೀಸಿಂಗ್ ಸ್ಕೂಲಿನಲ್ಲಿ ಆರನೆಯ ಇಯತ್ತೆಗೆ ಹೆಸರು ಹಚ್ಚಲಾಗುತ್ತದೆ. ಆರಂಭದಲ್ಲಿ ಪ್ರೀತಿಯಿಂದ ನೋಡಿಕೊಂಡ ದೊಡ್ಡಮ್ಮ ಕೆಲವೇ ದಿನಗಳಲ್ಲಿ ಬೇಸರಗೊಂಡದ್ದರಿಂದ ಬಹುಬೇಗನೆ ಇವರು ಮರಳಿ ಊರಿಗೆ ಬರಬೇಕಾಯಿತು. ಈ ಎಲ್ಲ ವಿಫಲ ಪ್ರಯತ್ನಗಳ ನಂತರವೇ ಹಲವಾರು ವರ್ಷಗಳಾದ ಮೇಲೆ ಆನಂದಕಂದರು ಮುಲ್ಕೀ ಪರೀಕ್ಷೆ ಮುಗಿಸಿಕೊಂಡದ್ದು.

ಪ್ರಾಥಮಿಕ ಹಂತದಲ್ಲಿ ಉನ್ನತ ಪ್ರತಿಭೆಯನ್ನು ತೋರಿಸಿಯೂ ಶಿಕ್ಷಣವನ್ನು ಮುಂದುವರಿಸಲಾರದ ಗ್ರಾಮೀಣ ಮಕ್ಕಳು ಬೆಳೆಯುತ್ತ ಆ ಪ್ರತಿಭೆಯನ್ನು ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರದರ್ಶಿಸಿದ ಉದಾಹರಣೆಗಳು ಬೇಕಾದಷ್ಟಿವೆ. ಇನ್ನೊಂದು ಕಡೆಗೆ ಅತ್ಯಂತ ಸಾಮಾನ್ಯರಾಗಿದ್ದು ಕೇವಲ ಅವಕಾಶ ಹಾಗೂ ಅನುಕೂಲಗಳ ಮೂಲಕವೇ ಉನ್ನತ ಶಿಕ್ಷಣದವರೆಗೆ ಅಧ್ಯಯನ ಕೈಕೊಂಡು ಯಾವುದೇ ವೃತ್ತಿಯಲ್ಲಿ ನಿರತರಾಗುವವರು, ಬೇಕಾದಷ್ಟು ಸೌಕರ್ಯಗಳಿಂದ ಕೂಡಿದ ಉನ್ನತ ಜೀವನಮಟ್ಟವನ್ನು ಪಡೆದಿದ್ದರೂ ಅವರಿಂದ ಸಮಾಜ, ಸಂಸ್ಕೃತಿಗಳಿಗೆ ಯಾವುದೇ ಕೊಡುಗೆ ನೀಡಲು ಸಾಧ್ಯವಾಗುವುದಿಲ್ಲ. ಸಾಂಪ್ರದಾಯಿಕ ಶಿಕ್ಷಣ ಪಡೆಯದ ಅನಾಮಿಕ ಪ್ರತಿಭಾವಂತರಿಂದಲೇ ಅಲ್ಲವೇ ಜನಪದ ಸಾಹಿತ್ಯ ಕಲೆಗಳು ನಿರ್ಮಾಣಗೊಂಡು, ಜೀವಂತವಾಗಿ ಉಳಿದುಕೊಂಡು ಬಂದದ್ದೂ! 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬ ಪರಂಪರಾಗತ ಕೀರ್ತಿಗೆ ಪಾತ್ರವಾದ ಕನ್ನಡ ಸಮುದಾಯ ಈ ಬಗೆಯದು. ಆಧುನಿಕ ಕಾಲಕ್ಕೆ ಬಂದಾಗ ಪ್ರಾಥಮಿಕ ಶಿಕ್ಷಣವನ್ನಷ್ಟೇ ಪಡೆದ ಅನೇಕರು, ಸ್ನಾತಕೋತ್ತರ ಪದವೀದರರು, ಪದವಿಗಾಗಿ ಸಂಶೋಧನೆ ನಡೆಸುವವರಿಗಿಂತ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉನ್ನತ ಸಾಧನೆಗೈದಿರುವ ಸಾಕಷ್ಟು ಉದಾಹರಣೆಗಳಿವೆ. ಜಾನಪದ ಸಾಹಿತಿಗಳಂತೆ ಅನಾಮಿಕರಾಗಿ ಉಳಿಯದೆ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಹೆಸರಾಂತರೆನಿಸಿರುವುದು ಆಧುನಿಕ ಕಾಲದಲ್ಲಿ ಸಾಧ್ಯವಾಗಿದೆ. ಮಧುರಚೆನ್ನ, ಶಂಬಾ ಜೋಶಿ, ಆನಂದಕಂದ ಮೊದಲಾದವರು ಇದಕ್ಕೆ ನಿದರ್ಶನ ಎನ್ನಬಹುದು. ಪ್ರತಿಭಾವಂತರಿಗೆ, ಕಲಿಯುವ ಆಸಕ್ತಿ ಇರುವವರಿಗೆ ಸಾಂಪ್ರದಾಯಿಕ ಶಿಕ್ಷಣವೇ

ಆಗಬೇಕಿಲ್ಲ. ಜೀವನದ ಪ್ರತಿ ಸಂದರ್ಭ, ಸಂಗತಿಗಳಿಂದಲೂ ಅವರು ಕಲಿಯುತ್ತಾರೆ. ತಮ್ಮ ವಿಶಿಷ್ಟ ಒಳನೋಟಗಳಿಂದ ಅವುಗಳಿಗೆ ಕಲಾತ್ಮಕ ಮೆರುಗನ್ನು ನೀಡುತ್ತಾರೆ. ಆನಂದಕಂದರು ನಿಸ್ಸಂದೇಹವಾಗಿ ಈ ಗುಂಪಿಗೆ ಸೇರಿದವರು. ಅವರು ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಲೋಕದಿಂದ ಪಡೆದ ಶಿಕ್ಷಣ ಹಾಗೂ ಮೈಗೂಡಿಸಿ ಕೊಂಡ ಸೃಜನಶೀಲ ವ್ಯಕ್ತಿತ್ವಕ್ಕೆ ಅವರಲ್ಲಿ ಬಾಲ್ಯದಲ್ಲಿಯೇ ಜಾಗೃತವಾಗಿದ್ದ ವಿಶೇಷ ತುಡಿತಗಳನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಆನಂದಕಂದರ ಬಾಲ್ಯದ ಕೆಲವು ಸಂದರ್ಭಗಳನ್ನಿಲ್ಲಿ ಪ್ರಸ್ತಾಪಿಸಲಾಗುವುದು.

"ತುಂಬಿದ ಮನೆ, ಸುಸಂಸ್ಕೃತ ತಂದೆ ತಾಯಿಗಳ ಅಪಾರ ಪ್ರೀತಿಯ ಸೆಲೆಯಲ್ಲಿ ಮಿಂದ ಕೃಷ್ಣಶರ್ಮರು ಮನೆಯ ಸಂತಸವನ್ನು ಹೆಚ್ಚಿಸಿದರು. ಮನೆಯಲ್ಲಿ ಸ್ವಂತದ ಬೇಸಾಯವಿತ್ತು. ಚಿಕ್ಕಂದಿನಲ್ಲಿಯೇ ಅದರ ವಾತಾವರಣವನ್ನು ಅವರು ಅನುಭವಿಸಿದರು. ದುಡಿಯುವ ಎತ್ತುಗಳು, ಕಟ್ಟಿ ಮೇಯಿಸುವ ಹೋರಿಗಳು, ಹೈನದ ದನಗಳು, ಎಳಗರುಗಳು, ನೀರಿಗಾಗಿ ಲಗಳೆ ಹೇರುವ ಕೋಣಗಳು ಇವೆಲ್ಲವುಗಳ ಪರಿಚಯ, ಗೆಳೆತನಗಳು ಅವರ ಹೃದಯ ಸಂಸ್ಕಾರದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಮನೆಯ ಕೆಲಸದ ಆಳುಗಳು, ಹೊಲ ಮಾಡುವ ರೈತರು, ಹತ್ತಿ ಬಿಡಿಸಲು, ಹತ್ತಿ ಅರೆಯಲು ಬರುವ ಹಳ್ಳಿಯ ಹೆಂಗಸರು, ನಟ್ಟು ಕಡಿಯಲು ಬರುವ ಕೂಲಿಯಾಳುಗಳು ಇವರೆಲ್ಲ ಅವರ ಚಿಕ್ಕಂದಿನ ಮಗುಮನವನ್ನು ಹದಗೊಳಿಸಿ ಅಂತಃಕರಣದ ಅರಳಿಕೆಗೆ ಕಾರಣವಾಗಿದ್ದಾರೆ."[೭]

ಜನಪದ ಸಾಹಿತ್ಯ, ಸಂಸ್ಕೃತಿಗಳ ಪ್ರೇರಣೆಯಿಂದ ತಮ್ಮ ಅಭಿವ್ಯಕ್ತಿಯ ಭಾಷೆ ಹಾಗೂ ಇತರ ಪರಿಕರಗಳನ್ನು ರೂಢಿಸಿಕೊಂಡ ಉತ್ತರ ಕರ್ನಾಟಕದ ಎರಡು ಪ್ರಮುಖ ಭಿನ್ನ ಮಾದರಿಗಳನ್ನು ಗುರುತಿಸಿಕೊಂಡು ಅಭ್ಯಸಿಸಲು ಆನಂದಕಂದರು ಬಾಲ್ಯದಲ್ಲಿ ಪಡೆದುಕೊಂಡ ಮೇಲೆ ವಿವರಿಸಿದ ವಾತಾವರಣ ಮಹತ್ವದ ದಾಖಲೆಯೆನಿಸುತ್ತದೆ. ಆನಂದಕಂದರ ಸಮಕಾಲೀನರೂ, ನೇರ ಒಡನಾಟಕ್ಕೆ ಒದಗಿದವರೂ ಆದ ವರಕವಿ ದ.ರಾ.ಬೇಂದ್ರೆಯವರು ಉತ್ತರ ಕರ್ನಾಟಕದ ಜಾನಪದ ಭಾಷೆಯನ್ನು ಹಾಗೂ ಅದರ ಸಾಂಸ್ಕೃತಿಕ ನೆಲೆಗಳನ್ನು ಪರಿಷ್ಕಾರಗೊಳಿಸಿ ಕೊಂಡು ಬಳಸಿದ ರೀತಿ ಬೇಂದ್ರೆಕಾವ್ಯ – ಆನಂದಕಂದರ ಕಾವ್ಯಕ್ಕಿಂತ ಭಿನ್ನವಾಗಲು ಪ್ರಮುಖ ಕಾರಣವಾಗಿದೆ. ಜಾನಪದ ಪರಿಕರಗಳು ಬೇಂದ್ರೆಯವರಿಗೆ ತಮ್ಮ ಕಾವ್ಯಾನುಭೂತಿಯ ಆಧ್ಯಾತ್ಮಿಕ-ಅನುಭಾವಿಕ ನೆಲೆಗಳ ಅನಾವರಣಕ್ಕೆ ಸಾಧನಗಳು. ಅಲ್ಲಿನ ನಿಗೂಢ ಮಾಂತ್ರಿಕ ಅಂಶಗಳನ್ನು ಅವರು ಕಾವ್ಯದ ಪ್ರತಿಮಾತ್ಮಕ ಅಗ್ನಿದಿವ್ಯದಲ್ಲಿ ಕರಗಿಸಿಕೊಡುತ್ತಾರೆ. ಸಂಪೂರ್ಣ ವೈದಿಕ ತಳಹದಿಯ ಶಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ತಮ್ಮ ಭಾವಕೋಶವನ್ನು ರೂಪಿಸಿಕೊಂಡ ಬೇಂದ್ರೆಯವರಿಗೆ ಕೃಷಿ ಬದುಕಿನ

---

೭. ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ಪು. ೮೫

ನೇರ ಸಂಪರ್ಕ ಕೌಟುಂಬಿಕ ನೆಲೆಯಲ್ಲಿ ಇಲ್ಲದೆ ಇರುವುದರಿಂದ ಆ ಬದುಕಿನ ಬಗೆಗೆ ಅವರಿಗೊಂದು ನಿಗೂಢ ಆಕರ್ಷಣೆ ಒದಗಿದ್ದರಿಂದಲೇ ಅವರ ಕಾವ್ಯದಲ್ಲಿ ಉತ್ತರ ಕರ್ನಾಟಕದ ಜಾನಪದೀಯ ನೆಲೆಗಳು ಮಾಂತ್ರಿಕ ಸ್ವರೂಪ ಪಡೆಯಲು ಸಾಧ್ಯವಾಗಿವೆ. ಅವೇ ಸಂಗತಿ ಆನಂದಕಂದರಲ್ಲಿ ಭೌತಿಕ ಸಮೃದ್ಧಿಯ ಲೌಕಿಕ ವಾಸ್ತವಗಳಲ್ಲಿ ಜೀವತಳೆಯುತ್ತವೆ. ಕೃಷಿ ಬದುಕಿನ ದಟ್ಟ ವಿವರಗಳು, ಗ್ರಾಮೀಣ ಪರಿಸರದ ನಿತ್ಯ ವಾಸ್ತವಗಳು ಆನಂದಕಂದರಲ್ಲಿ ಯಥಾವತ್ತಾಗಿ ಮೂಡಿ ನಿಲ್ಲುತ್ತವೆ. ಸ್ವಾತಂತ್ರ್ಯೋತ್ತರದಲ್ಲಿ ತೀವ್ರವಾಗಿ ಬದಲಾವಣೆಗೊಂಡ ಇದೇ ಜಾನಪದ ಬದುಕಿನ ಪರಿಕರಗಳು ಕಣವಿ, ಕಂಬಾರರಲ್ಲಿ ಸಾಮಾಜಿಕ ವಿಷಮತೆಗಳನ್ನು ಶೋಧಿಸಿಕೊಳ್ಳಲು ಭಿನ್ನ ರೀತಿಯ ರೂಪಾಂತರಕ್ಕೆ ಒಳಗಾಗುವುದನ್ನು ಕಾಣಬಹುದು. ಉತ್ತರ ಕರ್ನಾಟಕದ ಇನ್ನೊಬ್ಬ ಪ್ರಮುಖ ಕವಿ ಸೋಮಶೇಖರ ಇಮ್ರಾಪುರರಲ್ಲಿ ಇವೇ ಸಂಗತಿಗಳು ಸಮಕಾಲೀನ ಬದುಕಿನ ಪರಿವರ್ತನಶೀಲ ವಾಸ್ತವಗಳನ್ನು ಚಿತ್ರಿಸಲು ಬಳಕೆಗೊಳ್ಳುವುದು, ಚಂದ್ರಶೇಖರ ಪಾಟೀಲರಲ್ಲಿ ಅಸಂಗತ ನೆಲೆಗಳ ಅನಾವರಣಕ್ಕೆ ಬಳಕೆಗೊಳ್ಳುವುದು ಗಂಭೀರ ಅಧ್ಯಯನಕ್ಕೆ ಅವಕಾಶ ನೀಡುವಂತಿವೆ. ಈ ಎಲ್ಲ ಬಗೆಯ ವೈವಿಧ್ಯಗಳಿಗೆ ಕಾರಣವಾದ ಒಬ್ಬೊಬ್ಬರ ಬಾಲ್ಯ, ಕೌಟುಂಬಿಕ ಪರಿಸರ, ಬದಲಾದ ರಾಜಕೀಯ, ಸಾಮಾಜಿಕ ಭೂಮಿಕೆಗಳು, ವೈಚಾರಿಕ ಆಶಯಗಳು ಒಬ್ಬೊಬ್ಬರಲ್ಲೂ ವ್ಯಕ್ತಿ ವಿಶಿಷ್ಟತೆಯ ಛಾಪನ್ನು ಮೂಡಿಸಿವೆ. ಅದಕ್ಕೆ ಬಹುಮುಖ್ಯ ಕಾರಣ ಬಾಲ್ಯದಲ್ಲಿ ಒದಗಿದ ಶ್ರದ್ಧಾ ಶಿಕ್ಷಣವೇ ಹೊರತು ಶಾಲೆ – ಕಾಲೇಜುಗಳ ಔಪಚಾರಿಕ ಪದವಿಗಳಲ್ಲ. ಈ ವ್ಯತ್ಯಾಸವನ್ನು ಆನಂದಕಂದರ ಸಂದರ್ಭದಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ.

ಆನಂದಕಂದರು ಶಾಲಾ ಪಠ್ಯಗಳಾಗಿ ಓದಿದ್ದು ವೆಂಕಟರಂಗೋ ಕಟ್ಟಿಯವರಿಂದ ರೂಪುಗೊಂಡ ಬಾಲಬೋಧಿನಿ, ಕನ್ನಡ ಭಾಷಾ ಪಠ್ಯಪುಸ್ತಕಗಳು, ಗಂಗಾಧರ ಮಡಿವಾಳೇಶ್ವರ ತುರುಮರಿಯವರಿಂದ ಕನ್ನಡಕ್ಕೆ ಬಂದ ಬಾಣಭಟ್ಟನ ಕಾದಂಬರಿಯ ಕೆಲ ಪುಟಗಳು, ಮುಳುಬಾಗಿಲ ಅವರಿಂದ ಕನ್ನಡಿಸಲಾದ 'ಉತ್ತರರಾಮ ಚರಿತೆ'ಯ ಕೆಲವು ಪ್ರಸಂಗಗಳು, ದಾಸರ ಪದಗಳು, ಜೈಮಿನಿ ಭಾರತದ ಒಂದೆರಡು ಸಂಧಿಗಳು, ಸರ್ವಜ್ಞನ ವಚನಗಳು, ನಿಜಗುಣ ಶಿವಯೋಗಿಯವರ ನೀತಿಪದಗಳು ಮೊದಲಾದವು. ೧೯೦೭ರ ನಂತರ 'ಮ್ಯಾಕ್‌ಮಿಲನ್ ಸೀರಿಜ್' ಇಂಗ್ಲೀಷ್ ಪಠ್ಯಗಳು ಮರಾಠಿ ಮೂಲಕ ಕನ್ನಡಕ್ಕೆ ಬಂದವು. ಅದೇ ವರ್ಷ ಶಾಲೆಗೆ ಸೇರಿದ ಆನಂದಕಂದರಿಗೆ ಈ ಪುಸ್ತಕಗಳನ್ನು ಓದುವ ಅವಕಾಶವಾಯಿತು. ಇವುಗಳೊಂದಿಗೆ ಕಟ್ಟಿಯವರ 'ಲಘುವ್ಯಾಕರಣ', ಮುಳುಬಾಗಿಲರ 'ನುಡಿಗಟ್ಟು' ಹುಯಿಲಗೋಳರ 'ಕನ್ನಡ ಕೈಪಿಡಿ' ಮೊದಲಾದವುಗಳೂ ಸೇರಿಸಲ್ಪಟ್ಟವು. ಇವು ಕೃಷ್ಣಶರ್ಮರಿಗೆ ಅಭ್ಯಾಸದ ತಳಹದಿ ಹಾಗೂ ಮಾರ್ಗಸೂಚಿಗಳನ್ನು ಒದಗಿಸಿದವು. ಅಷ್ಟೇ ಅಲ್ಲ

ಅವರು ಸ್ವಪ್ರಯತ್ನದಿಂದ ಮುಂದುವರೆದು ತಮ್ಮದೇ ಆದ ವಿದ್ವತ್ಪೂರ್ಣ ಚಿಂತನೆಗಳಿಂದ ಕನ್ನಡ ಉತ್ಕೃಷ್ಟ ಲೇಖಕರಲ್ಲೊಬ್ಬರಾಗಿ ಬೆಳೆದರು.

ಆ ಕಾಲದ ಗ್ರಾಮೀಣ ಪರಿಸರದ ನಿಧಾನಗತಿಯ ಜೀವನಕ್ರಮಕ್ಕೂ ಇಂದಿನ ಅತಿ ಆತುರದ ರಭಸದ ಜೀವನಕ್ರಮಕ್ಕೂ ಅಜಗಜಾಂತರ. ಆ ನಿಧಾನತೆಗೆ ಅದರದೇ ಮಿತಿಯಿದೆಯಾದರೂ ಬದುಕಿನ ಅನುಭವಗಳನ್ನು ಆಳವಾಗಿ ಗ್ರಹಿಸಲು, ಮೈಗೂಡಿಸಿಕೊಳ್ಳಲು ಆ ಕ್ರಮವೇ ಪ್ರಶಸ್ತವಾದದ್ದೆಂಬುದರಲ್ಲಿ ಎರಡು ಮಾತಿಲ್ಲ. ಅಂದಿನ ಜೀವನ ಕ್ರಮದಲ್ಲಿಯೇ ಅಳವಟ್ಟ ಪ್ರಾಕೃತಿಕ ಪರಿಸರದೊಂದಿಗೆ ಹೆಣೆದುಕೊಂಡ ಆನಂದಕಂದರ ಬಾಲ್ಯದ ಪ್ರೇರಣೆಗಳ ಮಾದರಿಯಾಗಿ ಈ ಉಲ್ಲೇಖ ಗಮನಾರ್ಹ. "ಹನ್ನೆರಡು ತಿಂಗಳೂ ಹರಿಯುತ್ತಿದ್ದ ಹಳ್ಳದ ಜುಳುಜುಳು ನಿನಾದ ಕವಿಗಳಿಗೆ ಜೋಗುಳ ಹಾಡಿದೆ. ಹಳ್ಳದ ದಂಡೆಯ ತೋಟಗಳು, ತೋಟದಲ್ಲಿಯ ಮಾವಿನ ಮರಗಳು, ಹುಳಿಯಿದ್ದರೂ ಕಷ್ಟಪಟ್ಟು ಹತ್ತಿ ಹಣ್ಣು ಪಡೆದು ಸವಿಮಾಡಿ ತಿನ್ನುತ್ತಿದ್ದ ಬೋರೆಯ ಮರ, ಬೆಳವಲಕಾಯಿ ಮರಗಳು ಕವಿಗಳ ಚಿಕ್ಕಂದಿನ ಬಾಳನ್ನು ಅರಳಿಸಿವೆ. ತೆಂಗಿನ ಮರಗಳು, ಗುಲಾಬಿ ಹೂಗಳು, ದುಂಡುಮಲ್ಲಿಗೆ, ಜಾಜಿಮಲ್ಲಿಗೆ ಬಳ್ಳಿಗಳು, ತೋಟ ಬೆಳೆಗೂಡಿದ ಹೊಲಗಳ ಮಧ್ಯ ಕೃಷ್ಣಶರ್ಮರು ಬಾಲ್ಯದ ದಿನಗಳನ್ನು ಕಳೆದಿದ್ದಾರೆ."[೮]

ಕನ್ನಡದ ಬಹುದೊಡ್ಡ ಕವಿಗಳು ಗ್ರಾಮೀಣ ಪರಿಸರದ ಗಾಢ ಅನುಭವಗಳನ್ನು ಪಡೆದವರೇ ಆಗಿರುವುದು ಈ ಹಿನ್ನೆಲೆಯಲ್ಲಿ ಗಮನಾರ್ಹ. ನಿಧಾನಗತಿಯ ಬದುಕಿನ ವಿನ್ಯಾಸವೇ ಸೃಜನಶೀಲ ಧ್ಯಾನ ಸಹಜವಾಗಿ ಸಂಭವಿಸಲು ಪೂರಕವಾದುದೆಂಬುದಕ್ಕೆ ಆನಂದಕಂದರ ಬದುಕಿನ ಈ ಸಂದರ್ಭವೂ ಜೀವಂತ ನಿದರ್ಶನ.

ಕರ್ನಾಟಕ ಸಾಂಸ್ಕೃತಿಕ ಪರಂಪರೆ ಕೃಷಿಕ ಬದುಕಿಗೆ ಪೂರಕವಾದ ಜಾನಪದ ಕಲಾ ಪ್ರಕಾರಗಳಲ್ಲಿ ಸಾಗಿಬಂದಿದೆ. ಕಲೆಯನ್ನೇ ಕುಲವೃತ್ತಿಗಳನ್ನಾಗಿಸಿಕೊಂಡ ಅನೇಕ ಸಮುದಾಯಗಳು ಆ ಕಾಲದಲ್ಲಿದ್ದವು. ಹಳ್ಳಿಗರ ಆಚಾರ ವಿಚಾರ ಮನರಂಜನೆಗಳಲ್ಲೆಲ್ಲ ಪ್ರಭಾವಶಾಲಿ ಸಂಗತಿಗಳಾಗಿ ಇವೆಲ್ಲ ಕಾರ್ಯಪ್ರವೃತ್ತವಾಗಿದ್ದವು. ಆನಂದಕಂದರ ಸೃಜನಶೀಲ ಪ್ರಭಾವ ಪ್ರೇರಣೆಗಳ ಸಂದರ್ಭದಲ್ಲಿಯೂ ಇವುಗಳ ಪಾತ್ರ ವಿಶಿಷ್ಟವಾದುದು. ಈ ನಿಟ್ಟಿನಲ್ಲಿ ಕನ್ನಡ ವಿಮರ್ಶೆ ಹಾಗೂ ಸಂಶೋಧನೆಗಳು ಈಗಾಗಲೇ ಗಮನಹರಿಸಿದ್ದೂ ಅಲ್ಲದೆ ಸ್ವತಃ ಆನಂದಕಂದರೂ ಆ ಕುರಿತು ತಮ್ಮ ನೆನಪುಗಳಲ್ಲಿ ಪ್ರಸ್ತಾಪಿಸಿದ್ದಿದೆ. ಆದರೆ ಇವೆಲ್ಲ ತೌಲನಿಕ ಹಾಗೂ ಸಾಂಸ್ಕೃತಿಕ ನೆಲೆಯಿಂದ ಅಧ್ಯಯನಕ್ಕೆ ಒಳಪಡಬೇಕಾದ ಸಂಗತಿಗಳಾಗಿವೆ. ಒಂದು ಕಾಲದ ಜೀವಂತ ಪ್ರೇರಣೆಗಳು ಪಳೆಯುಳಿಕೆಯಂತೆ ಕಾಣುತ್ತಿರುವ ಈ ದಿನಗಳಲ್ಲಿ ಸಾಂಸ್ಕೃತಿಕ

---

೮. ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ಪು. ೮೫

ಸತ್ವಗಳನ್ನು ಪುನರ್ ಸಂಯೋಜಿಸಿಕೊಳ್ಳುವ ಕಾರಣದಿಂದಲೂ ಮಹತ್ವ ಪಡೆಯುತ್ತವೆ. ಈ ಹಿನ್ನೆಲೆಯಲ್ಲಿ ಮುಂದಿನ ಮಾತುಗಳನ್ನು ಗಮನಿಸಬೇಕು. “ಹಳ್ಳಿಯ ರೈತರು ಸಾರ್ವಜನಿಕವಾಗಿ ಆನಂದವನ್ನು ಹಂಚಿಕೊಂಡು ತಣಿದು ಆನಂದಪಡುತ್ತಿದ್ದ ಕಾಲವದಾಗಿತ್ತು. ಉತ್ತರ ಕರ್ನಾಟಕದ ಹಳ್ಳಿಗರು ಸಾರ್ವಜನಿಕವಾಗಿ ಗೊಂದಲಿಗರಿಂದಲೂ, ಎಲ್ಲಮ್ಮನ ಜೋಗಿಯರಿಂದಲೂ ಕತೆ ಹೇಳಿಸುತ್ತಿದ್ದರು. ಕಿಳ್ಳಿಕೇತರ ಗೊಂಬೆಯ ನೆರಳಾಟ, ಹಲಿಗೆ, ಕರಡಿಮಜಲುಗಳ ವಾದ್ಯ ವೈಭವ, ಲಾವಣಿಕಾರರಿಂದ ಲಾವಣಿ ಪದಗಳನ್ನು ಹೇಳಿಸುವುದು, ಕೃಷ್ಣ ಪಾರಿಜಾತ, ರಾಧಾಕೃಷ್ಣ ರೂಪಸಿಂಗ, ಸಂಗ್ಯಾ ಬಾಳ್ಯಾ ಮೊದಲಾದ ಬಯಲಾಟಗಳನ್ನಾಡುವುದು ಆಗಿನ ಉತ್ತರ ಕರ್ನಾಟಕದ ಜನಪದ ಸಂಸ್ಕೃತಿ ವೈಭವದ ಹೆಗ್ಗುರುತುಗಳಾಗಿದ್ದವು. ಚಿಕ್ಕಂದಿನಲ್ಲಿ ಸ್ವಭಾವತಃ ಕಲೆ, ಸಂಸ್ಕೃತಿ, ಸಾಹಿತ್ಯಗಳ ಪರಿಸರದ ಹಿನ್ನೆಲೆಯಲ್ಲಿ ಬೆಳೆಯುತ್ತಿದ್ದ ಕೃಷ್ಣನಿಗೆ ಇಂತಹ ಸಾಂಸ್ಕೃತಿಕ ಸನ್ನಿವೇಶಗಳು ಮನವನ್ನು ಮುದಗೊಳಿಸಿದುವಲ್ಲದೆ, ಜನಪದ ಸಾಹಿತ್ಯದ ಕುತೂಹಲಪೂರ್ಣ ಸಹವಾಸವು ಈ ಪುಟ್ಟ ಬಾಲಕನ ವ್ಯಕ್ತಿತ್ವವನ್ನು ಎತ್ತರಕ್ಕೆ ಒಯ್ಯಲು ಮನವನ್ನು ಹದಗೊಳಿಸಿದವು.”[೯]

“ಕೃಷ್ಣಶರ್ಮರ ತಾಯಿ ಸ್ವತಃ ಮನೆಯಲ್ಲಿ ಸಾಹಿತ್ಯಿಕ ಸಾಂಸ್ಕೃತಿಕ ಪರಿಸರ ನಿರ್ಮಿಸಿದ್ದರು. ಹೆಚ್ಚು ಕಲಿತವಳಲ್ಲದಿದ್ದರೂ, ಈ ಮೊದಲೇ ಹೇಳಿದಂತೆ ಕನ್ನಡ, ಮರಾಠಿ ಪುರಾಣ ಗ್ರಂಥಗಳು, ಕಾದಂಬರಿಗಳನ್ನು ಓದಿಸಿ ಕೇಳುವುದರಲ್ಲಿ ಈ ತಾಯಿ ಆಸಕ್ತಿ ತಾಳಿದ್ದಳು. ಗೋಕಾವಿಯ ಅನಂತಚಾರ್ಯ ಕವಿಗಳು ರಚಿಸಿದ್ದ ‘ವೆಂಕಟೇಶ ಪಾರಿಜಾತ’, ‘ಧ್ರುವ ಚರಿತ್ರೆ’, ‘ಪ್ರಹ್ಲಾದ ಚರಿತ್ರೆ’, ‘ಶಿವಪಾರಿಜಾತ’ ಮೊದಲಾದ ಗೀತಕಾವ್ಯಗಳು ಅವರ ಮನೆಯಲ್ಲಿ ವಾರದಲ್ಲಿ ಒಂದೊಂದು ದಿನ ಒಂದೊಂದು ಪಾರಾಯಣ ಗ್ರಂಥಗಳಾಗಿ ಎಡೆಪಡೆದಿದ್ದರಿಂದ ಬಾಲಕ ಕೃಷ್ಣನಿಗೆ ಮಾತ್ರವಲ್ಲ ಮನೆಯಲ್ಲಿ ಎಲ್ಲರಿಗೂ ಮುಖೋದ್ಗತವಾಗಿದ್ದವು. ಪ್ರಾಸಂಗಿಕವಾಗಿ ಹಾಡುತ್ತಿದ್ದ ಕೃಷ್ಣಲೀಲೆಯ ಹಾಡುಗಳು, ಸುಧಾಮನ ಹಾಡು, ಶುಕ್ರವಾರ–ಶನಿವಾರಗಳ ಹಾಡು, ದಾಸರ ಕೀರ್ತನೆಗಳು ಇವೆಲ್ಲ ಚಿಕ್ಕತನದಲ್ಲಿ ಪುಟ್ಟ ಕೃಷ್ಣನಿಗೆ ಸಾಹಿತ್ಯದ ಸಂಸ್ಕಾರವನ್ನಿತ್ತವು. ತುಂಬಿದ ಮನೆ, ಮನೆತುಂಬ ಬಳಗ, ಪ್ರೀತಿಯ ಅಣ್ಣ ತಮ್ಮಂದಿರು, ಅಕ್ಕ ತಂಗಿಯರ ಒಲವಿನ ತೊರೆ ಅವರ ಹೃದಯ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಮನೆಯಲ್ಲಿ ನಡೆಯುವ ಮದುವೆ, ಮುಂಜಿವೆ, ಶೋಭನ, ಸೀಮಂತ, ಬಸಿರು–ಬಾಣಂತಿತನ, ಹುಟ್ಟಿದ ಹಬ್ಬ, ನಾಮಕರಣ, ಜವುಳ ಮೊದಲಾದ ಸಾಂಸ್ಕೃತಿಕ, ಧಾರ್ಮಿಕ, ಸಾಂಪ್ರದಾಯಿಕ ಉತ್ಸವಗಳನ್ನು ಚಿಕ್ಕ ವಯಸ್ಸಿನ ಕೃಷ್ಣ ಬೆರಗುಬಿಟ್ಟು

---

೯. ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ಪು. ೮೬, ೮೭

ನಿರೀಕ್ಷಿಸುತ್ತಿದ್ದ. ಆಗ ನಡೆಯುವ ರಸಮಯವಾದ ಅರ್ಥಪೂರ್ಣ ಸಂಪ್ರದಾಯಗಳು ಕರ್ನಾಟಕದ ಸಂಸ್ಕೃತಿಯ ಪರಂಪರೆಯ ಹಿರಿಮೆಯ ಅರಿವನ್ನು ಕೃಷ್ಣನಿಗೆ ಚಿಕ್ಕಂದಿನಿಂದಲೇ ಮೆಲ್ಲ ಮೆಲ್ಲನೆ ಮಾಡಿಕೊಡುತ್ತಿದ್ದವು."[೧೦]

ಪ್ರತಿಭೆ, ವ್ಯುತ್ಪತ್ತಿ, ಪರಿಸರ, ಪ್ರಯತ್ನ, ಅವಕಾಶ ಒಂದಕ್ಕೊಂದು ಪೂರಕವಾಗಿ ಒದಗಿದಾಗ ಸಾಹಿತ್ಯಿಕ ಅಭಿವ್ಯಕ್ತಿ ಸಾಧ್ಯವಾಗುತ್ತದೆ. ಪ್ರತಿಭೆ ಇದ್ದೂ ಪರಿಸರ ಅವಕಾಶಗಳು ಒದಗದೆ ಕಮರಿ ಹೋದ ಪ್ರತಿಭಾವಂತರೂ ನಮ್ಮಲ್ಲಿದ್ದಾರೆ. ಪರಿಸರ ಎಲ್ಲರಿಗೂ ಸಮಾನವಾಗಿದ್ದರೂ ಪ್ರತಿಭೆ ಇಲ್ಲದೆ ಯಾರೂ ಕವಿಗಳಾಗಲು ಸಾಧ್ಯವಿಲ್ಲ. ಹೀಗಾಗಿ ಪ್ರತಿಭೆ ಹುಟ್ಟಿನಿಂದ ಪಡೆದು ಬಂದ ಭಾಗ್ಯ. ಅದು ತನಗೆ ಸೂಕ್ತ ಪರಿಸರ ಅವಕಾಶಗಳನ್ನು ಒದಗಿಸಿಕೊಳ್ಳುವಲ್ಲಿ ಪ್ರಯತ್ನಶೀಲವಾಗಿರುತ್ತದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಪ್ರತಿಕೂಲ ಸನ್ನಿವೇಶಗಳ ವಿರುದ್ಧ ಸೆಣೆಸಿ ಪುಟಿದೇಳುವ ಸತ್ವವಾಗಿಯೂ ಪ್ರತಿಭೆ ಕ್ರಿಯಾಶೀಲವಾಗುತ್ತದೆ. ಜೀವನದ ಎಲ್ಲ ಕಹಿ ಅನುಭವಗಳನ್ನು ಅಭಿವ್ಯಕ್ತಿಯ ದ್ರವ್ಯವಾಗಿಸಿಕೊಂಡು ಪ್ರವಾಹದ ವಿರುದ್ಧ ಈಜಿ ಜಯಿಸುವ ಸಾಹಸದಲ್ಲಿಯೂ ತೊಡಗುವುದು ಪ್ರತಿಭೆಗೆ ಸಾಧ್ಯವಿದೆ. ಅಂತಹ ಅಪರೂಪದ ಪ್ರತಿಭೆ ಆನಂದಕಂದರದು. ಆಧುನಿಕ ಕಾಲಕ್ಕೆ ಅನುಗುಣವಾದ ಉಚ್ಚ ಶಿಕ್ಷಣದ ಮುಕ್ತ ಅವಕಾಶಗಳಿದ್ದೂ ಕುಟುಂಬದ ಪರಿಸ್ಥಿತಿ ಅದಕ್ಕೆ ಪೂರಕವಾಗದೆ ಅಂತರಂಗದಲ್ಲಿಯೇ ಹತಾಶೆಯ ಕತ್ತಲನ್ನು ತುಂಬಿಕೊಂಡಿದ್ದರೂ ಸ್ವಪ್ರಯತ್ನದ ಬೆಳಕಿನಿಂದ ಆ ಕತ್ತಲನ್ನು ನಿವಾರಿಸಿಕೊಂಡು ಮುನ್ನಡೆದ ಆನಂದಕಂದರ ದಾರಿ ಸಾಹಸಪೂರ್ಣವೇ ಸರಿ. ಉಚ್ಚ ಜಾತಿಯವರಿಗೆಲ್ಲ ಸಮಾಜದಲ್ಲಿ ತೆರೆದ ಅವಕಾಶಗಳಿರುತ್ತವೆ ಎಂಬುದು ಪೂರ್ತಿ ಸರಿಯಾದುದಲ್ಲ. ಜಾತಿ ಕಾರಣದಿಂದ ಮಾತ್ರವಲ್ಲ ಆರ್ಥಿಕ ಕಾರಣದಿಂದಲೂ ವರ್ಗ ತರತಮಗಳು ಭಾರತೀಯ ಸಂದರ್ಭದಲ್ಲಿ ಗಮನಾರ್ಹವಾದವು ಎಂಬುದಕ್ಕೂ ಆನಂದಕಂದರ ಉದಾಹರಣೆ ಮಹತ್ವದ್ದೆನಿಸುತ್ತದೆ. ಬಡಬ್ರಾಹ್ಮಣ ಕುಟುಂಬಗಳು ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅವಕಾಶಗಳಿಂದ, ಸಾಮಾಜಿಕ ಸೌಕರ್ಯಗಳಿಂದ ವಂಚಿತರಾಗುವ ಪ್ರಸಂಗಗಳು ಏಕಮುಖೀ ಗ್ರಹಿಕೆಯಿಂದ ಹೊರಬರಲು ಪ್ರೇರೇಪಿಸುವಂಥವು. ಶ್ರೀನಿವಾಸ ವೈದ್ಯರ ಇತ್ತೀಚಿನ ಕಾದಂಬರಿ 'ಹಳ್ಳಬಂತು ಹಳ್ಳ' ಈ ನಿಟ್ಟಿನಲ್ಲಿ ವಿಶೇಷ ಬೆಳಕು ಚೆಲ್ಲುತ್ತದೆ. ಬ್ರಿಟೀಷರ ಆಗಮನ ಆಧುನಿಕತೆ ಹಾಗೂ ವಸಾಹತೀಕರಣದ ಪ್ರಕ್ರಿಯೆಗಳು ಹಳೆಯ ಜಮೀನುದಾರಿ ಪದ್ಧತಿಯ ವೈಭವಗಳನ್ನು ಮೂಲೆಗುಂಪಾಗಿಸುತ್ತಿದ್ದ, ಅವಿಭಕ್ತ ಕುಟುಂಬಗಳು ವಿಘಟನೆಯ ದಾರಿಯಲ್ಲಿ ಸಾಗಿದ್ದ ಪರಿವರ್ತನಶೀಲ ಸಂದರ್ಭದ ಕಥೆಯನ್ನು ಈ ಕೃತಿ ಒಳಗೊಂಡಿದ್ದು, ಕಳೆದ ಶತಮಾನದ ಆರಂಭದ ಕಾಲಘಟ್ಟದಲ್ಲಿ

---

೧೦. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು. ೧೮, ೧೯

ಅಂದರೆ ಸರಿ ಸುಮಾರು ಆನಂದಕಂದರ ಕುಟುಂಬದಲ್ಲಿ ಸಂಭವಿಸುತ್ತಿದ್ದ ಪಲ್ಲಟಗಳ ಅವಧಿಯೇ ಅದಾಗಿದ್ದು, ಈ ನಿಟ್ಟಿನ ಇನ್ನಷ್ಟು ಅಧ್ಯಯನಗಳು ನಮ್ಮಲ್ಲಿ ನಡೆಯಬೇಕೆಂಬುದಕ್ಕೆ ಸೂಚನೆಯಾಗಿ ಈ ಸಂಗತಿಯನ್ನು ಪ್ರಸ್ತಾಪಿಸಲಾಗಿದೆ.

ಕೌಟುಂಬಿಕ ವಿಷಮಾವಸ್ಥೆಯಲ್ಲಿ ನಲುಗಿದ ಆನಂದಕಂದರು ಮುಂದಿನ ವಿದ್ಯಾಭ್ಯಾಸದಿಂದ ವಂಚಿತರಾಗಿ ನಿರುದ್ಯೋಗಿಯಾಗಿ ಮನೆಯಲ್ಲಿ ಕಾಲಕಳೆಯುವ ಸಂದರ್ಭದಿಂದ ತಮ್ಮನ್ನು ಪಾರುಮಾಡಿಕೊಳ್ಳಲು ಅಂಟಿಸಿಕೊಂಡ ಓದಿನ ಗೀಳಿನ ಬಗ್ಗೆ ತಮ್ಮ ನೆನಪುಗಳಲ್ಲಿ ಅತ್ಯಂತ ಕಟುವಾಸ್ತವಿಕ ನೆಲೆಯಿಂದಲೇ ವಿವರಿಸಿದ್ದಾರೆ. "ಶಾಲೆ ಬಿಟ್ಟು ಮುಂದಿನ ಶಿಕ್ಷಣದ ಮಾರ್ಗವನ್ನು ಕಾಣದೆ ನಾನು ಮನೆಯಲ್ಲಿ ಸುಮ್ಮನೆ ಇದ್ದೆನಷ್ಟೇ. ಆಗ ನಾನು ಹೊರಗಣ್ಣಿಗೆ ನಿರುದ್ಯೋಗಿಯಾದೆನೆಂದು ಭಾವಿಸಿ ವಿಷಾದ ಪಡುತ್ತಿದ್ದೆ. ಆದರೆ ನಿಯತಿಯ ಮನಸ್ಸು ಏನಿದ್ದಿತೋ ಏನೋ. ಅದು ನನಗೆ ತಿಳಿಯದಂತೆ ನನ್ನ ಹೃದಯವನ್ನು ತಿದ್ದುವ ಕೆಲಸವನ್ನು ಮಾಡುತ್ತಿದ್ದಿರಬಹುದು. ಮಂದಿಯ ಕಣ್ಣಿಗೆ ನಾನು ನಿರುದ್ಯೋಗಿ. 'ದಡ್ಡ ಮಕ್ಕಳು ಮತ್ತು ಖೊಟ್ಟಿ ದುಡ್ಡು ಮನೆಯ ಮೂಲೆಯಲ್ಲಿ ಬಿದ್ದುಕೊಳ್ಳುವುದೇ ಸರಿ' ಎನ್ನುವ ಹೊರನೋಟದ ಮಾತುಗಳಿಗೆ ನಾನು ಈಡಾಗಿದ್ದಿರಬಹುದು. ಆದರೆ ನನಗೆ ತನ್ನಿಂದ ತಾನೇ ಒಂದು ಗೀಳು ಅಂಟಿಕೊಂಡಿತು. ಆಗ ಅದು ನನಗೆ ಒಳ್ಳೆಯದನ್ನು ಮಾಡುವುದೋ ಇಲ್ಲವೋ ಎನ್ನುವುದು ತಿಳಿದಿರಲಿಲ್ಲ. ಆ ಗೀಳು ಎಂದರೆ ಕೈಗೆ ಸಿಕ್ಕ ಪುಸ್ತಕಗಳನ್ನು ಓದಿ ಹಾಕುವುದು. ನಮ್ಮ ತಾಯಿಯ ಎದುರು ಅವಳ ಅಪೇಕ್ಷೆಯಂತೆ ಕೆಲವು ಪುಸ್ತಕಗಳನ್ನು ಓದಿ ಹೇಳುತ್ತಿದ್ದೆ. ನಾಟಕದಲ್ಲಿ ಪಾತ್ರವಹಿಸಿದ ಕಾರಣದಿಂದಲೋ ಏನೋ ನನಗೆ ಭಾವಾನುಗುಣವಾಗಿ, ಧ್ವನಿಂಯು ಏರಿಳಿತಗಳೊಂದಿಗೆ ಓದುವುದು ಸಾಧಿಸಿತ್ತು. ನನ್ನ ವಾಚನವನ್ನು ಕೇಳಿದವರು 'ಎಷ್ಟು ಚೆನ್ನಾಗಿ ಓದುತ್ತೀ' ಎಂದು ಬೆನ್ನು ತಟ್ಟುತ್ತಿದ್ದರು. ನನ್ನ ಓದುವಿಕೆಯನ್ನು ಕೇಳಿದ ಮೇಲೆ ಬೇರೆಯವರ ವಾಚನವು ಅವರಿಗೆ ಮನಸ್ಸಿಗೆ ಬರುತ್ತಿರಲಿಲ್ಲ."[೧೧] ಇಂತಹ ಪ್ರಸಂಗಗಳು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿದ್ದವು. ಸಿಕ್ಕದ್ದನ್ನೆಲ್ಲ ಓದಲು ಹಾಗೂ ಊರಲ್ಲಿ ಓದುವುದಕ್ಕೆ ಅಥವಾ ಓದುವುದನ್ನು ಕೇಳುವುದಕ್ಕೆ ಜನಮನ್ನಣೆ ದೊರೆಯುವಂತಹ ವಾತಾವರಣ ನಿರ್ಮಾಣವಾಗಲು ಅವಕಾಶವಾಗಿ ಅವರ ಉತ್ಸಾಹ ಇಮ್ಮಡಿಗೊಂಡಿತು. ಈಗಾಗಲೇ ಓದಿದ ಹಳೆಯ ಪತ್ರ ಪುಸ್ತಕಗಳಿಂದ ಮೊದಲು ಮಾಡಿ ವಚನಭಾರತ ಕಥಾಸಂಗ್ರಹ, ಜೈಮಿನಿ ಭಾರತಗಳು ಆರಂಭದಲ್ಲಿ ಅವರಿಂದ ಮತ್ತೆ ಮತ್ತೆ ಓದಿಸಿಕೊಂಡವು. ಅಭಿಮನ್ಯು ಪ್ರಸಂಗ ಹಾಗೂ ಬಭ್ರುವಾಹನ ಪ್ರಸಂಗಗಳು ಅವರಿಗೆ ಹಿಡಿಸಿದ್ದೂ ಅಲ್ಲದೆ ಅವರ ಅಂತಃಕರಣ ರೂಪಿಸುವಲ್ಲಿ ಗಾಢ ಪ್ರಭಾವ ಬೀರಿದವು.

---

೧೧. ನನ್ನ ನೆನಪುಗಳು – ಆನಂದಕಂದ, ಪು. ೯೩

ಉಡುಪಣ್ಣನ ಪುಸ್ತಕ ಸಂಗ್ರಹದಲ್ಲಿದ್ದ ಬಾಸೆಲ್‌ಮಿಶನ್ನಿನವರು ಪ್ರಕಟಿಸಿದ ಕಥಾ ಸಂಗ್ರಹ ಹಾಗೂ 'ಚಾರ್‌ದರ್ವೇಶ' ಎಂಬ ಅನುವಾದ ಕೃತಿಗಳು ಇವರಿಗೆ ತುಂಬಾ ಹಿಡಿಸಿದವು. ಊರಲ್ಲಿ ಬರುತ್ತಿದ್ದ ರಾಜಹಂಸ, ಚಂದ್ರೋದಯ, ಮೈಸೂರು ಸ್ಟಾರ್, ಸದ್ಬೋಧ ಚಂದ್ರಿಕೆ ಮೊದಲಾದ ಪತ್ರಿಕೆಗಳನ್ನು ಓದುವದು, ಓದಿ ಬೇರೆಯವರಿಗೆ ಹೇಳುವುದು ನಡೆಯುತ್ತಿತ್ತು. ಗಳಗನಾಥರ ಕಮಲಕುಮಾರಿ, ಮೃಣಾಲಿನಿ, ಪ್ರಬುದ್ಧ ಪದ್ಮನಯನೆ, ವೈಭವ ಅಥವಾ ನವನಂದನ, ಕುಮುದಿನಿ ಮತ್ತು ಈಶ್ವರೀ ಸೂತ್ರ ಕಾದಂಬರಿಗಳನ್ನು ಕಂಠಪಾಠವಾಗುವಷ್ಟು ಆಸ್ಥೆಯಿಂದ ಓದಿದರು. ನಾಮದೇವ, ಕಬೀರ, ಜ್ಞಾನದೇವ, ಪುರಂದರದಾಸ ಮೊದಲಾದ ಭಕ್ತರ ಕಥೆಗಳು, ಹಾತಿಮತಾಯಿ, ಅರೇಬಿಯನ್ ನೈಟ್ಸ್, ವೇತಾಳ ಪಂಚವಿಂಶತಿ. ಬತ್ತೀಸ ಪುತ್ಥಳಿ ಕಥೆಗಳು, ವಿಕ್ರಮರಾಜನ ಕಥೆಗಳು, ಹಾಸ್ಯ ಸುಂದರಿ ಪ್ರಭಾವತಿ ಶುಕಮಂಜರಿ, ಮಂಜುಘೋಷ, ಶುಕ್ತಸಪ್ತಮಿ ಕಥೆಗಳು, ಸ್ತ್ರೀ ಚರಿತೆ ಮೊದಲಾದವು ಅವರ ಓದಿನ ವ್ಯಾಪ್ತಿಗೆ ಸೇರಿದ್ದವು. ಜ್ಯೋತಿಷ್ಯ, ವೈದ್ಯಕಗಳಿಗೆ ಸಂಬಂಧಪಟ್ಟ ನಕ್ಷತ್ರ ಚೂಡಾಮಣಿ, ಪಂಚಾಂಗ ಪ್ರದೀಪ, ಜಲಶಿಲ್ಪಿ, ಹಲ್ಲಿಯ ಶಕುನ, ಪ್ರತ್ಯಾಕ್ಷಾರೂಢ ಪ್ರಶ್ನೆ ಚಂದ್ರಿಕೆ, ಮನೆಯ ಔಷಧಿಗಳು, ವ್ರತವಲ್ಲಿ ಹಬ್ಬ ಹುಣ್ಣಿಮೆಗಳು ಇವೇ ಮೊದಲಾದವು ಆನಂದಕಂದರು ಆಸಕ್ತಿಯಿಂದ ಓದುತ್ತಿದ್ದ ಪುಸ್ತಕಗಳಾಗಿದ್ದವು. ಬಾಣ ಭಟ್ಟನ ಕಾದಂಬರಿ, ಶಾಕುಂತಲಾ, ಕೀಚಕವಧಾ, ಉಷಾ ಸ್ವಯಂವರಾ, ಚಂದ್ರಾವಳಿಯ ಚರಿತ್ರೆ, ಸುಂದೋಪಸುಂದ ಎಂಬ ನಾಟಕಗಳು, ರಾಮದಾಸ ಚರಿತ್ರೆ, ಡ್ಯೂಕ್ ಆಫ್ ವೆಲಿಂಗ್ಟನ್, ಗ್ಲಾಡೆಸ್ಟನ್, ಬಂಗಾಲಿ ಕಾದಂಬರಿಯ ಅನುವಾದ ಅಮೃತಪುಲಿನಾ, ವಿಜಯನಗರ ಇತಿಹಾಸ, ಸದ್ಗುಣ ಕೃಷ್ಣಾಬಾಯಿ, ಮೋಹಿನಿ ಅಥವಾ ನಿಂದಕರ ನಡಾವಳಿ, ಸ್ವಾಮಿ ವಿವೇಕಾನಂದರು, ಅವರಿಂದ ರಚಿತವಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಶಿವಲೀಲಾಮೃತ – ಹೀಗೆ ಕಟ್ಟು ಕಟ್ಟಳೆಗಳಿಲ್ಲದ ಆ ದಿನಗಳಲ್ಲಿ ಉಪಲಬ್ಧವಿದ್ದ ಬಹುತೇಕ ಪುಸ್ತಕಗಳ ಸ್ವಚ್ಛಂದ ಓದು ಅವರಲ್ಲಿಯ ಲೇಖಕನನ್ನು ರೂಪಿಸುವ ಪ್ರೇರಣೆಯಾಗಿ ಒದಗಿತು. ಸಣ್ಣ ಪುಟ್ಟ ನಾಟಕ, ರಂಗ ಗೀತೆ ಹಾಗೂ ಕವಿತೆಗಳನ್ನು ರಚಿಸುವತ್ತ ಬಾಲ್ಯದಲ್ಲಿಯೇ ಸೃಜನಶೀಲ ಎಚ್ಚರವೊಂದನ್ನು ಈ ಓದು ಅವರಲ್ಲಿ ಮೂಡಿಸಿತು. ಗ್ರಾಮೀಣ ಪರಿಸರದ ಅವರ ಓಡಾಟ–ಒಡನಾಟಗಳು, ಆಗಿನ ವೃತ್ತಿ ನಾಟಕ ತಂಡಗಳಲ್ಲಿ ನಾಟಕ ನೋಡಲು ಒದಗಿದ ಅವಕಾಶಗಳು, ಜಾನಪದ ಬದುಕಿನ ಎಲ್ಲ ಸಂದರ್ಭಗಳಲ್ಲೂ ಪ್ರಚಲಿತವಿದ್ದ ಹಾಡುಗಳು ಅವರ ಅಭಿವ್ಯಕ್ತಿಯ ಶೈಲಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ದಿವಂಗತ ನರಸಿಂಹಾಚಾರ್ ಪುಣೇಕರ (ಕಾವ್ಯಾನಂದ) ಅವರಿಂದ ಪಾಠಗಳನ್ನು ಕಲಿತದ್ದೂ ಅಲ್ಲದೆ ಸೃಜನಶೀಲ ರಚನೆಗಳಿಗೂ ಗುರುವಾಗಿ ಅವರನ್ನೇ ಆನಂದಕಂದರು ಸ್ವೀಕರಿಸಿದ್ದರು.

ಸ್ವಪ್ರಯತ್ನದಿಂದ ಮರಾಠಿ, ಹಿಂದಿ, ಬೆಂಗಾಲಿ ಹಾಗೂ ಇಂಗ್ಲೀಷ್ ಭಾಷೆಗಳನ್ನು ಕಲಿತು ತಮ್ಮ ವೃತ್ತಿಯ ಹರಹನ್ನು ಅವರು ವಿಸ್ತರಿಸಿಕೊಂಡರು.

೩. ವೃತ್ತಿ ಜೀವನ :

ಜೀವನ ಅಂತರಂಗದ ಪ್ರವೃತ್ತಿಗೆ ಸಂಬಂಧಪಟ್ಟಿದ್ದರೆ, ಉಪಜೀವನ ಹೊಟ್ಟೆಪಾಡಿನ ವೃತ್ತಿಗೆ ಸಂಬಂಧಪಟ್ಟದ್ದೆಂದು ತಿಳಿಯಲಾಗುತ್ತದೆ. ಒಂದು ಅಲೌಕಿಕ, ಇನ್ನೊಂದು ಲೌಕಿಕ. ಆದರೆ ಮೇಲುನೋಟಕ್ಕೆ ಇಷ್ಟು ಸರಳವಾಗಿ ಕಾಣುವ ವರ್ಗೀಕರಣ ಸಂಪೂರ್ಣ ಸರಿ ಎನಿಸಲಾರದು. ಲೌಕಿಕ-ಅಲೌಕಿಕಗಳನ್ನು, ಉಪಜೀವನ-ಜೀವನಗಳನ್ನು ವೃತ್ತಿ-ಪ್ರವೃತ್ತಿಗಳನ್ನು ಇಷ್ಟು ಸರಳವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲ. ವೃತ್ತಿಯ ಆಧಾರವಿಲ್ಲದೆ ಪ್ರವೃತ್ತಿಗಳಿಗೆ ರಕ್ಷಣೆ ಇಲ್ಲ. ಪ್ರವೃತ್ತಿಯ ಭಾವನಾತ್ಮಕ ಸ್ಪರ್ಶವಿಲ್ಲದೆ ವೃತ್ತಿ ಜೀವನಕ್ಕೆ ಸಾರ್ಥಕತೆಯಿಲ್ಲ. ಎರಡರ ಸಮತೋಲನದಲ್ಲಿಯೇ ಜೀವನದ ಸಾಧನೆ ಸಿದ್ಧಿಗಳು ಅರಳಬೇಕು. ಆದರೆ ಪ್ರತಿಭಾವಂತರು ವ್ಯಾವಹಾರಿಕ ಬದುಕಿನ ಸರಳ ನೆಲೆಗಳನ್ನು ಒಗ್ಗಿಸಿಕೊಳ್ಳಲಾರದೆ ತಮ್ಮ ಪ್ರತಿಭೆಯ ಗರಿಷ್ಠ ಅಭಿವ್ಯಕ್ತಿಯನ್ನು ನೀಡಲಾರದೆ ಹೋಗುವ ಪ್ರಸಂಗಗಳಿವೆ. ಅಥವಾ ವ್ಯಾವಹಾರಿಕ ಬದುಕಿನ ಸಂಕಷ್ಟಗಳ ಅಗ್ನಿದಿವ್ಯದಲ್ಲಿಯೇ ಪ್ರತಿಭೆ ಹರಳುಗಟ್ಟುವ ಪ್ರಕ್ರಿಯೆಯನ್ನು ಪ್ರಕೃತಿ ಅಡಗಿಸಿದೆಯೇ ಎಂಬುದು ಶೋಧನೆಗೆ ಗುರಿಯಾಗಬೇಕು. ಎರಡರಲ್ಲೂ ಸಮೃದ್ಧ ಸ್ಥಿತಿಗಳನ್ನು ಅನುಭವಿಸುವ ಭಾಗ್ಯ ಪಡೆದುಬಂದವರು ಕೆಲವರಾದರೆ ಸಾಮಾನ್ಯ ವೃತ್ತಿಗಳನ್ನು ಅವಲಂಬಿಸಿದ್ದರೂ ಉನ್ನತ ಸಿದ್ಧಿಗಳನ್ನು ಮೆರೆದವರು ಹಲವರು. ಬೇಂದ್ರೆ, ಆನಂದಕಂದ, ಮಿರ್ಜಿ ಅಣ್ಣಾರಾಯ ಮೊದಲಾದ ಮಹನೀಯರು ಲೌಕಿಕ ಬದುಕಿನ ಸಾಮಾನ್ಯ ಅಗತ್ಯಗಳಿಗೂ ಪರದಾಡುತ್ತ ದಿವ್ಯತೆಗೆ ಕೈಚಾಚಿ ಲೋಕಕ್ಕೆ ತಮ್ಮ ಬೊಗಸೆಯಿಂದ ಅಮೃತವನ್ನು ಸುರಿದರು. ಜೀವನೋಪಾಯದ ವೃತ್ತಿಗಾಗಿ ಪರದಾಡುತ್ತ ಲೋಕದ ಕನಸುಗಳನ್ನು ತಮ್ಮ ಹೃದಯದಲ್ಲಿ ತುಂಬಿಕೊಂಡು ಭಾಷೆಯ ಮೂಲಕ ಸಮುದಾಯದ ಹೃದಯಗಳಿಗೆ ಹಾಯಿಸುತ್ತ, ಮಾನವೀಯ ನೆಲೆಗಳನ್ನು ಸಮಷ್ಟಿಯಲ್ಲಿ ಅರಳಿಸುವ ಸಂಸ್ಕಾರ-ಸಂಸ್ಕೃತಿಗಳ ಭೂಮಿಕೆಗೆ ವಿಸ್ತರಿಸುತ್ತ ಸಾಗುವ, ಕಾಲದೇಶಗಳನ್ನು ಮೀರುವ ಜೀವದುಸುರಿನ ಕಾಯಕದಲ್ಲವರು ನಿರತರು.

ಉನ್ನತ ಹುದ್ದೆಗಳಲ್ಲಿದ್ದು ಲೌಕಿಕ ಸುಖಗಳನ್ನು ಸೂರೆಗೊಂಡ ಅಸಂಖ್ಯಾತರು ಹೇಳ ಹೆಸರಿಲ್ಲದೆ ಹೋಗುವದನ್ನು ಕಾಣುವಂತೆ, ಸಾಮಾನ್ಯ ವೃತ್ತಿಗಳಲ್ಲಿದ್ದು ಲೌಕಿಕ ಸುಖಗಳಿಗೆ ಎರವಾಗಿ ಅಥವಾ ಇರುವುದರಲ್ಲಿಯೇ ಸಂತೃಪ್ತಿಯನ್ನು ಕಂಡುಕೊಳ್ಳಲು ಯತ್ನಿಸಿ ತಮ್ಮ ಕೃತಿಗಳ ಮೂಲಕ ಎಲ್ಲ ಕಾಲಕ್ಕೂ ಉಳಿದುಬಿಡುವವರನ್ನೂ ಕಾಣುತ್ತೇವೆ. ಆನಂದಕಂದರ ವೃತ್ತಿ ಜೀವನದ ಹೋರಾಟವನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.

೧೯೧೮ ರಲ್ಲಿ ಆನಂದಕಂದರ ಬದುಕಿನಲ್ಲಿ ಹೊಸ ತಿರುವೊಂದು ತಂತಾನೆ ಒದಗಿ ಬಂತು. ಯಾವ ಜವಾಬ್ದಾರಿಗಳನ್ನು ನೇರವಾಗಿ ಹೊತ್ತುಕೊಳ್ಳದೆ ಓದು-ಬರಹ, ನಾಟಕ-ಬಯಲಾಟಗಳೆಂದು ಸುತ್ತಾಡುತ್ತ, ಜಾನಪದ ಹಾಡುಗಳ ಗುಂಗಿನಲ್ಲಿ ತನ್ನ ಅಭಿವ್ಯಕ್ತಿಯ ಲಯಗಳನ್ನು ಕಂಡುಕೊಳ್ಳುತ್ತ ಇದ್ದ ಆನಂದಕಂದರಿಗೆ ಇದ್ದಕ್ಕಿದ್ದಂತೆ ತಾಯಿಯ ಮರಣ ಬರಸಿಡಿಲಿನಂತೆ ಎರಗಿತು. ಮೊದಲ ಸಲ ಅನಾಥತೆಯ ಭಾವ ಕಾಡತೊಡಗಿದ್ದೂ ಅಲ್ಲದೆ ಮನೆ ಬೇಸರ ಹಾಗೂ ನೀರಸತೆಗಳ ತಾಣವೆನಿಸತೊಡಗಿತು. ಇದೇ ಸಂದರ್ಭದಲ್ಲಿ ಬೆಳಗಾವಿಯ ಟ್ರೇನಿಂಗ್ ಕಾಲೇಜಿನ ಆಯ್ಕೆಗಾಗಿ ಶಿಕ್ಷಣ ಅಧಿಕಾರಿಗಳ ಕಛೇರಿಗೆ ಬರಬೇಕೆಂದು ಸೂಚನೆ ಬಂದಿತು. ಆದರೆ ಅದರಲ್ಲಿ ಯಶಸ್ಸು ಕಾಣದೆ ನಿರಾಸೆ ಅನುಭವಿಸುವಂತಾಗುತ್ತದೆ. ಮರಳಿ ಊರಿಗೆ ಹೋಗಬಾರದೆಂದು ಮೊದಲೇ ತೀರ್ಮಾನಿಸಿಕೊಂಡು ಬಂದಿದ್ದ ಆನಂದಕಂದರು ಕೆಲಸ ಹುಡುಕಲು ತೊಡಗುತ್ತಾರೆ. ಅನಿವಾರ್ಯವಾಗಿ ಸುಲಭವಾಗಿ ಸಿಗುತ್ತಿದ್ದ ಮುನಿಸಿಪಾಲ್ಟಿಯ ಆರೋಗ್ಯ ಇಲಾಖೆಯ ಕೆಲಸಕ್ಕೆ ಸೇರುತ್ತಾರೆ. ಮನೆ ಮನೆಗೆ ಇಲಿಯ ಬಲೆಗಳನ್ನು ಹಂಚಿ, ಇಲಿಗಳು ಬಿದ್ದ ಬಲೆಗಳನ್ನು ಮರಳಿ ಮುನಸಿಪಾಲ್ಟಿಗೆ ಒಪ್ಪಿಸುವ ಕೆಲಸವದು. ಆದರೆ ಮರಾಠಿ ಮಾತನಾಡುವ ಪ್ರದೇಶದಲ್ಲಿ ಇವರು ಕೆಲಸ ಮಾಡಬೇಕಾಗಿ ಬಂದದ್ದರಿಂದ ಆ ಸಂದರ್ಭದಲ್ಲಿ ಆನಂದಕಂದರಿಗೆ ಮರಾಠಿ ಬರುತ್ತಿಲ್ಲವಾದ್ದರಿಂದ ಈ ಕೆಲಸ ಅವರಿಗೆ ಕಠಿಣವಾಗಿ ತೋರಿತು. ಕೆಲವೇ ದಿನಗಳಲ್ಲಿ ಈ ಕೆಲಸ ಬಿಟ್ಟು ಶಿಕ್ಷಕನ ಕೆಲಸವನ್ನೇ ಹುಡುಕಬೇಕೆನಿಸಿತು. ಪರಿಚಯದವರೊಬ್ಬರ ಮೂಲಕ ಶಿಕ್ಷಣಾಧಿಕಾರಿಗಳ ಕಛೇರಿಗೆ ಹೋದರು. ಅಲ್ಲಿಯ ಕಾರಕೂನನ ಮೂಲಕ ಪ್ರಯತ್ನಿಸಿ ಒಂದು ವಾರದೊಳಗೆ ನೇಮಕಾತಿಯ ಆದೇಶ ಕೊಡಿಸುವ ಭರವಸೆ ಪಡೆದು ಮರಳಿದರು. ಅಂದೇ ಮುನಸಿಪಾಲ್ಟಿ ಕೆಲಸ ಬಿಟ್ಟು ಬಿಟ್ಟರು.

ಅದೇ ದಿನ ಕೃಷ್ಣಶರ್ಮರು ಕೊಪ್ಪಳ ಜಯರಾಮಾಚಾರ್ಯರ ಹರಿಕೀರ್ತನೆಗೆ ಹೋಗಿ ಅನಿರೀಕ್ಷಿತವಾಗಿ ಹಿಮ್ಮೇಳಕ್ಕೆ ಹಾಡುವ ಅವಕಾಶ ಪಡೆದರು. 'ರಕ್ಷಿಸು ಕರ್ನಾಟಕದೇವಿ' ಎಂಬ ಶಾಂತ ಕವಿಗಳ ಹಾಡನ್ನು ಹಾಡುವ ಮೂಲಕ ಗಮನ ಸೆಳೆದದ್ದೂ ಅಲ್ಲದೆ ಶ್ರೀಯುತ ನರಸಿಂಹಾಚಾರ್ಯ ಪುಣೇಕರ (ಕಾವ್ಯಾನಂದ) ಅವರ ಸಂಪರ್ಕ ಒದಗಿದ್ದು ಆನಂದಕಂದರ ಬದುಕಿಗೆ ಮತ್ತೊಂದು ತಿರುವನ್ನು ನೀಡಲು ಕಾರಣವಾಯಿತು. ಕಾವ್ಯಾನಂದರು ಆನಂದಕಂದರ ಕೈನೋಡಿ 'ಇದು ಮಾಸ್ತರನಾಗುವ ಕೈಯಲ್ಲ, ಕೀರ್ತಿಶಾಲಿಯಾಗಿ ಬಾಳಬೇಕಾದ ಅವಕಾಶ ಹೊಂದಿರುವ ಕೈ' ಎಂದು ಹೇಳಿ ತಮ್ಮೊಂದಿಗೆ ಕಿತ್ತೂರಿಗೆ ಕರೆದೊಯ್ದರು. ಕಾವ್ಯಾನಂದರ ಶಿಷ್ಯನಾಗಿ ಸಂಸ್ಕೃತ ಪಾಠಗಳನ್ನು ಕಲಿತು ಹೊಸದಾದ ಕನ್ನಡಾಭಿಮಾನ ಹಾಗೂ ರಾಷ್ಟ್ರೀಯ ಪ್ರಜ್ಞೆಯನ್ನು ಪಡೆದುಕೊಂಡು ಕಾವ್ಯಾನಂದರ ಆರ್ಥಿಕ ಸ್ಥಿತಿಯ ಕಾರಣದಿಂದ ಅಲ್ಲಿಂದ ಮರಳಿ ಬರಬೇಕಾಯಿತು. ಕಾವ್ಯಾನಂದರ

ನೇತೃತ್ವದಲ್ಲಿ ಆನಂದಕಂದರಿಗೆ 'ಕವಿಭೂಷಣ' ಎಂಬ ಬಿರುದನ್ನು ಕೊಟ್ಟು ಕಿತ್ತೂರಿನ ಜನತೆ ಅವರನ್ನು ಗೌರವಿಸಿತು. ಬೆಳಗಾವಿಯಲ್ಲಿ ಮಾಸ್ತರಿಕೆ ಕೆಲಸದ ಅವಕಾಶವನ್ನೂ ತಪ್ಪಿಸಿಕೊಂಡು ಮರಳಿ ಬೆಟಗೇರಿ ತಲುಪಿದ ಆನಂದಕಂದರು ಆಯುರ್ವೇದದ ಪುಸ್ತಕಗಳನ್ನು ಅಭ್ಯಸಿಸಲು ಆರಂಭಿಸಿದರು. ಅಷ್ಟೊತ್ತಿಗೆ ಮೂಡಲಗಿಯ ರಾಷ್ಟ್ರೀಯ ಶಾಲೆಯೊಂದರಲ್ಲಿ ಅಧ್ಯಾಪಕರು ಬೇಕೆಂಬ ಜಾಹೀರಾತನ್ನು ನೋಡಿ ಅರ್ಜಿ ಹಾಕಿದರು. ೧೯೧೮ ರಲ್ಲಿ ಮೂಡಲಗಿಯ ರಾಷ್ಟ್ರೀಯ ಶಾಲೆಗೆ ಸೇರಿಕೊಂಡು ಆರು ತಿಂಗಳು ಸೇವೆ ಸಲ್ಲಿಸಿದರು. ೧೯೨೧ರಲ್ಲಿ ಮತ್ತೆ ಬೆಳಗಾವಿಯ ರಾಷ್ಟ್ರೀಯ ಶಿಕ್ಷಣ ಸಮಿತಿಗೆ ಇವರ ಅರ್ಜಿ ತಲುಪಿ ಕೃಷ್ಣಶರ್ಮರ ಶಕ್ತಿ ಸಾಮರ್ಥ್ಯವನ್ನು ಬಲ್ಲ ಡಾ. ಸವಣೂರ ಎಂಬುವರು ಬೆಳಗಾವಿಯ ರಾಷ್ಟ್ರೀಯ ಶಾಲೆಗೆ ಬಂದು ಕೆಲಸಕ್ಕೆ ಸೇರಬಹುದೆಂದು ಪತ್ರ ಬರೆದರು. ಅವರ ಸೂಚನೆಯ ಮೇರೆಗೆ ಇವರು ಬೆಳಗಾವಿಯ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿಯನ್ನು ಕಂಡರು. ಅವರು ಶಾಲೆಯ ಹೆಡ್‌ಮಾಸ್ತರರಾದ ಬಾಬಾಸಾಹೇಬ ಸೋಮಣ್ಣವರಲ್ಲಿಗೆ ಕಳಿಸಿ ಅಧಿಕೃತವಾಗಿ ಅಂದೇ ಕೆಲಸಕ್ಕೆ ಸೇರುವಂತಾಯಿತು. ಅಲ್ಲದೆ ಕೃಷ್ಣಶರ್ಮರು ಇಷ್ಟಪಟ್ಟರೆ ಸ್ವರಾಜ್ಯ ಆಶ್ರಮದಲ್ಲಿಯೇ ಉಳಿಯಬಹುದೆಂಬ ಆಮಂತ್ರಣವನ್ನೂ ನೀಡಿದರು. ಇದರಿಂದ ಊಟ, ವಸತಿಗಳ ತೊಂದರೆಯೂ ತಪ್ಪಿದ್ದಲ್ಲದೆ ರಾಷ್ಟ್ರೀಯ ಭಾವನೆಯ ವಿಕಾಸಕ್ಕೆ ಅವಕಾಶವಾಯಿತೆಂಬ ಸಂಭ್ರಮವೂ ಉಂಟಾಯಿತು.

ಆಶ್ರಮದಲ್ಲಿ ಅಡಿಗೆಯ ಆಳುಗಳು ಸರಿಯಾಗಿ ಹೊಂದಾಣಿಕೆಯಾಗದೆ ತಾವೇ ಸರದಿಯಂತೆ ಅಡಗಿ ಮಾಡಿಕೊಳ್ಳುವ ಸ್ವಯಂಸೇವಾ ಪದ್ಧತಿಯನ್ನು ಅನುಸರಿಸಿ ಅಲ್ಲಿನ ಕೆಲಸಗಳನ್ನೆಲ್ಲ ಮಾಡಿಕೊಳ್ಳಬೇಕಾಗಿತ್ತು. ಆಶ್ರಮದಲ್ಲಿದ್ದ ಒಟ್ಟು ಮೂವತ್ತೈದು ಜನರಲ್ಲಿ ಇಪ್ಪತ್ತೈದರಷ್ಟು ಜನರು ಮರಾಠಿಗರು. ಎಲ್ಲ ಕಡೆ ಮರಾಠಿ ವಾತಾವರಣ. ಇದರಿಂದ ಬೆಟಗೇರಿಯವರಲ್ಲಿ ಕನ್ನಡಾಭಿಮಾನದ ಕೆಚ್ಚು ನಿರ್ದಿಷ್ಟ ರೂಪ ತಳೆದು ಮೂಡತೊಡಗಿತು. ರಾಷ್ಟ್ರೀಯತೆ ಅಂತಿಮ ಆಶಯವಾಗಿದ್ದರೂ ಕರ್ನಾಟಕದ ಏಕೀಕರಣವೂ ಸ್ವಾತಂತ್ರ್ಯದಷ್ಟೇ ಮಹತ್ವದ್ದೆಂದು ಆಲೂರು ವೆಂಕಟರಾಯರಂತಹ ಮಹನೀಯರು ಮನಗಂಡು ಅದನ್ನು ಚಳುವಳಿಯಾಗಿ ರೂಪಿಸತೊಡಗಿದ್ದರು. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು ಕೂಡ ಭಾಷಾವಾರು ಪ್ರಾಂತಗಳ ವಿಂಗಡಣೆಯ ನಿಲುವನ್ನು ಆಗಲೇ ರೂಪಿಸಿಕೊಂಡಿತ್ತು. ಇಂಥ ವಾತಾವರಣದಲ್ಲಿ ಕೃಷ್ಣಶರ್ಮರು ಕರ್ನಾಟಕ ಹಾಗೂ ಭಾರತ ಎರಡನ್ನೂ ಕುರಿತ ಹಾಡುಗಳನ್ನು ಬರೆದು ಅಲ್ಲಿನ ಪ್ರಾರ್ಥನೆಗಳಲ್ಲಿ ಸೇರಿಸಲು ಯಶಸ್ವಿಯಾಗಿದ್ದರು. ಶಾಂತಕವಿಗಳ ಹಾಡುಗಳೂ ಅಲ್ಲಿ ಹಾಡಲ್ಪಡುತ್ತಿದ್ದವು. ಸ್ವರಾಜ್ಯ ನಿಧಿ ಸಂಗ್ರಹಕ್ಕಾಗಿಯೂ ಪಥಸಂಚಲನ ಸಂದರ್ಭಕ್ಕೆ ಬೆಟಗೇರಿಯವರು ಕನ್ನಡ ಹಾಡುಗಳನ್ನು ಸ್ವತಃ ಬರೆದು ಸೇರಿಸಿದರು. ಇದು ಹೊಟ್ಟೆಪಾಡಿನ ವೃತ್ತಿ ಜೀವನವಾಗಿದ್ದರೂ ನಾಡು-ನುಡಿ ಹಾಗೂ ರಾಷ್ಟ್ರೀಯ

ಸ್ವಾತಂತ್ರ್ಯ ಆಂದೋಲನದ ಭಾಗವೂ ಆಗಿದ್ದು ಅವರಿಗೆ ವಿಶೇಷ ಧನ್ಯತೆಯನ್ನು ನೀಡಿತ್ತು. ರಾಷ್ಟ್ರೀಯ ಸೇವಾ ಕಾರ್ಯಕರ್ತರಾಗಿ ತಿಲಕ ಹಾಗೂ ಗಾಂಧೀಜಿ ಇಬ್ಬರ ಪ್ರಭಾವಕ್ಕೂ ಆನಂದಕಂದರು ತಮ್ಮನ್ನು ಒಡ್ಡಿಕೊಂಡಿದ್ದರು. ಮೂರು ವರ್ಷ ಬೆಳಗಾವಿಯಲ್ಲಿ ಸೇವೆ ಸಲ್ಲಿಸುತ್ತಿದ್ದಂತೆ ಯಮಕನಮರಡಿಯ ರಾಷ್ಟ್ರೀಯ ಶಾಲೆಯಲ್ಲಿ ಉಂಟಾದ ಸಮಸ್ಯೆಯ ಕಾರಣದಿಂದ ಆನಂದಕಂದರು ಅಲ್ಲಿಗೆ ಧಾವಿಸಬೇಕಾಯಿತು. ಕನ್ನಡ ಕವಿಗಳ ಕಾವ್ಯವಾಚನದಿಂದ ಬಸವಜಯಂತಿ, ಶಿವಜಯಂತಿಗಳಿಗಾಗಿ ಬರೆದುಕೊಟ್ಟ ಹಾಡುಗಳಿಂದ ಸ್ವತಃ ಕೀರ್ತನಕಾರರಾಗಿ ಕೀರ್ತನೆಗಳನ್ನು ನಡೆಸಿಕೊಡುವ ಮೂಲಕ ಜನರ ಮನಸ್ಸು ಗೆಲ್ಲುವುದಷ್ಟೇ ಅಲ್ಲ ಜನರನ್ನು ಒಗ್ಗೂಡಿಸುವ ಹಾಗೂ ನಾಡುನುಡಿಗಳ ಕುರಿತು ರಾಷ್ಟ್ರದ ಸ್ವಾತಂತ್ರ್ಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಸಫಲರಾದರು. ಮರಳಿ ಬೆಳಗಾವಿಗೆ ಬಂದರಾದರೂ ಹುದಲಿಯ ರಾಷ್ಟ್ರೀಯ ಶಾಲೆಯಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದರಾದರೂ ಬೆಳಗಾವಿಯೇ ಅವರ ಕಾರ್ಯಕ್ಷೇತ್ರವಾಗಿತ್ತು. ೧೯೨೪ರ ಡಿಸೆಂಬರ ೨೪ ರಂದು ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂ ಸೇವಕರಾಗಿ ದುಡಿದದ್ದು ಅಲ್ಲದೆ ಸ್ವಾಗತಗೀತೆ ರಚಿಸಿಕೊಟ್ಟರು. ೧೯೨೫ ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಂಘಟನೆಯ ಹೊಣೆಯನ್ನೂ ನಿಭಾಯಿಸಿದರು. ಈ ಸಂದರ್ಭದಲ್ಲಿ ಸಂಪರ್ಕಕ್ಕೆ ಬಂದ ಶ್ರೀ ಪೋತದಾರ ರಂಗನಾಥರಾಯರು ಆನಂದಕಂದರು ಧಾರವಾಡದ ರಾಷ್ಟ್ರೀಯ ಶಾಲೆಗೆ ಬರಲು ಕಾರಣರಾದರು. ಗೆಳೆಯರ ಗುಂಪಿನ ಸದಸ್ಯರಾಗಿ ಬೇಂದ್ರೆ, ಶಂಬಾ ಮೊದಲಾದವರ ಸಹವಾಸದಲ್ಲಿ ಸಮಗ್ರ ಕನ್ನಡ ಸಾಹಿತ್ಯವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿದರು. ಕವಿಯಾಗಿ, ಕತೆಗಾರನಾಗಿ, ಪತ್ರಿಕಾ ಸಂಪಾದಕನಾಗಿ ಧಾರವಾಡದಲ್ಲಿ ಅವರ ವ್ಯಕ್ತಿತ್ವ ಮತ್ತಷ್ಟು ಪ್ರೌಢ ನೆಲೆಗಳತ್ತ ವಿಕಾಸಕ್ಕೆ ಅಣಿಗೊಂಡಿತು. ನಾಡಹಬ್ಬದ ಆಚರಣೆ ಕೂಡ ಇದೇ ಅವಧಿಯಲ್ಲಿ ಆರಂಭವಾಯಿತು. ಆದರೆ ಎರಡು ವರ್ಷಗಳಲ್ಲಿ ಇಲ್ಲಿನ ಸೇವೆ ಕೊನೆಗೊಂಡು ಬೆಂಗಳೂರಿನ ಆರ್ಯ ವಿದ್ಯಾ ಶಾಲೆಗೆ ದೇವುಡು ನರಸಿಂಹಶಾಸ್ತ್ರಿಗಳ ಕೋರಿಕೆಯ ಮೇರೆಗೆ ಸೇರಿಕೊಳ್ಳಬೇಕಾಯಿತು. ಮಾಸ್ತಿ ಮೊದಲಾದ ಹಿರಿಯರ ಸಂಪರ್ಕ ಅಲ್ಲಿ ಒದಗಲು ಅವಕಾಶವಾದದ್ದು ಬಿಟ್ಟರೆ ಹೆಚ್ಚಿನ ತೃಪ್ತಿಕರ ವಾತಾವರಣದಲ್ಲಿ ಕೆಲಸ ನಿರ್ವಹಿಸಲು ಆನಂದಕಂದರಿಗೆ ಸಾಧ್ಯವಾಗಲಿಲ್ಲ. ಮೈಸೂರಿನ ಮುಂಡಾಸು ತೊಟ್ಟುಕೊಂಡೇ ಶಾಲೆಗೆ ಬರಬೇಕೆಂದು ಒತ್ತಾಯಿಸಿದ್ದು ಇವರಿಗೆ ಸರಿಬೀಳಲಿಲ್ಲ. ಅದು ತಮ್ಮ ಸ್ವಾಭಿಮಾನಕ್ಕಷ್ಟೇ ಅಲ್ಲ ಸ್ವಾತಂತ್ರ್ಯಕ್ಕೂ ಕುಂದುಂಟು ಮಾಡುವಂತಹ ದೆಂದು ಅದನ್ನು ದಿಟ್ಟವಾಗಿ ನಿರಾಕರಿಸಿದರು. ಇದಕ್ಕಾಗಿ ಅನೇಕರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಮೂರು ವರ್ಷ ಹೇಗೋ ಹೊಂದಾಣಿಕೆ ಮಾಡಿಕೊಂಡು ಸೇವಾನಿರತರಾದ ಅವರು ಕೊನೆಗೂ ಆ ಉಸಿರುಗಟ್ಟಿಸುವ ವಾತಾವರಣದಿಂದ

ಸ್ವಯಂ ರಾಜೀನಾಮೆ ನೀಡಿ ಹೊರಬಂದರು. ಒಂಬತ್ತು ವರ್ಷಗಳ ಒಟ್ಟು ಶಿಕ್ಷಕ ವೃತ್ತಿ ಇಲ್ಲಿಗೆ ಮುಕ್ತಾಯವಾದಂತಾಯಿತು. ಬೆಂಗಳೂರಿನಿಂದ ನೇರವಾಗಿ ಬೆಟಗೇರಿಗೆ ಬಂದು ನಾಲ್ಕು ತಿಂಗಳು ಅಲ್ಲಿಯೇ ಉಳಿದುಕೊಂಡರು. "ಈ ಹೊತ್ತಿಗೆ ಆಲೂರು ವೆಂಕಟರಾಯರು ಸ್ಥಾಪಿಸಿ ನಡೆಸುತ್ತಿದ್ದ 'ಜಯಕರ್ನಾಟಕ' ಮಾಸಪತ್ರಿಕೆಯು ಗೆಳೆಯರ ಗುಂಪಿನ ಕಡೆಗೆ ಬಂದಿತ್ತು. ಗೆಳೆಯರ ಗುಂಪಿನಲ್ಲಿ ಒಬ್ಬರಾದ ಶ್ರೀ ಶಂಬಾ ಜೋಶಿ ಅವರು 'ಜಯಕರ್ನಾಟಕ'ದ ಸಂಪಾದಕತ್ವ ವಹಿಸಿಕೊಳ್ಳಲು ಶ್ರೀ ಬೆಟಗೇರಿ ಅವರಿಗೆ ಆಗ್ರಹದ ಕರೆಯಿತ್ತರು. ಶ್ರೀ ಬೆಟಗೇರಿಯವರು ಮರಳಿ ಧಾರವಾಡಕ್ಕೆ ಬಂದರು."[೧೨] ಮೊದಲು ಸಂಪಾದಕ ಮಂಡಲ ಸೇರಿದ ಆನಂದಕಂದರು ೧೯೩೧ ರಿಂದ ಎರಡು ವರ್ಷ ಹಾಗೂ ೧೯೩೫ ರಿಂದ ಒಂದೂವರೆ ವರ್ಷ ಸಂಪಾದಕರಾಗಿ ಕಾರ್ಯ ಮಾಡಿದರು. ೧೯೩೭ ರಲ್ಲಿ 'ಜಯಕರ್ನಾಟಕ' ತೊರೆದು ಸಂಸಾರದ ವೆಚ್ಚಗಳ ನಿರ್ವಹಣೆಗಾಗಿ ಸಂಯುಕ್ತ ಕರ್ನಾಟಕ ಸೇರಿದರು. ಎಂ.ಎ. ಓದುತ್ತಿದ್ದ ತಮ್ಮ ವಿಜಯೇಂದ್ರನ ಖರ್ಚು ವೆಚ್ಚಕ್ಕಾಗಿ ಹೆಣಗಾಡುತ್ತಿದ್ದ ಆನಂದಕಂದರು ಆ ತಮ್ಮನನ್ನೇ ಕಳೆದುಕೊಳ್ಳುವ ಪ್ರಸಂಗದಿಂದ ಕಂಗೆಟ್ಟು ಮರಳಿ ಬೆಟಗೇರಿಗೆ ಹೋಗಿ ನೆಲೆಸಿದರು.

ಆದರೆ ಶಂಬಾ ಜೋಶಿಯವರು, ಬೆಟಗೇರಿಯವರು ಧಾರವಾಡಕ್ಕೆ ಬಂದು 'ಜಯಂತಿ' ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿ ಹೊತ್ತುಕೊಳ್ಳಬೇಕೆಂದು ಮತ್ತೆ ಮತ್ತೆ ಆಗ್ರಹಿಸಿದರು. ಬೆಟಗೇರಿಯಲ್ಲಿ ಕೂತು ದುಃಖ ದ್ವಿಗುಣಗೊಳಿಸಿಕೊಳ್ಳುವ ಬದಲು ಕರ್ತವ್ಯದೆಡೆಗೆ ಗಮನಹರಿಸಿ, ಧಾರವಾಡಕ್ಕೆ ಬಂದರೆ ಮಹತ್ವದ ಕೆಲಸಗಳಾಗಲಿವೆ ಎಂದು ಹುರಿದುಂಬಿಸಿದರು. ತಮ್ಮ ವೈಯಕ್ತಿಕ ದುಃಖ ದುಮ್ಮಾನಗಳನ್ನು ಬದಿಗಿಟ್ಟು ನಾಡ ಸೇವೆಯ ಈ ಅವಕಾಶವನ್ನು ಒಪ್ಪಿಕೊಂಡು ೧೯೩೮ರ ಮೇ ತಿಂಗಳಲ್ಲಿ ಆರಂಭವಾದ 'ಜಯಂತಿ' ಪತ್ರಿಕೆಯನ್ನು ಸಂಪಾದಕರಾಗಿ ೨೩ ವರ್ಷಗಳ ಕಾಲ ನಿರಂತರ ಏಕಾಂಗಿಯಾಗಿ ಮುನ್ನಡೆಸಿದರು.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪತ್ರಿಕೋದ್ಯಮದ ಪಾತ್ರ ದೊಡ್ಡದು. ಉದ್ಯಮವಾಗಿ ಬೆಳೆದ ಪತ್ರಿಕೆಗಳು ನಿರಂತರ ಉಳಿದುಕೊಂಡು ಬಂದಿರುವಂತೆ ಸಾಹಿತ್ಯಿಕ ಪತ್ರಿಕೆಗಳನ್ನು ನಡೆಸಿಕೊಂಡು ಹೋಗುವುದು ಸುಲಭ ಸಾಧ್ಯವಲ್ಲ ಎಂಬುದಕ್ಕೆ ನಮ್ಮಲ್ಲಿ ಚರಿತ್ರೆಯೇ ಇದೆ. ಚಂದಾದಾರರನ್ನವಲಂಬಿಸಿ ಪತ್ರಿಕೆಯ ಖರ್ಚನ್ನು ನಿಭಾಯಿಸುವುದೇ ಕಷ್ಟವಿರುವಾಗ ಸಾಹಿತ್ಯಿಕ ಪತ್ರಿಕೆಯೊಂದನ್ನು ಉಪಜೀವನದ ಸಾಧನವಾಗಿ ಬಳಸಿಕೊಳ್ಳುವದಂತೂ ಕನಸಿನ ಮಾತು. ಇಂಥ ಕನಸನ್ನು ನಿಜವಾಗಿಸಿದ ಅಪರೂಪದ ಉದಾಹರಣೆ ಆನಂದಕಂದರದು. ಕೌಟುಂಬಿಕ

---

೧೨. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೧೧೦

ಹಿನ್ನೆಲೆಯಲ್ಲಿ ಬಡತನದ ಕಹಿಗಳನ್ನು ಅನುಭವಿಸಿ ಪಳಗಿದ ಆನಂದಕಂದರು 'ಜಯಂತಿ'ಯನ್ನು ಲಾಭ ನಷ್ಟದ ಪರಿವೆಯಿಲ್ಲದೆ, ಕುಟುಂಬ ನಿರ್ವಹಣೆಯ ಸಂಕಷ್ಟಗಳ ಬೇಗೆಯನ್ನು ಅನುಭವಿಸುತ್ತ ದಡ ಮುಟ್ಟಿಸಿದ್ದು ಒಂದು ಸಾಹಸವೇ ಸರಿ. ಶ್ರೀಯುತರುಗಳಾದ ಶಂಕರರಾವ ಜಠಾರ, ವ್ಹಿ.ವಾಯ್.ಜಠಾರ, ಸಿ.ಡಿ.ದೇಶಪಾಂಡೆ, ಎಂ.ಜಿ. ಪಾಟೀಲ ಮೊದಲಾದವರು ಕೈತುಂಬ ಲಾಭ ತರುವ ಪತ್ರಿಕಾ ವ್ಯವಸಾಯವಾಗಿ 'ಜಯಂತಿ'ಯನ್ನು ಆರಂಭಿಸಿದರು. ಇದು ಲಾಭದಾಯಕವಲ್ಲವೆಂದು ತಿಳಿದ ಮೇಲೆ ಹಿಂದೆ ಸರಿದರು. ಶುರುವಾದ ಮೂರೇ ವರ್ಷಗಳಲ್ಲಿ ಅಂದರೆ ೧೯೪೧ ರಲ್ಲಿ 'ಜಯಂತಿ'ಯ ಸಂಪೂರ್ಣ ಜವಾಬ್ದಾರಿ ಆನಂದಕಂದರ ಕೊರಳಿಗೆ ಬಿತ್ತು. ಅದರ ಒಟ್ಟು ಸ್ವರೂಪ, ಸಾಧನೆಗಳ ಕುರಿತು ಮುಂದೆ ವಿವರಿಸಲಾಗುತ್ತದೆ. ಇಲ್ಲಿ ಆನಂದಕಂದರ ಉಪಜೀವನದ ವೃತ್ತಿಯಾಗಿ 'ಜಯಂತಿ'ಯ ಪಾತ್ರ ಕುರಿತು ಮಾತ್ರ ಪ್ರಸ್ತಾಪಿಸಲಾಗಿದೆ. ಇದು ಆನಂದಕಂದರು ಸಂಪೂರ್ಣ ಶ್ರದ್ಧೆಯಿಂದ ತೊಡಗಿಕೊಳ್ಳಲು ಅವಕಾಶವೊದಗಿಸಿದ ವೃತ್ತಿಯಾಗಿತ್ತೇ ಹೊರತು ಲಾಭವಿರಲಿ, ನಷ್ಟದ ಪ್ರಮಾಣ ಕಡಿಮೆ ಮಾಡಿಕೊಂಡರೆ ಸಾಕೆಂಬುದೇ ಸಂಪಾದಕರ ಅರ್ಥಿಕ ನಿರೀಕ್ಷೆಯಾಗಿತ್ತು. ಆದಾಗ್ಯೂ ತಮ್ಮ ಬೇರೆ ರೀತಿಯ ಸಂಪನ್ಮೂಲಗಳಿಂದ ಒದಗಿದ ಹಣವನ್ನೂ ಅಲ್ಲದೆ ಹೆಂಡತಿಯ ಆಭರಣಗಳನ್ನು ಮಾರಿ ಪತ್ರಿಕೆಯನ್ನು ನಡೆಸಿಕೊಂಡು ಹೋಗಬೇಕಾಯಿತು. ಅಷ್ಟೇ ಅಲ್ಲ ಜಯಂತಿ ಆನಂದಕಂದರ ತಲೆಯ ಮೇಲೆ ಹೊರೆಸಿದ ಸಾಲದ ಹೊರೆ, ಇಪ್ಪತ್ತು ವರ್ಷಗಳಲ್ಲಿ ೧೪,೦೦೦=೦೦ ರೂಪಾಯಿಗಳಷ್ಟು. ಆ ಕಾಲದಲ್ಲಿ ೧೪,೦೦೦=೦೦ ಕಡಿಮೆ ಹಣವೇನಲ್ಲ. ಇಂಥ ಕಷ್ಟ-ನಷ್ಟಗಳಿಂದ ನೊಂದ ಆನಂದಕಂದರು ಆ ಸಂದರ್ಭದ ತಮ್ಮ ನೋವನ್ನು ಆಪ್ತರೊಬ್ಬರಿಗೆ ತೋಡಿಕೊಂಡು ಬರೆದ ಪತ್ರ ಆ ಕಾಲದ ಅವರ ಜೀವನ ನಿರ್ವಹಣೆಯ ದುರ್ಭರತೆಯನ್ನು ಬಿಂಬಿಸುವಂತಿದ್ದು, ಅದರ ಆಯ್ದ ಪಠ್ಯವನ್ನಿಲ್ಲಿ ಕೊಡಲಾಗಿದೆ. ಶ್ರೀ ಸಗರ ಕೃಷ್ಣಮಾಚಾರ್ಯರಿಗೆ ಬರೆದ ಪತ್ರವಿದು. ಪತ್ರ ದಿನಾಂಕ ೨೪-೧-೧೯೫೮.

"…. ನಾಳೆಯ ಮೇ ತಿಂಗಳಿಗೆ ಜಯಂತಿ ತನ್ನ ೨೦ ವರ್ಷಗಳನ್ನು ಮುಗಿಸುವುದು. ಈ ಅವಧಿಯಲ್ಲಿ ಜಯಂತಿ ನನ್ನ ತಲೆಯ ಮೇಲೆ ಹೊರಿಸಿರುವ ಆರ್ಥಿಕ ಹೊರೆಯಿಂದ ನಾನು ನಿತ್ರಾಣನಾಗಿದ್ದೇನೆ. ನಿರುತ್ಸಾಹಿಯಾಗಿದ್ದೇನೆ. ಆದುದರಿಂದ, ಮುಂದೆ ಹೇಗಾದರೂ ಆಗಲಿ ಜಯಂತಿಯಿಂದ ನಾನು ನಿವೃತ್ತನಾಗಬೇಕೆಂದು ನಿರ್ಣಯಿಸಿದ್ದೇನೆ. ಯಾರಾದರೂ ಹೊಸ ಉತ್ಸಾಹಿಗಳು ಮುಂದೆ ಬಂದು ಜಯಂತಿಯನ್ನು ಮುಂದುವರೆಸಿದರೆ ಒಳ್ಳೆಯದು. ಇಲ್ಲವಾದರೆ ಜಯಂತಿಯ ಅವತಾರ ಮುಗಿಯಬಹುದು.

ಜಯಂತಿಯಂತಹ ಪತ್ರಿಕೆಯ ಅಸ್ತಿತ್ವದ ಅವಶ್ಯಕತೆ ಜನತೆಗೆ ಇಲ್ಲ. ದೈನ್ಯಭಾವದ ಯಾಚಕ ವೃತ್ತಿ ನನ್ನ ಸ್ವಭಾವಕ್ಕೆ ಒಗ್ಗುವುದಿಲ್ಲ ....''[೧೩] ಕನ್ನಡದ ಧೀರ ಪತ್ರಿಕೋದ್ಯಮಿಯಾಗಿದ್ದ ಮೊಹರೆ ಹನುಮಂತರಾಯರು ಜಯಂತಿಗಾಗಿ ಪುಕ್ಕಟೆ ಕಾಗದ ಒದಗಿಸಿದ್ದರಿಂದ ಚಿತ್ರಗುಪ್ತ, ಕೊರವಂಜಿ, ಕನ್ನಡ ನುಡಿಗಳಂತಹ ಸಹ ಪತ್ರಿಕೆಗಳ ಸಹಕಾರದಿಂದ ಮುಂದಿನ ಎರಡು ವರ್ಷ ಪತ್ರಿಕೆ ನಡೆಯಲು ಸಾಧ್ಯವಾಯಿತು. ೧೯೪೧-೧೯೪೪ರ ಅವಧಿಯಲ್ಲಿ ವಾಗ್ಭೂಷಣದ ಸಂಪಾದಕರಾಗಿ ಬೇಂದ್ರೆಯವರೊಂದಿಗೆ ಕಾರ್ಯ ನಿರ್ವಹಣೆ ಮಾಡಿದ್ದೂ ಗಮನಿಸಬೇಕಾದ ಸಂಗತಿ.

**೪.ಕೌಟುಂಬಿಕ ಜೀವನ :**

ಆನಂದಕಂದರು ಹುಟ್ಟಿ ಬೆಳೆದ ಕುಟುಂಬದ ಹಿನ್ನೆಲೆಯನ್ನು ವಿವರವಾಗಿ ಈಗಾಗಲೇ ನೋಡಿದ್ದೇವೆ. ಯಾವುದೇ ವ್ಯಕ್ತಿಯ ಸಾರ್ವಜನಿಕ ಹಾಗೂ ಸಾಂಸ್ಕೃತಿಕ ಬದುಕಿನ ಆಯಾಮಗಳು ಎಷ್ಟೇ ವಿಶಾಲ ಹಾಗೂ ಗಹನ ಸ್ವರೂಪದವುಗಳಾಗಿದ್ದರೂ ಸ್ವಂತ ಕುಟುಂಬದ ಕೇಂದ್ರವೊಂದರ ನಿಯಂತ್ರಣ ಹಾಗೂ ಜವಾಬ್ದಾರಿಗಳ ಮುಖವು ಮಹತ್ವದ್ದಾಗಿದ್ದು ಬದುಕಿನ ಎಲ್ಲ ಆಸಕ್ತಿಗಳನ್ನು ಪ್ರಭಾವಿಸುವ ನಿರ್ಣಾಯಕ ಸಂಗತಿಯೂ ಆಗಬಲ್ಲದು. ತಂದೆಯ ವಿರಕ್ತಿ ಹಾಗೂ ತಾಯಿಯ ಜೀವನ ಪ್ರೀತಿಗಳನ್ನು ಬಳುವಳಿಯಾಗಿ ಪಡೆದಿದ್ದ ಆನಂದಕಂದರು ಸಾಂಸಾರಿಕ ಆಸಕ್ತಿಗಳಗಿಂತ ಸಾಂಸ್ಕೃತಿಕ ನೆಲೆಗಳತ್ತ, ಸಾಮಾಜಿಕ ನೆಲೆಗಳತ್ತ ಹೆಚ್ಚಿನ ಕ್ರಿಯಾಶೀಲ ತುಡಿತಗಳನ್ನು ಹೊಂದಿದವರಾಗಿದ್ದರು. ಆದ್ದರಿಂದ ಅವರ ೨೮ನೆಯ ವಯಸ್ಸಿನವರೆಗೂ ಯಾರೂ ಅವರಿಗೆ ಕನ್ಯೆಯನ್ನು ಕೊಡಲು ಮುಂದಾಗಿರಲಿಲ್ಲ. ಕೃಷ್ಣಶರ್ಮರ ಅಣ್ಣ ಬಲರಾಮನಿಗೆ ಇದು ಚಿಂತೆಯ ಸಂಗತಿಯಾಗಿತ್ತು. ತಂದೆ-ತಾಯಿ ಯಾವಾಗಲೋ ಅಗಲಿದ್ದರು. ಕುಟುಂಬದಲ್ಲಿ ಹೊಂದಾಣಿಕೆ ಹಾಗೂ ಆರ್ಥಿಕ ಪರಿಸ್ಥಿತಿಗಳು ಸವಾಲಾಗಿಯೇ ಇದ್ದವು. ಇಂಥ ಪರಿಸ್ಥಿತಿಯಲ್ಲಿ ಆನಂದಕಂದರಿಗೆ ಸ್ವತಃ ವೈವಾಹಿಕ ಬದುಕಿನ ಬಗ್ಗೆ ಅಂಥ ವಿಶೇಷ ಆಸಕ್ತಿ ಇದ್ದಂತೆಯೂ ಇರಲಿಲ್ಲ. ಆದರೆ ಇವರ ಮದುವೆಯಾಗದೆ ಕಿರಿಯ ತಮ್ಮ ಗೋಪಾಲನ ಮದುವೆ ಆಗುವಂತಿರಲಿಲ್ಲ. ಇವರಿಂದಾಗಿ ಕನ್ಯಾನ್ವೇಷಣೆ ಮಾಡುತ್ತಿದ್ದ ಸಂದರ್ಭದ ತೊಡಕನ್ನು ಶ್ರೀ ರಾಘವೇಂದ್ರ ಪಾಟೀಲರು ವಿವರಿಸಿರುವುದು ಹೀಗೆ: "ತಮ್ಮ ವೈವಿಧ್ಯಪೂರ್ಣ, ಮೌಲ್ಯಯುತವಾದ ಚಟುವಟಿಕೆಗಳ ಮೂಲಕ ಕೃಷ್ಣಶರ್ಮರು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದ್ದರು. ಆದರೂ ಯಾಕೋ ಇವರಿಗೆ ಹೆಣ್ಣುಕೊಡಲು ಯಾವ ಕನ್ಯಾಪಿತೃವೂ ಮುಂದೆ ಬರಲಿಲ್ಲ. ಕೃಷ್ಣಶರ್ಮರ ಪ್ರತಿಭಾಶಕ್ತಿಗೆ ಮಾರುಕಟ್ಟೆಯಲ್ಲಿ ಇದ್ದ ಬೆಲೆ ನೋಡಿ!

---

೧೩. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೧೬೭

ಇವರ ತಮ್ಮನಾದ ಗೋಪಾಲನಿಗೆ ಹೆಣ್ಣುಕೊಡಲು ಮುಂದೆ ಬಂದರು. ಆದರೆ ಕವಿಗಳು, ಕಥೆಗಾರರು ಮತ್ತು ಪತ್ರಕರ್ತರೆಂದು ಪ್ರಸಿದ್ಧಿಗಳಿಸಿದ ಕೃಷ್ಣಶರ್ಮರ ಬಗ್ಗೆ ಕನ್ಯಾಪಿತೃಗಳಿಗೆ ಅನುಮಾನವು ವಿಚಿತ್ರವಾಗಿದೆ!"[೧೪]

ಇಂಥ ಸಂದಿಗ್ಧ ಸನ್ನಿವೇಶದಲ್ಲಿ ಇವರ ಸಂಬಂಧಿಗಳಲ್ಲೊಬ್ಬರಾದ ರಾವಜಿಮಾಮಾ ಎನ್ನುವವರು ಇವರಿಗೆ ಹೆಣ್ಣುಕೊಡಲು ಮುಂದೆ ಬಂದರು. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಯಮಕನಮರಡಿಯ ಹತ್ತಿರದ ಪುಟ್ಟ ಹಳ್ಳಿ ಮಣಗುತ್ತಿಯ ಅನಂತರಾವ ಕುಲಕರ್ಣಿಯವರು ರಾವಸಾಹೇಬ ಎನಿಸಿಕೊಂಡಿದ್ದರು. ಅವರನ್ನೇ ಜನ ಅಭಿಮಾನದಿಂದ ರಾವಜೆಪ್ಪ ಎನ್ನುತ್ತಿದ್ದರು. ಅವರ ಪತ್ನಿ ಸರಸ್ವತಿದೇವಿ. ಕುಲಕರ್ಣಿಕೆಯ ಜತೆಗೆ ಊರಿನ ಲಕ್ಷ್ಮಿದೇವಿ ಹಾಗೂ ವಿಠ್ಠಲ ದೇವಸ್ಥಾನಗಳ ಪೂಜಾಧಿಕಾರಿಗಳನ್ನು ಹೊಂದಿದ ಈ ಮನೆತನದ ಹೆಣ್ಣು ಮಗಳು ಸೌ. ತುಳಸಾಬಾಯಿ. ೧೯೨೮ರ ಜೂನ ತಿಂಗಳಲ್ಲಿ ಕೃಷ್ಣಶರ್ಮರನ್ನು ಮದುವೆಯಾಗಿ ರುಕ್ಮಿಣಿ ಎಂಬ ಹೆಸರಿನೊಂದಿಗೆ ಮನೆ-ಮನ ತುಂಬಿದರು. 'ಒಡನಾಡಿ' ಸಂಕಲನದ ಕವನಗಳು ಹುಟ್ಟಲು ಪ್ರೇರಣೆಯಾಗಿ ನಿಂತರು. 'ಒಡನಾಡಿ ಬೇಕೆಂದು ಮಿಡುಕಿಯೇ ಮಿಡಕಿದೆ, ನೀ ಬಂದು ನನ್ನ ಮಿಡುಕ ಕಳೆದೆ' ಎಂಬ ಜೀವ ತಾದಾತ್ಮ್ಯಕ್ಕೆ ಪಾತ್ರವಾದರು.

'ಬಾಳಿದು ಕನಸಲ್ಲ, ಗೋಳಿನ ತಿನಿಸಲ್ಲ,
ನಿನ್ನ - ಹಿಗ್ಗಿನ ಹೊಸ ತೋಟ!
ನಾನೊಂದು ಮಾಮರ, ನೀ ಮಲ್ಲಿಗೆಯ ಬಳ್ಳಿ;
ಚನ್ನೇ ಚನ್ನೆನಿತು ಈ ಕೂಟ. . . ?*

ಎಂಬ ಸಾರ್ಥಕ್ಯ ಭಾವವನ್ನು ಕವಿಯಲ್ಲಿ ಅರಳಿಸಿ ಬಾಳನ್ನು ಬೆಳಗಿದರು.

ಕೃಷ್ಣಶರ್ಮರ ಸೃಜನಶೀಲತೆ, ಪತ್ರಿಕಾ ಸಂಪಾದನೆ, ನಾಡು, ನುಡಿಗಳ ಸಾಂಸ್ಕೃತಿಕ ಚಟುವಟಿಕೆ ಹಾಗೂ ಹೋರಾಟ, ರಾಷ್ಟ್ರೀಯ ಆಂದೋಲನ ಮೊದಲಾದವುಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಳ್ಳಲು ಸಂಪೂರ್ಣ ಸಹಕಾರ ನೀಡಿದವರು ರುಕ್ಮಿಣಿದೇವಿಯವರು. ಸಂಸಾರದ ಹೊರೆ ನಿಭಾಯಿಸುವಲ್ಲಿ ತಂದೆಯಂತೆಯೆ ಅನಾಸಕ್ತರಾಗಿದ್ದ ಕೃಷ್ಣಶರ್ಮರ ಕೌಟುಂಬಿಕ ಜವಾಬ್ದಾರಿಗಳನ್ನು ಗೊಣಗಾಟವಿಲ್ಲದೆ ಸಹಿಸಿಕೊಂಡು, ತೂಗಿಸಿಕೊಂಡು ಬಂದ ರುಕ್ಮಿಣಿದೇವಿ ಅಳುನುಂಗಿ ನಗುವ

---

೧೪. ಆನಂದಕಂದ-ರಾಘವೇಂದ್ರ ಪಾಟೀಲ, ಪು. ೨೯

* ಒಡನಾಡಿ ಪು-೫೦

ಭಾರತೀಯ ಮಹಿಳೆಯ ವಿಶೇಷ ಪ್ರತಿನಿಧಿಯಂತೆ ಇದ್ದವರು. ಬಾಳಿನ ಕುಲುಮೆಯಲ್ಲಿ ಬೇಯುತ್ತಲೇ ಐದು ಮಕ್ಕಳಿಗೆ ಜನ್ಮವಿತ್ತ ಈ ತಾಯಿ ತಮ್ಮನ್ನು ಕಾಡಿದ ಕ್ಷಯರೋಗದಿಂದ ೧೯೫೭ರ ಮಾರ್ಚಿನಲ್ಲಿ ಅಕಾಲಿಕವಾಗಿ ಕೊನೆಯುಸಿರೆಳೆದರು. ಕೃಷ್ಣಶರ್ಮರ ಐದು ಮಕ್ಕಳಲ್ಲಿ ಬದುಕಿ ಉಳಿದವರು ಮೂರು ಜನ ಮಾತ್ರ. ಇಬ್ಬರು ಹೆಣ್ಣು ಮಕ್ಕಳಾದ ಸೌ. ವೈಜಯಂತಿ, ಸೌ. ಸುಧಾದೇವಿ ಹಾಗೂ ಒಬ್ಬನೇ ಪುತ್ರನಾದ ಶ್ರೀ ಸುರೇಶ ತಮ್ಮ ತಮ್ಮ ಸಂಸಾರ ಒಂದಿಗರಾಗಿ ಬದುಕುತ್ತಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೇವೆಯಲ್ಲಿದ್ದ ಶ್ರೀ ಸುರೇಶ ಅವರು ಇದೀಗ ನಿವೃತ್ತರಾಗಿದ್ದಾರೆ. ಸುರೇಶರ ಹೆಂಡತಿ ಸೌ.ಶಾರದಾದೇವಿ ಕಿತ್ತೂರಿನವರು. ಮೊಮ್ಮಗಳು ಮಾಧವಿ ಹಾಗೂ ಮೊಮ್ಮಗ ಸುಧೀಂದ್ರ ಕೃಷ್ಣಶರ್ಮರ ಮನೆತನದ ಕುಡಿಗಳಾಗಿದ್ದಾರೆ.

ದೈವಿಕ-ನಂಬಿಕೆ, ಆಧ್ಯಾತ್ಮಿಕ ಹಂಬಲ ಹಾಗೂ ಬದುಕಿನ ಕಟುವಾಸ್ತವಗಳೊಂದಿಗೆ ಸೆಣೆಸುವ ಪ್ರಾಯೋಗಿಕ ಪ್ರಜ್ಞೆಗಳನ್ನು ಹೊಂದಿದ್ದ ಕೃಷ್ಣಶರ್ಮರು ಅಪ್ಪಟ ಗಾಂಧೀವಾದಿಯಾಗಿದ್ದರು. ಸರಳ ಬದುಕಿನ ದೀಕ್ಷೆ ತೊಟ್ಟಿದ್ದ ಅವರು ಬದುಕಿನ ಕೊರತೆಗಳನ್ನು, ಕಷ್ಟ ನಷ್ಟಗಳನ್ನು ನಗುತ್ತಲೇ ನಿಭಾಯಿಸಲು ಸಮರ್ಥರಾಗಿದ್ದರು. ತಮ್ಮ ಬದುಕಿನ ಕಠೋರ ವಿಷಾದಗಳನ್ನು ನಗೆಯಲ್ಲಿ ತೇಲಿಸುವ ಅವರ ಜೀವನ ಸ್ವೀಕಾರದ ಮಾದರಿಗೆ ಒಂದು ನಿದರ್ಶನವಾಗಿ ಈ ಮಾತುಗಳನ್ನು ನೋಡಬಹುದು. 'ನನಗೆ ಇಬ್ಬರು ಕ್ಷಯರೋಗಪೀಡಿತ ಹೆಂಡತಿಯರು! ಒಬ್ಬಳು ಆಸ್ಪತ್ರೆಯಲ್ಲಿರುವ ರುಕ್ಮಿಣಿ, ಇನ್ನೊಬ್ಬಳು ಜಯಂತಿ (ಪತ್ರಿಕೆ). ಇವರಿಬ್ಬರ ರೋಗದ ಆಸ್ಪತ್ರೆಯ ಬಿಲ್ಲಿಗಾಗಿ ನಾನು ಹಣ ಹೊಂದಿಸಲು ಸದಾ ಪರದಾಡುತ್ತಿರುತ್ತೇನೆ.''[೧೫]

ಇಂಥ ಕಹಿಗಳನ್ನು ಮರೆತು ಸದಾ ಕ್ರಿಯಾಶೀಲವಾಗಿರುತ್ತಿದ್ದ ಆನಂದಕಂದರ ನಿರಂತರ ಜನಸಂಪರ್ಕ, ಪತ್ರಿಕಾ ಬರಹ, ಸಾರ್ವಜನಿಕ ಜೀವನದ ಸಮಗ್ರ ಕಾಳಜಿಗಳೂ ಹಾಗೂ ಕ್ರಿಯಾಮುಖಿದೋಡಾಟ, ಒಡನಾಟಗಳು ನಿಜವಾದ ತಪಸ್ಸಿಗೆ ಸಮನಾದವುಗಳು. ಅವರ ಸಮಚಿತ್ತದ ಚಿಂತನಗಳು, ಬರಹಗಳು ಅವರ ವ್ಯಕ್ತಿತ್ವದ ಘನತೆಗೆ ನಿದರ್ಶನ. ಆದರೆ ಈ ಎಲ್ಲ ಒತ್ತಡಗಳು ಅವರು ಕವಿಯಾಗಿ ಸಾಧಿಸಬಹುದಾದ ಸೃಜನಶೀಲ ಎತ್ತರಕ್ಕೆ ಕಂಟಕಗಳಾದವೇನೋ ಎಂಬ ಅನುಮಾನ ಸಹಜವಾಗಿಯೇ ಮೂಡುತ್ತದೆ. ಇಂಥ ಹೋರಾಟದ ಜೀವಕ್ಕೆ ಇಳಿಯ ವಯಸ್ಸಿನಲ್ಲಾದರೂ ನೆಮ್ಮದಿಯನ್ನು ಕಂಡುಕೊಳ್ಳುವ ಶಾಂತ ಬದುಕು ಪ್ರಾಪ್ತವಾಗದೆ ಪಾರ್ಶ್ವವಾಯು ಪೀಡಿತರಾಗಿ ಬಳಲುವಂತಾದುದು ವಿಧಿಯ ವಿಕಟಾಟ್ಟಹಾಸವೆನ್ನಬಹುದೇನೋ. ಎಲ್ಲ ಸಂಕಷ್ಟಗಳನ್ನು ಸ್ವಾಭಿಮಾನದಿಂದಲೇ ಜಯಿಸುತ್ತಿದ್ದ

---

೧೫. ಆನಂದಕಂದ-ರಾಘವೇಂದ್ರ ಪಾಟೀಲ, ಪು. ೩೧

ಆನಂದಕಂದರಿಗೆ ಹಾಸಿಗೆ ಹಿಡಿದು ಇನ್ನೊಬ್ಬರಿಗೆ ಅವಲಂಬಿತರಾಗಿ ಬದುಕಬೇಕಾದ ಪ್ರಸಂಗ ೭೭ ನೆಯ ವಯಸ್ಸಿನಲ್ಲಿ ಒದಗಿದ್ದು ಅವರನ್ನು ಸಾಕಷ್ಟು ಜರ್ಜರಿತಗೊಳಿಸಿತ್ತು. ಆದರೂ ಅವರ ಆತ್ಮಬಲ ಕುಗ್ಗಲಿಲ್ಲ. ಹೀಗಾಗಿಯೇ ಮಾತಾಡುವ ಶಕ್ತಿಯನ್ನೇ ಕಳೆದುಕೊಂಡಿದ್ದ ಅವರ ನಾಲಿಗೆ ಮರಳಿ ಮಾತನಾಡುವಲ್ಲಿ ಯಶಸ್ವಿಯಾಗಲು ಸಾಧ್ಯವಾಯಿತು. ಮಲಗಿದಲ್ಲಿಯೇ ಅವರು ನೋಡಲು ಬಂದವರೊಂದಿಗೆ ಮಾತ್ರವಲ್ಲ ವಿದ್ವತ್ ಚರ್ಚೆಗಳನ್ನೂ ಮಾಡಬಲ್ಲವರಾಗಿದ್ದರು. ಸಂಶೋಧನಾಕಾಂಕ್ಷಿಗಳಿಗೆ ಅನೇಕ ವಿಶಿಷ್ಟ ಮಾಹಿತಿಗಳೊಂದಿಗೆ ಮಾರ್ಗದರ್ಶನ ನೀಡಬಲ್ಲವರಾಗಿದ್ದರು. ಹಳಗನ್ನಡ, ಹೊಸಗನ್ನಡದ ಸಾಹಿತ್ಯ ಕೃತಿಗಳ ಕುರಿತು ನಾಡಿನ ರಾಷ್ಟ್ರದ ಸಮಸ್ಯೆಗಳ ಕುರಿತು ಚರ್ಚಿಸುವ ಅವರ ಉತ್ಸಾಹ ಅವರನ್ನು ಸಾಕಷ್ಟು ಆಯಾಸಕ್ಕೆ ಗುರಿಪಡಿಸಿದರೂ ಲೆಕ್ಕಿಸದೇ ನಿರ್ವಹಿಸುತ್ತಿದ್ದ ಅವರ ಛಲ ಅವರ ಬದುಕಿನ ಗಟ್ಟಿ ತಳಹದಿಯನ್ನು ಸೂಚಿಸುತ್ತದೆ. ಇಂತಹ ಗಟ್ಟಿ ಚೇತನ–ನಾಡು–ನುಡಿ–ರಾಷ್ಟ್ರಗಳ ಕುರಿತಾದ ಕಾಳಜಿಗಳನ್ನು ಕನಸು ಮನಸ್ಸಿನಲ್ಲಿ ತುಂಬಿಕೊಂಡು ವಾಸ್ತವದಲ್ಲಿ ಅರಳಿಸುತ್ತ ಬದುಕಿ ೧೯೮೨ರ ಅಕ್ಟೋಬರ್ ೩೧ ರಂದು ಕೊನೆಯುಸಿರೆಳೆದದ್ದು, ತಾನಳಿದರೂ ತನ್ನ ಕೃತಿಗಳ ಮೂಲಕ ಮಾದರಿಯಾಗಿ ಉಳಿದದ್ದು ನಾಡು, ನುಡಿ ಸೇವೆ ಮಾಡಬೇಕೆನ್ನುವವರಿಗೆ ಸ್ಫೂರ್ತಿದಾಯಕ. ಕನ್ನಡ ಕಟ್ಟುವ ಮೂಲಕವೇ ಭಾರತಕ್ಕೆ, ಜಗತ್ತಿಗೆ, ಮಾನವತೆಗೆ ಮುಟ್ಟಿ ನಿಲ್ಲುವ ಈ ವ್ಯಕ್ತಿತ್ವದ ಜೀವನಗಾಥೆ ಮಾನವೀಯ ಮೌಲ್ಯಗಳೇ ಕಾಣೆಯಾಗುತ್ತಿರುವ ಇಂದಿನ ಪರಿಸರದಲ್ಲಿ ಎಂದಿಗಿಂತ ಹೆಚ್ಚು ಪ್ರಸ್ತುತ ಎನಿಸುತ್ತವೆ.

### ೩. ವಿವಿಧ ಕ್ಷೇತ್ರಗಳಲ್ಲಿ ಸಾಧನೆ :

ಆನಂದಕಂದರದು ಬಹುಮುಖ ವ್ಯಕ್ತಿತ್ವ. ನವೋದಯ ಸಾಹಿತ್ಯ ಸಂದರ್ಭದಲ್ಲಿ ಏಕಕಾಲಕ್ಕೆ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಒಂದೊಂದರಲ್ಲೂ ಗಮನಾರ್ಹ ಸಾಧನೆ ಮಾಡಿರುವ ಹಲವಾರು ಶಿಖರಪ್ರಾಯ ವ್ಯಕ್ತಿತ್ವಗಳನ್ನು ಕಾಣಬಹುದು. ಶ್ರೀಯುತರುಗಳಾದ ಡಿ.ವಿ.ಜಿ., ಮಾಸ್ತಿ, ಬೇಂದ್ರೆ, ಕುಂವೆಂಪು, ಕಾರಂತ ಮೊದಲಾದವರು ಕನ್ನಡ ಸಾಹಿತ್ಯದ ಆ ಕಾಲಘಟ್ಟದಲ್ಲಿ ಸಮಗ್ರ ಬದುಕಿನ ಅಷ್ಟಸ್ಥೈಲುಗಳಲ್ಲಿ ತಮ್ಮನ್ನು ತೆರೆದುಕೊಂಡಿರುವುದು ಐತಿಹಾಸಿಕವಾಗಿ ಮಹತ್ವಪೂರ್ಣ ಮಾತ್ರವಲ್ಲ, ಆ ನಿಟ್ಟಿನ ಅನನ್ಯ ಮಾದರಿಗಳಾಗಿಯೂ ಇಂದಿಗೂ ಅವರು ಸ್ಫೂರ್ತಿ ನೀಡುವ ಜೀವಂತ ಸಾಂಸ್ಕೃತಿಕ ಶಕ್ತಿ ಎನಿಸಿದ್ದಾರೆ. ಈ ಸಾಲಿಗೆ ಸೇರಬಲ್ಲ ಉತ್ತರ ಕರ್ನಾಟಕದ ಗ್ರಾಮೀಣ ಪ್ರತಿಭೆ ಆನಂದಕಂದರು. ಆ ಕಾಲದ ಅನೇಕರಿಗೆ ಇದ್ದ ಸೌಕರ್ಯಗಳು ಆನಂದಕಂದರಿಗೆ ಇರಲಿಲ್ಲ. ಬದಲಾಗಿ ಪ್ರತಿಕೂಲ ಸನ್ನಿವೇಶಗಳೇ ನಿರಂತರವಾಗಿ ಅವರ ಬದುಕಿನುದ್ದಕ್ಕೂ ಇಡಿಕಿರಿದಿದ್ದವು. ಪ್ರವಾಹದ ವಿರುದ್ಧ

ಸೆಣಸಿ ಗೆದ್ದು ನಿಂತ ಅಪರೂಪದ ವ್ಯಕ್ತಿತ್ವ ಆನಂದಕಂದರರದು. ಭಾರತದಂತಹ ಗ್ರಾಮೀಣ ಹಿನ್ನೆಲೆಯ ತೃತೀಯ ಜಗತ್ತಿನ ರಾಷ್ಟ್ರವೊಂದರ ವಸಾಹತುಶಾಹಿಯ ಅಧೀನ ಪರಿಸರದಲ್ಲಿ ಎಲ್ಲ ಬಗೆಯ ದಾರಿದ್ರ್ಯಗಳ ಉಸಿರುಗಟ್ಟಿಸುವ ಅವಸ್ಥೆಯಿಂದ ಮೇಲೆದ್ದು ಬರುವ ಉತ್ಸಾಸ ಪ್ರಸ್ತುತ ಸಂದರ್ಭಕ್ಕೂ ಆಶಾಕಿರಣವಾಗಿ ಬಹುಸಂಖ್ಯಾತರನ್ನು ಪ್ರೇರೇಪಿಸುವಂತಹದು. ಕೌಟುಂಬಿಕ ಸಮಸ್ಯೆಗಳಾಗಲಿ, ಆರ್ಥಿಕ ಸಮಸ್ಯೆಗಳಾಗಲಿ, ವೈಯಕ್ತಿಕ ಆರೋಗ್ಯದ ಸಮಸ್ಯೆಗಳಾಗಲಿ ಯಾವುದೂ ಮನುಷ್ಯನ ಸಂಕಲ್ಪ ಬಲವನ್ನು ಹತ್ತಿಕ್ಕಲಾರವು ಎಂಬುದಕ್ಕೆ ಜ್ವಲಂತ ನಿದರ್ಶನವಾಗಿವೆ ಆನಂದಕಂದರರ ಬದುಕು ಮತ್ತು ಸಾಧನೆಗಳು. ಕನ್ನಡದ ನವೋದಯ ಕಾಲದ ಪ್ರಮುಖ ಕವಿಗಳಲ್ಲೊಬ್ಬರಾದ ಪು.ತಿ. ನರಸಿಂಹಾಚಾರ್ ಅವರು ಆನಂದಕಂದರನ್ನು ಕುರಿತು ಬರೆದ ಈ ಮಾತುಗಳು ಈ ಅಭಿಪ್ರಾಯಕ್ಕೆ ಇನ್ನಷ್ಟು ಗಹನತೆಯನ್ನು ಒದಗಿಸುವಂತಿವೆ. "ಕೃಷ್ಣಶರ್ಮರು ಗಟ್ಟಿ ಮನುಷ್ಯರು, ಕುರಣತ್ರಯ ಸಾರೂಪ್ಯಕ್ಕೆ ಹೆಣಗುವಂಥವರು. ಈ ಸಾಹಸದಲ್ಲಿ ತೊಡಗುವವರು ಕಷ್ಟ-ಕಾರ್ಪಣ್ಯಗಳಿಗೆ ಈಡಾಗಬೇಕಾಗುತ್ತದೆ. ಸಜ್ಜನರ ಪಾಡಿನಿಂದ ಈ ಮ್ಲಾನ ಜಡಜಗತ್ತಿಗೆ ಒಂದು ತೇಜ ಒಂದು ಶೋಭೆ ಬರುತ್ತದೋ ಹೇಗೆ? ಶ್ರೀಕೃಷ್ಣ ಕಾಳಿಂಗ ಸರ್ಪವನ್ನು ಕೆಣಕಿದ ಹಾಗೆ ಧೀಮಂತರು ತಮ್ಮ ಬದುಕಿನೊಂದಿಗೇ ಅದನ್ನು ಸುತ್ತುವರಿದಿರುವ ಪರಿಸರದೊಂದಿಗೂ ಸೆಣಸುತ್ತಾರೆ. ಸೆಣಸಿ ಗೆಲ್ಲುತ್ತಾರೆ. ಅದರ ಮುಂದೆ ಮೊಳಕಾಲೂರಿ ತಲೆಬಾಗರು. ಅವರು ಹೊಂದಿಕೊಂಡು ಹೋಗುವ ಗುಣಕ್ಕೆ ಒಂದು ಪರಿಧಿಯುಂಟು, ಎಲ್ಲೆಯುಂಟು. ಈ ಹದ್ದಿನ ಗೆರೆಯನ್ನು ಲೋಕ ಮೀರಿದಾಗ ಅವರ ಆತ್ಮ ಸೆಟೆದು ನಿಲ್ಲುತ್ತದೆ. ಇಂಥವರು ಬಾಳಿನಲ್ಲಿ ಪಡುವ ಕಷ್ಟ ತಪಸ್ಸೆನಿಸಿಕೊಳ್ಳುತ್ತದೆ. ತಪಸ್ಸಿಲ್ಲದೆ ಮಾನವನಿಗೆ ಮೃಗ ದುರ್ಲಭವಾದ ಯಾವ ಮೌಲ್ಯಗಳೂ ಕೈಗೆಟುಕವು. ಶ್ರೀ ಶರ್ಮರು ಬಾಳಿನಲ್ಲಿ ನೊಂದವರು ಎಂಬುದು ನಿಶ್ಚಯ. ಅವರಿಗೆ ನಮ್ಮೀ ಅಭಿನಂದನೆ. ತಪಸ್ವಿಗಳಿಗೆ ಸಹಜವಾಗಿ ಸಲ್ಲಬೇಕಾದ ಗೌರವ. ಕೃಷ್ಣಶರ್ಮರು ತಮ್ಮ ಲೇಖನಿಯನ್ನು ದೇಹ ಪ್ರಕೃತಿ ವಿರೋಧವಾದಾಗ ಹೊರತು ಎಂದೂ ಕೆಳಗಿಟ್ಟವರಲ್ಲ. ಅವರ ಬರವಣಿಗೆಯ ಮುಖ್ಯ ಪ್ರೇರಕ ಶಕ್ತಿ ನಾಡೊಲುಮೆ, ನುಡಿಯೊಲುಮೆ."[೧೬]

'ಊರಿಗುಪಕಾರಿ ಮನೆಗೆ ಮಾರಿ' ಎಂಬಂತೆ ಬದುಕನ್ನು ಸಾಗಿಸಿ ಯಾವ ನಿರೀಕ್ಷೆಯೂ ಇಲ್ಲದೆ ತೀರಿಹೋಗುವ ಇಂಥ ಜೀವಗಳನ್ನು ಕುರಿತು ಅವರ ಸಾಧನೆಗಳನ್ನು ಕುರಿತು ಕಾಲಾಂತರದಲ್ಲಿ ಜನ ಸ್ಮರಿಸಬಹುದು, ಸ್ಮರಿಸದೆ ಇರಬಹುದು. ಆದರೆ ಇರುವಾಗ ಸರ್ಕಾರವಾಗಲಿ, ಸಮಾಜವಾಗಲಿ ಕನಿಷ್ಠ ಕಾಳಜಿವಹಿಸಿ ಇಂಥವರ ಬದುಕಿಗೆ ಒತ್ತಾಸೆಯಾಗಬೇಕಾದ ಅಗತ್ಯವಿರುತ್ತದೆ. ವಿಕಾಸದ ಹೆಸರಿನಲ್ಲಿ ಬೇಕಾದಷ್ಟು

---

೧೬. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೧೦

ದಾಖಲೆಗಳನ್ನು ಪ್ರಸ್ತಾಪಿಸುವ, ಪ್ರತಿಭೆಗಳ ರಕ್ಷಣೆ ಕುರಿತು ಸಾಕಷ್ಟು ಆಡಂಬರದ ಚರ್ಚೆಯಲ್ಲಿ ತೊಡಗುವ ಸಾಮಾಜಿಕರಲ್ಲಿ ಕನಿಷ್ಠ ಮಾನವೀಯ ಕಾಳಜಿಗಳನ್ನು ಕಾಣದಿರುವುದು 'ಊರು ಉಪಕಾರ ಅರಿಯದು, ಹೆಣ ಸಿಂಗಾರ ಅರಿಯದು' ಎಂಬುದನ್ನು ನೆನಪಿಸುತ್ತದೆ. ಒಂದು ಸರಾಸರಿ ಮಟ್ಟದ ಸಾಧನೆಗೈಯುವ ಲೇಖಕರು, ಕಲಾವಿದರ ಬದುಕಿಗೆ ಅನಿವಾರ್ಯವಿದ್ದ ಪಕ್ಷದಲ್ಲಿ ಕನಿಷ್ಠ ಆರ್ಥಿಕ ಸೌಲಭ್ಯವನ್ನು ಸಹನೀಯವಾಗಿ ಬದುಕುವ ಸಾಮಾಜಿಕ ಗೌರವವನ್ನು ಒದಗಿಸಿಕೊಡುವಂತಹ ವಾತಾವರಣ ನಿರ್ಮಾಣವಾಗಬೇಕಾದದ್ದು ಈ ನಿಟ್ಟಿನ ಮಹತ್ವದ ಅಗತ್ಯ. ಆದರೆ ಇಂಥ ಸಣ್ಣ ಪುಟ್ಟ ಅವಕಾಶಗಳಿದ್ದರೂ ರಾಜಕಾರಣ ಮಾಡಬಲ್ಲವರು ಯೋಗ್ಯತೆಯಿಲ್ಲದೆಯೂ ಲಾಬಿ ಮಾಡುವವರು ಗಿಟ್ಟಿಸಿಕೊಂಡು ನಿಜವಾದ ಅರ್ಹರಿಗೆ ಅವು ದಕ್ಕದಂತಾಗುವ ವೈಪರೀತ್ಯ ಎಲ್ಲ ಮಾನವೀಯ ಚಿಂತಕರುಗಳ ಕಣ್ಣೆದುರಿಗಿನ ನಗ್ನಸತ್ಯವಾಗಿದೆ. ಹೀಗಾಗಿಯೇ ಮುದ್ದಣನಂಥವರು, ಹಳಕಟ್ಟಿಯಂಥವರು, ಬೆಟಗೇರಿಯಂಥವರು ಸಮಾಜಕ್ಕೆ ಏನೆಲ್ಲವನ್ನೂ ಕೊಟ್ಟೂ ಏನೂ ಪಡೆಯದೆ ನಿರ್ಗಮಿಸಿಬಿಡುತ್ತಾರೆ. ಬೆಟಗೇರಿಯವರನ್ನು ಕುರಿತು ಡಾ. ಸಿದ್ಧಯ್ಯ ಪುರಾಣಿಕರು ಬರೆದಿರುವ ಈ ಮಾತುಗಳನ್ನು ಗಮನಿಸಿದರೆ, ಮೇಲಿನ ಅಭಿಪ್ರಾಯಕ್ಕೆ ಇನ್ನಷ್ಟು ಪುಷ್ಟಿ ಒದಗುತ್ತದೆ. "ಬೆಟಗೇರಿ ಕೃಷ್ಣಶರ್ಮರು ಬಗೆ ಬಗೆಯಾಗಿ ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಮುದ್ದಿನ ಮಾತುಗಳೊ, ಜಾನಪದ ಕಥೆಗಳೊ, ಭಾವಗೀತೆಗಳೊ, ಕಾದಂಬರಿಗಳೊ, ಸಂಪಾದನೆಯೊ, ವಿಮರ್ಶೆಯೊ, ಸಾಮಾಜಿಕ ಸಂವಚನಗಳೊ – ಏನನ್ನು ಕೊಟ್ಟಿಲ್ಲ ಅವರು ಕನ್ನಡ ಕುಲಕ್ಕೆ? ಆದರೂ, ಉದ್ದಕ್ಕೂ ಅವರು ನಂಜನ್ನುಂಡೇ ಬದುಕಬೇಕಾದುದು ಕನ್ನಡ ನಾಡಿನಲ್ಲಿ ಸಾಹಿತಿಗಳ ಬಗ್ಗೆ, ಬೆಳಕಿನ ದೂತರಾದ ಬರಹಗಾರರ ಬಗ್ಗೆ ಇಂದಿಗೂ ಇರುವ ಉಪೇಕ್ಷೆ, ಉದಾಸೀನ, ತಾತ್ಸಾರ ಭಾವಗಳಿಗೆ ಜೀವಂತ ನಿದರ್ಶನವಾಗಿದೆ."[೧೭]

ಮಾನವೀಯತೆಯನ್ನು ರೂಪಿಸುವುದೇ ತಮ್ಮ ಬಾಳಿನ ಪರಮಗುರಿ ಎಂದು ಭಾವಿಸಿಕೊಂಡಿದ್ದ ಆನಂದಕಂದರಂಥವರು ಅಮಾನವೀಯ, ಅಸಹಾಯಕ ಸ್ಥಿತಿಗಳಿಗೆ ಗುರಿಯಾಗಿ ನಲುಗುವುದು ಬದುಕಿನ ಪರಮ ವಿಪರ್ಯಾಸ. ಜಗತ್ತಿನ ಹಸಿದವರ ಕುರಿತು ಚಿಂತಿಸಿದ ಮಾರ್ಕ್ಸ್ ತನ್ನ ಸ್ವಂತ ಹಸಿವೆಯನ್ನು ಹಿಂಗಿಸಿಕೊಳ್ಳಲಾರದೆ ಹೋದದ್ದು ಇಂಥ ವಿಪರ್ಯಾಸಗಳ ಪರಾಕಾಷ್ಠೆ. ಆದರೂ ಇಂಥ ಜೀವಗಳು ಪ್ರಾಮಾಣಿಕವಾಗಿ ಮಾನವೀಯತೆಯ ಅನಾವರಣಕ್ಕೆ ಹಂಬಲಿಸುವುದು ಮಾನವಕುಲದ ಎಂದೂ ಅಳಿಯದ ಭರವಸೆ. ಈ ಸಂಗತಿಯನ್ನು ಆನಂದಕಂದರ

೧೭. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೨೪

ಮಾತಿನಲ್ಲಿ ಕೇಳಬೇಕು. "ಇಂದಿನ ನನ್ನ ಹಂಬಲವು ದೇವರನ್ನು ಕಾಣಬೇಕೆಂಬುದಲ್ಲ, ರಾಜಕೀಯ ಸ್ವಾತಂತ್ರ್ಯ ಬೇಕೆಂಬುದಲ್ಲ, ಸುಖಮಯವಾದ ಬಾಳು ಸಿಕ್ಕಬೇಕೆಂಬುದಲ್ಲ. ಜಗತ್ತಿನಲ್ಲಿ ನಿಜವಾದ ಮಾನವತೆ ತಲೆದೋರಬೇಕು ಎಂದು .... ಮಾನವನು ನಿಜವಾದ ಮಾನವನಾದರೆ ಮೃತ್ಯುಲೋಕವನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಬಹುದು ಎಂಬ ಆಶಾವಾದಿ ನಾನು. ಈ ಆಶಾವಾದಿತ್ವವೇ ಇಂದಿನ ಸಾಹಿತ್ಯ ನಿರ್ಮಿತಿಯ ಜೀವಾಳವಾಗಿದೆ."[೧೮]

ಇಂಥ ಮಾನವೀಯ ಚಿಂತನೆಗಳ ಅಂತಃಕರಣದ ಬೆಳಕಿನಲ್ಲಿ ಬದುಕಿನ ವಿವಿಧ ಕ್ಷೇತ್ರಗಳ ಪರಿವರ್ತನೆಗೆ ಕ್ರಿಯಾಶೀಲವಾಗಿ ಹಂಬಲಿಸಿದ ಆನಂದಕಂದರ ಸಾಧನೆಗಳನ್ನು ಶೋಧಿಸುವುದು, ಸ್ಮರಿಸುವುದು ಹಾಗೂ ಜನಸಮ್ಮುಖಗೊಳಿಸುವುದು ಅವರ ಧ್ಯೇಯ ಸಾಧನೆಯ ದಿಕ್ಕಿನಲ್ಲಿ ನಡೆಸುವ ಪ್ರಯತ್ನದ ಭಾಗವೇ ಎನ್ನಬಹುದು. ಸಂಸ್ಕೃತಿಯೊಂದರ ಜೀವಶಕ್ತಿಯ ಪೋಷಣೆ ನಡೆಯಬೇಕಾದ ಕ್ರಮವೂ ಇದೇ. ಈ ಹಿನ್ನೆಲೆಯಲ್ಲಿ ಆನಂದಕಂದರ ವಿವಿಧ ಕ್ಷೇತ್ರಗಳ ಸಾಧನೆಯನ್ನು ಸ್ಥೂಲವಾಗಿ ವಿವರಿಸುವ, ವಿಶ್ಲೇಷಿಸುವ ಪ್ರಯತ್ನ ಇಲ್ಲಿದೆ.

ಆನಂದಕಂದರು ಮುಖ್ಯವಾಗಿ ಸಾಹಿತಿ, ಕವಿ, ಸಾಹಿತ್ಯದ ಕೇಂದ್ರದಿಂದ ಬದುಕಿನ ವಿವಿಧ ಕ್ಷೇತ್ರಗಳ ವರ್ತುಲಕ್ಕೆ ತಮ್ಮ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಗಳನ್ನು ವಿಸ್ತರಿಸಿಕೊಂಡವರು. ಅವರ ಸಾಧನೆಗಳನ್ನು ಈ ಪುಸ್ತಕದ ಆಶಯಕ್ಕನುಗುಣವಾಗಿ ಈ ಕೆಳಗಿನಂತೆ ಸ್ಥೂಲವಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಸಾಹಿತ್ಯ :– ಸೃಜನಾತ್ಮಕ ಹಾಗೂ ಸೃಜನೇತರ
೨. ಪತ್ರಿಕೋದ್ಯಮ :– ಸಾಂಸ್ಕೃತಿಕ ಪರಿಚಾರಿಕೆ
೩. ದೇಶಸೇವೆ :– ರಾಷ್ಟ್ರೀಯತೆಯ ವಿಶಾಲ ಭೂಮಿಕೆ
೪. ಕನ್ನಡ ಕಟ್ಟಿದ ಪ್ರಸಂಗಗಳು ಮತ್ತು ಸಂದರ್ಭಗಳು.

ಮೂಲತಃ ಕವಿಯಾಗಿದ್ದ ಆನಂದಕಂದರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಗಮನಾರ್ಹ ಕೃಷಿಗೈದಿದ್ದಾರೆ. ಜನಪದ ಸಾಹಿತ್ಯದ ಸಂಗ್ರಹ, ಸಂಪಾದನೆ, ಸಂಶೋಧನೆಗಳ ಅವರ ಆಸಕ್ತಿಯಾಗಲಿ, ಪತ್ರಿಕೋದ್ಯಮದ ಶ್ರದ್ಧೆಯಾಗಲಿ ಅಂತಿಮವಾಗಿ ಅವರ ನಾಡು–ನುಡಿ–ರಾಷ್ಟ್ರ–ಮಾನವತೆಗಳ ನೆಲೆಗಳಲ್ಲಿ ತಮ್ಮ ಸಾರ್ಥಕತೆಯನ್ನು ಕಂಡುಕೊಳ್ಳುವುದು ವಿಶೇಷ. ಇವೆಲ್ಲ ಪರಸ್ಪರ ಪೂರಕವಾಗಿ ಅವರ ವ್ಯಕ್ತಿತ್ವದ ಅಖಂಡತೆಗೆ ಸಾಕ್ಷಿಯಾಗುವ ಅಂತರ್ ಸಂಬಂಧದ ಎಳೆಗಳಿಂದ ಕೂಡಿವೆ.

---

೧೮. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೩೦

೧. ಸಾಹಿತ್ಯ :

ನಿರಂತರ ಪರಿವರ್ತನಶೀಲತೆ ಬದುಕಿನ ವಿಕಾಸದ ಸಹಜ ಕ್ರಮ. ಆ ವಿಕಾಸದ ಗತಿಯನ್ನು ತೀವ್ರಗೊಳಿಸುವಲ್ಲಿ ಮಾನವನ ಕಾಲವನ್ನು ಜಯಿಸುವ ಮಹತ್ವಾಕಾಂಕ್ಷೆಯಿದೆ. ಅಷ್ಟೇ ಅಲ್ಲ ಮಾನವೀಯತೆಯನ್ನು ಪರಿಪೂರ್ಣ ನೆಲೆಯಲ್ಲಿ ಅರಳಿಸುವ, ಅದನ್ನು ದೈವತ್ವದ ಹಂತಕ್ಕೆ ನಿಲುಕಿಸುವ ಹಂಬಲವೂ ಮನುಷ್ಯನ ಎಲ್ಲ ಪ್ರಯತ್ನಗಳ ಹಿಂದಿನ ಭೂಮಿಕೆಯಾಗಿದೆ. ಇಂತಹದೇ ಗುರಿಯನ್ನಿಟ್ಟುಕೊಂಡು ಬದುಕಿನ ವಿವಿಧ ಮುಖಗಳ ತೀವ್ರ ವಿಕಾಸಕ್ಕೆ ಹಂಬಲಿಸಿದ ಆನಂದಕಂದರಿಗೆ ಸಾಹಿತ್ಯ ಮುಖ್ಯ ಸಾಧನವಾಗಿತ್ತು. ಸಾಹಿತ್ಯದ ಮೂಲಕವೇ ತಮ್ಮೆಲ್ಲ ಚಟುವಟಿಕೆಗಳಲ್ಲಿ ಕಾರ್ಯೋನ್ಮುಖರಾಗಿದ್ದ ಆನಂದಕಂದರ ಸಾಹಿತ್ಯ ಕೃಷಿ ಸೃಜನಾತ್ಮಕ ಹಾಗೂ ಸೃಜನೇತರ ಪ್ರಕಾರಗಳೆರಡರಲ್ಲೂ ಸಮೃದ್ಧವಾಗಿದೆ. ಈ ಕ್ಷೇತ್ರದ ಅವರ ಸಾಧನೆಯ ಹರವು ವ್ಯಾಪಕವಾಗಿದ್ದು, ಅಭ್ಯಾಸದ ಅನುಕೂಲಕ್ಕಾಗಿ ಕೆಳಗಿನಂತೆ ವಿಂಗಡಿಸಿ ಕೊಳ್ಳುವುದು ಸೂಕ್ತ.

ಅ) ಆನಂದಕಂದರ ಸೃಜನಾತ್ಮಕ ಸಾಹಿತ್ಯ

ಆ) ಆನಂದಕಂದರ ಸೃಜನೇತರ ಸಾಹಿತ್ಯ

■

## ೨) ಆನಂದಕಂದರ ಸೃಜನಾತ್ಮಕ ಸಾಹಿತ್ಯ

ಸಾಹಿತ್ಯವೆಲ್ಲ ಕಾವ್ಯವೇ ಎಂದು ತಿಳಿಯಲಾದ ಕಾಲವೊಂದಿತ್ತು. ಪದ್ಯ ಕಾವ್ಯ, ಗದ್ಯ ಕಾವ್ಯ ಹಾಗೂ ಪದ್ಯ ಗದ್ಯ ಸಮ್ಮಿಶ್ರ ಕಾವ್ಯ ಎಂಬ ವರ್ಗೀಕರಣ ಇದ್ದುದಷ್ಟೇ ಅಲ್ಲ, ಎಲ್ಲ ಶಾಸ್ತ್ರ ಸಂಗತಿಗಳೂ ಕಾವ್ಯ ಮುಖೇನ ಅಭಿವ್ಯಕ್ತಗೊಳಿಸುವ ಕ್ರಮವೇ ನಮ್ಮಲ್ಲಿ ಬೆಳೆದುಬಂದಿತ್ತು. ಆದರೆ ಪಾಶ್ಚಾತ್ಯರ ಪ್ರಭಾವದಿಂದ ವಿಶೇಷವಾಗಿ ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದ ಕನ್ನಡ ಸಾಹಿತ್ಯವೂ (ಒಟ್ಟು ಭಾರತೀಯ ಸಾಹಿತ್ಯವೂ) ವ್ಯವಸ್ಥಿತವಾದ ವರ್ಗೀಕರಣ ಹಾಗೂ ಅಧ್ಯಯನ ಪದ್ಧತಿಗಳಿಗೆ ಒಳಪಟ್ಟಿತು. ನವೋದಯ ಸಂದರ್ಭ ವರ್ಗೀಕರಣಗೊಂಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಸಮೃದ್ಧ ಮಾದರಿಗಳನ್ನು ಸೃಷ್ಟಿಸಿತು. ಲೇಖಕನೊಬ್ಬನ ಪ್ರತಿಭೆಯ ನೆಲೆಯಿಂದ ಸೃಷ್ಟಿಗೊಂಡವು ಸೃಜನಾತ್ಮಕ ಬರಹಗಳೆಂದೂ, ಪಾಂಡಿತ್ಯದ ನೆಲೆಯಿಂದ ಸೃಷ್ಟಿಗೊಂಡವು ಸೃಜನೇತರ ಬರಹಗಳೆಂದೂ ವರ್ಗೀಕರಣಗೊಂಡವು. ನವೋದಯದ ಆರಂಭದ ಕಾಲಘಟ್ಟದಲ್ಲಿಯೇ ತಮ್ಮ ಪ್ರತಿಭೆ–ಪಾಂಡಿತ್ಯಗಳ ಉತ್ಕಟ ಪ್ರಯೋಗಕ್ಕೆ ಅಣಿಗೊಂಡ ಆನಂದಕಂದರಲ್ಲಿ ಈ ಎರಡು ಮುಖಗಳು ಆ ಕಾಲದ ಸಶಕ್ತ ಮಾದರಿಗಳಾಗಿ ಮೂಡಿವೆ. ಅವರ ಸೃಜನಾತ್ಮಕ ಸಾಹಿತ್ಯದ ಕುರಿತು ಚರ್ಚಿಸುವಾಗ ಅವರ ಪ್ರತಿಭೆಯ ಬಹುಮುಖತೆಗೆ ಸಾಕ್ಷಿಯಾಗಿ ಕೆಳಗಿನ ಪ್ರಕಾರಗಳನ್ನು ಹಾಗೂ ಆಯಾ ಪ್ರಕಾರಗಳಲ್ಲಿ ಸೃಷ್ಟಿಗೊಂಡ ಅವರ ಕೃತಿಗಳನ್ನು ಆರಂಭದಲ್ಲಿ ಈ ಕೆಳಗಿನಂತೆ ಪಟ್ಟಿ ಮಾಡಿಕೊಂಡು ಮುಂದುವರೆಯುವದು ಸೂಕ್ತ.

೧. ಕಾವ್ಯ

೨. ಸಣ್ಣಕಥೆ

೩. ಕಾದಂಬರಿ

೪. ನಾಟಕ ಹಾಗೂ ರೂಪಕಗಳು

### ೧. ಆನಂದಕಂದರ ಕಾವ್ಯ

ಆನಂದಕಂದರು ವಿವಿಧ ಕ್ಷೇತ್ರಗಳಲ್ಲಿ ಸಮಾನ ಶ್ರದ್ಧೆಯಿಂದ ತೊಡಗಿಸಿ

ಕೊಂಡಿದ್ದರೂ ಅವರನ್ನು ಕವಿಯಾಗಿ ಗುರುತಿಸುವುದು ಅವರಿಗೆ ಸಲ್ಲಬೇಕಾದ ಅಗ್ರಮಾನ್ಯ ಗೌರವ. ಅವರೊಬ್ಬ ಹುಟ್ಟುಕವಿ ಎಂಬುದನ್ನು ಅವರನ್ನು, ಅವರ ಕಾವ್ಯವನ್ನು ಹತ್ತಿರದಿಂದ ಬಲ್ಲ ಡಾ. ಶಂ.ಬಾ. ಜೋಶಿ ಆದಿಯಾಗಿ ಅನೇಕರು ಸೂಕ್ತವಾಗಿ ಮನಗಾಣಿಸಿದ್ದಾರೆ. ಅವರಲ್ಲಿ ಕಾವ್ಯ ಶಕ್ತಿಯ ಉಗಮ ಮತ್ತು ಅದರ ವಿಕಾಸದ ಸಂದರ್ಭಗಳನ್ನು ವಿವರಿಸುವ ಪೂರ್ವದಲ್ಲಿ ಅವರ ಒಟ್ಟು ಕಾವ್ಯ ಕೃತಿಗಳ ಪಟ್ಟಿಯನ್ನಿಲ್ಲಿ ಗಮನಿಸೋಣ.

೧. ಗಾಂಧಿ ಗೀತ ಸಪ್ತಕ (೧೯೨೧)

೨. ಮೇಳದ ಪದಗಳು (೧೯೨೧)

೩. ರಾಷ್ಟ್ರೀಯ ಪದ್ಯಮಾಲೆ (೧೯೨೨)

೪. ರಮೆಯುಮೆಯರ ವಿನೋದ ಸಂವಾದ (೧೯೨೩)

೫. ರಾಷ್ಟ್ರೀಯ ಪದ್ಯಾವಲಿ (೧೯೨೪)

೬. ಮುದ್ದನ ಮಾತು (೧೯೨೬)

೭. ಅರುಣೋದಯ (೨೯೨೭)

೮. ವಿರಹಿಣಿ (೧೯೩೫)

೯. ಒಡನಾಡಿ (೧೯೪೫)

೧೦. ಕಾರಹುಣ್ಣಿವೆ (೧೯೫೧)

೧೧. ನಲ್ವಾಡುಗಳು (೧೯೫೮)

೧೨. ಉತ್ಸಾಹಗಾಥಾ (೧೯೭೨)

೧೩. ಸಾಮಾಜಿಕನ ಸಂವಚನಗಳು (೧೯೮೧)

೧೪. ಸರ್ವೋದಯ ಮತ್ತು ಬೇರೆ ಕವಿತೆಗಳು (ಅಪ್ರಕಟಿತ)

೧೫. ನವಯುಗ ದರ್ಶನ (ಅಪ್ರಕಟಿತ)

ಈ ಎಲ್ಲ ಸಂಕಲನಗಳ ಒಟ್ಟು ಕವಿತೆಗಳು ಸುಮಾರು ೩೦೦. ಮೊದಲಿನ ಐದು ಸಂಕಲನಗಳು ಕೆಲವೇ ಕವಿತೆಗಳ ಕಿರುಹೊತ್ತಿಗೆಗಳಾಗಿದ್ದು ಅವುಗಳಲ್ಲಿ ಪ್ರಾರ್ಥನೆ, ಸ್ವಾಗತ, ರಾಷ್ಟ್ರೀಯ ಭಾವಗಳನ್ನೊಳಗೊಂಡ ಮೆರವಣಿಗೆಯ ಹಾಡುಗಳು ಮೊದಲಾದ ಲಘು ರಚನೆಗಳು ಸೇರಿವೆ. ಅವುಗಳ ಕಾವ್ಯ ಮೌಲ್ಯಕ್ಕಿಂತ ಹೆಚ್ಚಾಗಿ

ರಾಷ್ಟ್ರಭಕ್ತಿಯನ್ನು ಜಾಗೃತಗೊಳಿಸುವ, ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸುವ ಸಂಘಟನಾತ್ಮಕ ಮೌಲ್ಯ ಮಿಗಿಲಾದುದು. ಆನಂದಕಂದರನ್ನು ಕವಿಯಾಗಿ ಜನಮಾನಸದಲ್ಲಿ ಹಾಗೂ ವಿದ್ವಜ್ಜನಸಮೂಹದಲ್ಲಿ ಪ್ರತಿಷ್ಠಾಪಿಸಿದ ಮೊದಲ ಪೂರ್ಣ ಪ್ರಮಾಣದ ಕವನ ಸಂಕಲನ 'ಮುದ್ದನ ಮಾತು' (೧೯೨೬) ಅವರ ಕಾವ್ಯ ಶಕ್ತಿ–ಸತ್ವಗಳನ್ನು ಹಾಗೂ ಅವರ ವ್ಯಕ್ತಿತ್ವದಲ್ಲಿ ಅಡಕವಾಗಿದ್ದ ಮುಗ್ಧ ಭಾವದ ಪರಿಶುದ್ಧ ನೆಲೆಗಳನ್ನು ಬಿಂಬಿಸುತ್ತದೆ. ಆನಂದಕಂದರ ಈ ಗುಣವನ್ನು ಡಾ. ಪು.ತಿ.ನ. ಅವರು ಯತಾರ್ಥವಾಗಿ ಗುರುತಿಸಿದ್ದು ಅವರ ಮಾತುಗಳು ಹೀಗಿವೆ: "ಮುಗ್ಧ ಹೃದಯ ಕವಿತ್ವಕ್ಕೆ ಆಕರವಾಗುವಷ್ಟೂ ಬೌದ್ಧಿಕ ಸಂಸ್ಕಾರಕ್ಕೆ ಅಳವಟ್ಟ ಚೇತನ ಆಗುವುದಿಲ್ಲವೋ ಏನೋ."[೧೯] ಈ ಮಾತು ಒಟ್ಟು ಕಾವ್ಯಸೃಷ್ಟಿಯ ಹಿಂದಿನ ಅನಿವಾರ್ಯ ನೆಲೆಯೊಂದನ್ನು ಬೆರಗು–ವಿಸ್ಮಯಗಳು ಗ್ರಹಿತಗೊಳ್ಳುವ ಮನಸ್ಸಿನ ಸ್ವರೂಪವನ್ನು ತೆರೆದು ತೋರುವಂತಿವೆ. ಇದು ಹುಟ್ಟಿನಿಂದ ಪ್ರಾಪ್ತವಾಗುವ ಗುಣ ಹಾಗೂ ಕಲಾವಿದ ಜೀವನವಿಡೀ ಕಾಯ್ದುಕೊಳ್ಳಬೇಕಾದ ಗುಣ. ಇದು ಇಲ್ಲವಾದರೆ ಕಲೆಗೆ ಅಸ್ತಿತ್ವವಿಲ್ಲ. ಆನಂದಕಂದರು ಹುಟ್ಟಿನಿಂದ ಪಡೆದುಬಂದ ಈ ಗುಣ ಅವರಲ್ಲಿ ಅತ್ಯಂತ ಎಳೆವಯಸ್ಸಿನಲ್ಲಿಯೇ ಪ್ರಕಟಗೊಂಡಿದೆ.

ಆನಂದಕಂದರು ಮೊದಲ ಪದ್ಯ ಬರೆದದ್ದು ತಮ್ಮ ಎಂಟನೆಯ ವಯಸ್ಸಿನಲ್ಲಿ. ಅವರು ಆಗ ಮೂರನೆಯ ವರ್ಗದಲ್ಲಿ ಓದುತ್ತಿದ್ದರು. ಅದೇ ಊರಿನವರು, ಆನಂದಕಂದರ ಓರಗೆಯ ಒಡನಾಡಿಯಾಗಿ ಬೆಳೆದ ಶ್ರೀ ಶ. ಗೋ. ಕುಲಕರ್ಣಿಯವರು ಈ ಸಂದರ್ಭವನ್ನು ದಾಖಲಿಸುವುದು ಹೀಗೆ: "ನವರಾತ್ರಿ ದೀಪಾವಳಿಗಳಲ್ಲಿ ಅವರ ಮನೆಯಲ್ಲಿ ಗೋಕಾವಿಯ ಅನಂತಾಚಾರ್ಯರು ರಚಿಸಿದ ವೆಂಕಟೇಶ ಪಾರಿಜಾತ, ಧ್ರುವಚರಿತ್ರಾ, ಪ್ರಹ್ಲಾದ ಚರಿತ್ರಾ, ದಾಸರ ಪದಗಳು ಮೊದಲಾದವುಗಳನ್ನು ಹಾಡುತ್ತಿದ್ದರು. ಹಿರಿಯರ ಜತೆಗೆ ಈಶನೂ ಈ ಹಾಡುಗಳನ್ನು ಜತೆಗೂಡಿ ಹೇಳುತ್ತಿದ್ದನು. ಇದೆಲ್ಲವೂ ಈಶನ ಭಾಷಾಜ್ಞಾನವನ್ನೂ, ಕನ್ನಡ ಸಂಸ್ಕೃತಿಯ ಜ್ಞಾನವನ್ನೂ ಹೆಚ್ಚಿಸಿದವು. ಪರಿಣಾಮವಾಗಿ ಈಶನಲ್ಲಿ ಹುದುಗಿಕೊಂಡಿದ್ದ ಕವಿತಾಶಕ್ತಿಯೂ ವಿಕಾಸಗೊಂಡಿತು. ಮೂರನೆಯ ವರ್ಗದಲ್ಲಿರುವಾಗಲೇ ಈಶನು ಪದ್ಯ ರಚಿಸುವ ಶಕ್ತಿಯನ್ನು ಪಡೆದಿದ್ದನು. ಆ ವಯಸ್ಸಿನಲ್ಲಿ ಅವನು ರಚಿಸಿ ನಮ್ಮ ಮುಂದೆ ಹೇಳಿದ ಪದ್ಯವೊಂದು ಈಗಲೂ ನನ್ನ ನೆನಪಿಗೆ ಬರುತ್ತದೆ."[೨೦]

---

೧೯. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೧೧

೨೦. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೧೫

ಈ ಪದ್ಯದ ಪೂರ್ಣ ಪಾಠ ಹೀಗದೆ :

ಅಣ್ಣು ನೋಡಿದು ಕಣ್ಣು ಕಿಸಿವುದು
ಮಣ್ಣು ಹತ್ತಿದ ಧೊತ್ರವನ್ನು ತಿಂಬುದು । ಪ ।

ಹೆತ್ತ ತಾಯಿಯ ಎತ್ತಿ ಒಗೆವುದು
ಮತ್ತೆ ಮಂದಿಯನ್ನು ಕಂಡು ಒತ್ತಿ ಬಯ್ಯುದು । ೧ ।

ಶಾಲೆಗ್ಹೋದು ನಾಕನೆತ್ತೆ ಕಲಿವುದು
ಹೇಳಿದಭ್ಯಾಸ ಮಾಡದೆ ಕಾಲಗಳೆವುದು । ೨ ।

ಅರಿವೆ ತಿಂಬುದು ಕೊರವರಂತೆ ಕಾಂಬುದು
ಬಲ್ಲ ಕೃಷ್ಣ ಮಾಡಿದ ಉಲ್ಲಾಸದ ಪದವಿದು । ೩ ।

ಈ ಹಾಡನ್ನು ಬರೆಯುವದರ ಹಿನ್ನೆಲೆ ಹಾಗೂ ಬರೆದ ನಂತರ ಊರಲ್ಲಿ ಜನ ಅದನ್ನು ಸ್ವೀಕರಿಸಿದ ಬಗೆಯನ್ನು ಆನಂದಕಂದರ ಮಾತುಗಳಲ್ಲೇ ಕೇಳಬೇಕು: "ನಮ್ಮ ನೆರೆಮನೆಯ ಹುಡುಗ ಅಣ್ಣೂನ ಕಿಡಿಗೇಡಿತನದ ನೆನಪು ನನ್ನೆದುರು ಬಂದು ಅವನ ಬಗ್ಗೆ ಒಂದು ಕವಿತೆಯನ್ನು ರಚಿಸಬೇಕೆಂದು ಮನಸ್ಸಾಯಿತು. ನನಗಾಗ ಅನೇಕ ಪದಗಳ ಧಾಟಿ ಮಾತ್ರ ಗೊತ್ತಿದ್ದಿತು. ಛಂದಸ್ಸಿನ ಯಾವ ಜ್ಞಾನವೂ ಇರಲಿಲ್ಲ. ಆದುದರಿಂದ ನನಗೆ ಶಾಲೆಯಲ್ಲಿ ಗುರುಗಳು ಕಲಿಸಿದ 'ಹಿರಿಯ ಹುಡುಗನೆ ಕರಿಯು ನೋಡಿದು ಅರಿಗೆ ಹೆದರಿ ಹಿರಿಯ ಕಾಡಿನೊಳಗೆ ಇರುವುದು' ಎಂಬ ಹಾಡಿನ ಧಾಟಿಯಲ್ಲಿಯೇ ಪದವನ್ನು ರಚಿಸಲು ಉಪಕ್ರಮಿಸಿದೆ. ಅಂದಿನ ನನ್ನ ಭಾಷಾಜ್ಞಾನ ಪರಿಮಿತವಾದುದು. ಹಳ್ಳಿಯಲ್ಲಿ ಹುಟ್ಟಿ ಹಳ್ಳಿಗರೊಂದಿಗೆ ವ್ಯವಹರಿಸಿದ ನಾನು ನನಗೆ ಗೊತ್ತಿರುವ ಶಬ್ದ ಮತ್ತು ಧಾಟಿಗಳನ್ನು ಬಳಸಿಕೊಂಡು ಹಾಡನ್ನು ರಚಿಸಿದೆನು. ಈ ಹಾಡನ್ನು ಕೇಳಿದವರೆಲ್ಲರೂ ಕೌತುಕದಿಂದ ಮತ್ತೆ ಮತ್ತೆ ಹಾಡಿಸಿ ಕೇಳುತ್ತಿದ್ದರು. ಹಿರಿಯರಾದ ಹೆಣ್ಣು ಮಕ್ಕಳು ನನ್ನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಈ ಹಾಡನ್ನು ಕೇಳಿ ಮೈದಡವುತ್ತಿದ್ದರು. ಹಿರಿಯ ಜನರು ಈ ಹಾಡನ್ನು ಕೇಳಿ ಕೇಳಿ ಭಲೇ ಎಂದು ಬೆನ್ನು ತಟ್ಟುತ್ತಿದ್ದರು. ಅಂದು ನಾನೊಬ್ಬ ಕವಿಯಾದೆ. ನನ್ನ ಮೊದಲ ಕವಿತೆಯನ್ನು ಕಟ್ಟಿದೆ."[೨೧] ಈ ಮೊದಲ ಸೃಷ್ಟಿಯ ರೋಮಾಂಚನ ಕುರಿತು ಇತ್ತೀಚೆಗೆ 'ತಿಂಗಳು' ಪತ್ರಿಕೆ ಅನೇಕ ಹಿರಿಯ ಲೇಖಕರ ಅನುಭವಗಳನ್ನು ಪ್ರಕಟಿಸಿದ್ದನ್ನು ಇಲ್ಲಿ ನೆನೆಯಬಹುದು. ೧೯೧೦ ರಲ್ಲಿ ೫ನೇ ಜಾರ್ಜ್ ದಿಲ್ಲಿಯ ಸಿಂಹಾಸನಾರೋಹಣದ ಸಂದರ್ಭದಲ್ಲಿ ಹಳ್ಳಿಯಲ್ಲಿ ನಡೆದ ಉತ್ಸವದಲ್ಲಿ ಸ್ವಂತ ಹಾಡು ರಚಿಸಿ ಹಾಡಿದ್ದು ಅವರ ಸೃಜನಶೀಲತೆ ಖಚಿತ ರೂಪ

೨೧. ನನ್ನ ನೆನಪುಗಳು–ಆನಂದಕಂದ, ಪು. ೫೨

ಪಡೆಯುವ ಹವಣಿಕೆಯಲ್ಲಿತ್ತೆಂಬುದನ್ನು ತೋರಿಸುತ್ತದೆ. ೧೯೧೮ ರಲ್ಲಿ ಅವರ ಮೊದಲ ಕವನ ಧಾರವಾಡದ 'ಪ್ರಭಾತ' ಮಾಸಪತ್ರಿಕೆಯಲ್ಲಿ ಪ್ರಕಟಗೊಂಡಿತು. ಅದು ಭಾಮಿನಿ ಷಟ್ಪದಿಯಲ್ಲಿ ರಚನೆಗೊಂಡ ಭಕ್ತಿಗೀತೆ. ಆ ಸಂದರ್ಭದಲ್ಲಿ ತಮಗಾದ ಆನಂದವನ್ನು ಆನಂದಕಂದರು ಹೀಗೆ ಹೇಳಿಕೊಂಡಿದ್ದಾರೆ. "ಊಟಕ್ಕೆ ಕುಳಿತಾಗ ಸಂಚಿಕೆ ನನ್ನ ಕೈಸೇರಿತು. ನೋಡಿ ಹಾಗೆಯೇ ಕುಣಿದಾಡುತ್ತ ಊಟವನ್ನು ಬಿಟ್ಟು ಎದ್ದುದು ನನ್ನ ನೆನಪಿನಲ್ಲಿದೆ. ಈ ಪ್ರಕಟಣೆಯ ಉತ್ಸಾಹ ಹಲವು ಕವಿತೆಗಳನ್ನು ರಚಿಸಿ ಪ್ರಭಾತಕ್ಕೆ ಕಳುಹಿಸಲು ಪ್ರಚೋದಿಸಿತು. ಸುಧನ್ವೋಪಖ್ಯಾನ, ರಮೆಯುಮೆ ಯರ ವಿನೋದ ಸಂವಾದ, ನಿದ್ರಾದೇವಿ ಕೆಲವು ಕೀರ್ತನೆಗಳೂ ಇವೆಲ್ಲ ಪ್ರಕಟಣೆಗಾಗಿ ಹೋದವು."[೨೨] 'ಗಿರಿಪುರೀಶ' ಎಂಬುದು ಬಾಲಕವಿ ಕೃಷ್ಣಶರ್ಮರ ಆಗಿನ ಕಾವ್ಯನಾಮವಾಗಿತ್ತು.

'ಮುದ್ದನ ಮಾತು' ಕನ್ನಡ ಕಾವ್ಯಪ್ರಪಂಚಕ್ಕೆ ಹೊಸ ವಸ್ತು ವಿನ್ಯಾಸಗಳನ್ನು ನೀಡಿದ ಕೃತಿ. ಮನುಷ್ಯನ ಭಾವಕೋಶದ ಅತ್ಯಂತ ಸಹಜ ಲಹರಿಗಳಿಗೆ ಕನ್ನಡ ಭಾಷೆಯ ಜೀವಂತ ಲಯ–ಛಂದಗಳಲ್ಲಿ ಅನಾವರಣಗೊಂಡಿರುವ ಈ ಕೃತಿಯ ಕುರಿತು ಮಾಸ್ತಿಯವರು ಹೇಳಿರುವ ಮಾತು ಹೀಗದೆ. "ಈ ಕಾವ್ಯವು ಅನುಕರಣೆಯ ಫಲವಲ್ಲ. ಕವಿಯ ಹೃದಯದಿಂದ ಬಂದಿದೆ."[೨೩] ಮಗುವಿನ ಮುಗ್ಧತೆ– ತಾಯಿಯ ವಾತ್ಸಲ್ಯ ಇಲ್ಲಿನ ವಸ್ತು. ಇಂಥ ವಸ್ತುವನ್ನಿಟ್ಟುಕೊಂಡು ವಿಶ್ವಕವಿ ರವೀಂದ್ರನಾಥ ಠಾಕೂರರು 'ಶಿಶು' ಎಂಬ ಕಾವ್ಯ ಕೃತಿಯನ್ನು ನೀಡಿದ್ದು, ಅದು ಭಾರತೀಯ ಸಾಹಿತ್ಯದಲ್ಲಿಯೇ ಅಪೂರ್ವವೆನಿಸಿದೆ. 'Cresent Moon' ಎಂಬ ಹೆಸರಿನಲ್ಲಿ ಆ ಕೃತಿ ಇಂಗ್ಲೀಷಿಗೆ ಅನುವಾದಗೊಂಡಿದೆ. ಅಂಥ ಯಾವುದೇ ಪ್ರಭಾವ– ಸೂಚನೆಗಳಿಲ್ಲದೆ ಅಪ್ಪಟ ಕನ್ನಡತನವನ್ನು ಒಳಗೊಂಡ ಅನನ್ಯ ಪ್ರತಿಭಾವಂತಿಕೆಯ ಈ ಕೃತಿ ಇನ್ನಷ್ಟು ಅಭ್ಯಾಸಕ್ಕೆ, ಶೋಧಕ್ಕೆ ಗುರಿಯಾಗಬೇಕಾಗಿದೆ. ಇಲ್ಲಿನ ಭಾವ ಸಂದರ್ಭಗಳು ಮಗುವಿನ ಮುಗ್ಧ ನೆಲೆಗಳಿಗೆ ಸೀಮಿತವಾಗಿದ್ದರೂ ಇವು ಮಕ್ಕಳಿಗೆ ಸೀಮಿತವಾಗಬಲ್ಲ ಶಿಶುಕಾವ್ಯದ ಮಾದರಿಗಳಲ್ಲ. ಬದಲಾಗಿ ಮಗುವಿನ ಸಂವೇದನೆಯ ಮೂಲಕ ಮಾನವನ ಅಂತಃಕರಣವನ್ನು ಹರಳುಗಟ್ಟಿಸಿ ತೋರುವ ವಿಸ್ಮಯದ ಮುಗ್ಧ ಮಾದರಿಗಳು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಇಂತಹ ಇನ್ನೊಂದು ಕೃತಿಯೆಂದರೆ ದ.ರಾ.ಬೇಂದ್ರೆಯವರ 'ಕರುಳಿನ ವಚನಗಳು' ಮಾತ್ರ. 'ಕರುಳಿನ ವಚನಗಳ'ಲ್ಲಿ ತಾಯಿಯ ಮೂಲಕ ಮಗುವಿನ ಕಡೆಗೆ ಹರಿಯುವ ವಾತ್ಸಲ್ಯದ ಉತ್ಕಟ ಭಾವಗಳಿವೆ. ಬೇಂದ್ರೆ, ಕುವೆಂಪು, ಕಣವಿ, ಸೋಮಶೇಖರ ಇಮ್ರಾಪೂರ, ಪಟ್ಟಣಶೆಟ್ಟಿ ಮೊದಲಾದ ಕವಿಗಳಲ್ಲಿ ವಿಪುಲವಾದ ವಾತ್ಸಲ್ಯ ಭಾವದ ರಚನೆಗಳನ್ನು

---

೨೨. ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ಪು. ೯೪
೨೩. ಮುದ್ದನ ಮಾತು, ಪು. ೫

ಕಾಣಬಹುದು. ಇತ್ತೀಚಿನ ತರುಣ ಪೀಳಿಗೆಯ ಕವಿಗಳಲ್ಲಿ ಬಸವರಾಜ ವಕ್ಕುಂದ ಅವರಲ್ಲಿಯೂ ಇಂಥ ಸಾಕಷ್ಟು ರಚನೆಗಳನ್ನು ಕಾಣಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ವಾತ್ಸಲ್ಯಭಾವದ ರಚನೆಗಳ ಕುರಿತು ಪ್ರತ್ಯೇಕ ಸಂಶೋಧನೆ ನಡೆಯಬೇಕಿದೆ. ಈ ಸಂಕಲನದ ಕೆಲವು ಉದಾಹರಣೆಗಳನ್ನಿಲ್ಲಿ ಗಮನಿಸಬಹುದು.

ನೀನಾಗು ಗುಡಿಯಲ್ಲಿ ಇರುವ 'ಎಲ್ಲಮ್ಮಾ'
ಅಲುಗಾಡದೊಲು ಕುಳ್ಳಿರೆಲ್ಲಮ್ಮನಾಗಿ
ನಾ ಪೂಜೆ ಮಾಡುವೆನು ಪೂಜಾರಿಯಾಗಿ (ಪು. ೨೫)

ಆನಂದಕಂದರ ಮೇಲೆ ತಾಯಿಯ ಪ್ರಭಾವ ದೊಡ್ಡದು. ತಾಯಿಯನ್ನು ದೈವಕ್ಕಿಂತ ಹಿರಿದಾದ ಭಕ್ತಿ ಗೌರವಗಳಿಂದ ಕಾಣುವ ಭಾರತೀಯ ಸಂಸ್ಕೃತಿಯ ಸಾರವನ್ನೇ ಕರಗಿಸಿಕೊಡುವ ಯತ್ನ ಇಲ್ಲಿದೆ. ದೇವರು ತಾನು ಎಲ್ಲ ಕಡೆಗೆ ಇರಲಿಕ್ಕಾಗದೆಂದು ತಾಯಂದಿರನ್ನು ಸೃಷ್ಟಿಸಿದ ಎಂಬ ಮಾತು ಇಲ್ಲಿ ನೆನಪಾಗದೇ ಇರದು. ಆನಂದಕಂದರು ಭಾವುಕತೆಯೊಂದಿಗೆ ಕಟುವಾಸ್ತವಗಳನ್ನು ಬೆರೆಸುವುದು ಅವರ ವಿಶಿಷ್ಟ ಜೀವನ ದೃಷ್ಟಿಯ ದ್ಯೋತಕ. ಪ್ರಗತಿಪರ ಹಾಗೂ ಬಂಡಾಯ ಮನೋಭಾವದ ಬೀಜರೂಪಗಳನ್ನು ಆನಂದಕಂದರ ಒಟ್ಟಾರೆ ಬದುಕು ಬರಹಗಳೆರಡರಲ್ಲೂ ಕಾಣಬಹುದಾಗಿದೆ. 'ಮುದ್ದನ ಮಾತು'ವಿನಂತಹ ವಾತ್ಸಲ್ಯ ಗೀತಗಳ ಸಂದರ್ಭದಲ್ಲಿಯೂ ಈ ಮನೋಭಾವ ಪ್ರಕಟಗೊಂಡದ್ದು ವಿಶೇಷವೆನಿಸುತ್ತದೆ. ಕೆಳಗಿನ ನಿದರ್ಶನ ಗಮನಿಸಬಹುದು.

ಗುಡಿಯಲಿಹ ಕಲುಗೊಂಬೆ ದೇವನೇನವನು
ಬೇಡಿದುದ ನೀಡದವ ದೇವನೆಂತಹನು
ಬೇಡದೆಯೆ ನೀ ಕೊಡುವೆ ದಿಟ ದೇವಿ ನೀನೆ (ಪು. ೪೨)

ಮುಗ್ಧ ಭಾವದ ಭಿನ್ನ ಮಗ್ಗಲುಗಳಿಗೆ ಕೆಲವು ಉದಾಹರಣೆ ನೀಡಬಹುದು.

ಕೊನೆತನಕವೂ ನಾನು ಬೆಳೆಯದಲೆ
ಎಳೆಯನಾಗಿರುವಂತೆ ತಿಳಿಸಮ್ಮ ಹಂಚಿಕೆಯ (ಪು. ೧೨)

ಗುಡಿಯ ಮುಂದಿನ ಗಿಡದಿ ಮಂಗ ಕುಳಿತಿಹುದಂತೆ
ಹೋಗಿ ಕಲ್ಲೆಸೆದು ಬರಲೆ?
ಹುಡುಗರೆಲ್ಲರು ಗುಬ್ಬಿಮನೆ ಮಾಡಿಯಾಡುವರು
ಹೋಗಿ ನಾ ಕೆಡಿಸಿ ಬರಲೆ? (ಪು. ೧೬)

ಇನಿತು ಆತುರದಿ ಹೋಗುವವೆಲ್ಲ ಹಕ್ಕಿಗಳು
ಮನೆಯಲಿಹ ಮರಿಗಳನು ಮುದ್ದಿಸಲಿಕೇನಮ್ಮ (ಪು. ೧೯)

ಮಿಣಕು ಮಿಣುಕಾಗಿ ಉರಿಯುವ ಕಿರಿಯ ದೀಪವಿದು
ಟೊಣಪನಂತಹ ಕತ್ತಲೆಯನೆಂತು ಕಳೆಯುವದು (ಪು. ೨೨)

. . . . . ಚಿಂದಿಯುಟ್ಟುದರಿಂದೆ
. ಚೆಂದ ಕಾಣುವದಿಲ್ಲಮ್ಮ ನೀ ಕಂಗಗಳಿಗೆ (ಪು. ३೦)

ಅಮ್ಮಾ ನೀನೆನ್ನ ಬಳಿಯಲ್ಲಿರಲು ನಾನು
ಗುಮ್ಮನಪ್ಪನು ಬಂದರೂ ಬೆದರದಿಹೆನು (ಪು. ೨೦)

ಸಹೃದಯರು, ವಿಮರ್ಶಕರು ಇನ್ನಷ್ಟು ಗಮನಕೊಡಬೇಕಿರುವ ಈ ಸಂಕಲನದ ಕುರಿತು ಕಣವಿಯವರ ಅಭಿಪ್ರಾಯ ಹೀಗಿದೆ. "ಮುದ್ದನ ಮಾತು ದ್ವಿತೀಯ ಮುದ್ರಣ ಕಂಡಿದ್ದರೂ ಅದು ಪಡೆಯಬೇಕಾದಷ್ಟು ಪ್ರಚಾರವನ್ನು ಪಡೆಯದಿರುವುದು ಕೊಂಚ ಆಶ್ಚರ್ಯದ ಮಾತೇ ಆಗಿದೆ. ಮಗುವಿನ ಮನಸ್ಸಿನ ಮನೋಹರ ವರ್ಣನೆ, ಅದರ ಸಾಮಾನ್ಯವಾದ ಮಾತು, ಆಟ-ನೋಟಗಳ ಸೊಗಸು, ಸ್ವಭಾವದ ಸೂಕ್ಷ್ಮ ಜಿಜ್ಞಾಸೆ ಇವುಗಳ ಸಹಜತೆ ಕೆಡದಂತೆ ಕಾವ್ಯರೂಪದಲ್ಲಿ ಹಿತವಾಗಿ ಹಿಡಿದಿಟ್ಟಿರುವುದು ಇದರ ಅಗ್ಗಳಿಕೆಯಾಗಿದೆ."[೨೪]

'ಅರುಣೋದಯ' (೧೯೨೭) ಆನಂದಕಂದರ ಎರಡನೆಯ ಸಂಕಲನ. ಇಲ್ಲಿ ಕನ್ನಡದ ಭಕ್ತಿ ಕವಿಯನ್ನು ಆವರಿಸಿದೆ. ಅವರ ಸಾಹಿತ್ಯ ರಚನೆ, ಪತ್ರಿಕೋದ್ಯಮ, ಸಂಶೋಧನೆ, ಜಾನಪದ ಸಂಗ್ರಹಗಳೆಲ್ಲದರ ಹಿಂದೆ ಆನಂದಕಂದರ ಕನ್ನಡ ಕಟ್ಟುವ ಕಾಯಕದ ಅನುಕ್ತ ಪ್ರನಾಳಿಕೆ ಕೆಲಸ ಮಾಡಿರುವದು ಸ್ಪಷ್ಟವಿದೆ.

ಕನ್ನಡ ನಾಡಿನ ಮುಂಬಾನೊಳು ಚೆಂ
ಬಣ್ಣದ ಬೆಳಕು ಇದೇತರದು?
ಹೊನ್ನಗದಿರ ಬರಲಿಹನೆಂದೊರೆಯಲು
ಮುನ್ನವೆ ಬಂದರುಣನದೆ ಇದು
ನನ್ನಿಯು! ನಿಜ! ಅರುಣನದೆ ಇದು!

ಇತಿಹಾಸದೊಳಿಹ ನಿನ್ನ ವಿಭವವನು
ಕ್ಷಿತಿಗೆ ಮರಳಿ ತೋರಿಸುವುದು

ರನ್ನಗನ್ನಡಿಯೊಲಿಹ ಕನ್ನಡನಾಡು
ಭಿನ್ನ ಭಿನ್ನವು ಆಗಿ ಬಿದ್ದಿಹುದು ನೋಡು
ಅದರಲ್ಲಿ ನೋಡಿದರೆ

---

೨೪. ಬೆಳುವಲ - ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೭೮

ನಮ್ಮ ಪಡಿನೆಳಲನ್ನು
ಎದೆಯು ದಡದಡಿಸುವುದು ಕಂಡು ವಿಕೃತಿಯನು

ಗಾನವ ಬೆರೆಯಿಸಿ ವೀಣೆಯ ದನಿಯೊಳು
ವಾಣಿಯು ನೇವುರ ನುಡಿಸುತ ಕುಣಿಯಲು
ಮಾಣದೆ ಮೆರೆಯುವ ಮಂಜುಲರವವೊ?
ಎನಿತು ಇನಿದು ಈ ಕನ್ನಡ ನುಡಿಯು

ಹೀಗೆ ಕನ್ನಡ ಭಾಷೆ ಸಂಸ್ಕೃತಿಗಳ ಮಾಧುರ್ಯ ಮಾರ್ದನಗಳನ್ನು, ಕೆಟ್ಟ ಜಡತ್ವಗಳನ್ನು ಮನತುಂಬಿ ಹಾಡಿರುವ ಆನಂದಕಂದರು ಕನ್ನಡಿಗರನ್ನು ಏಕೀಕರಣಕ್ಕೆ ಎಚ್ಚರಿಸುವ ಮಹತ್ಕಾರ್ಯದ ಅಂಗವಾಗಿ 'ಅರುಣೋದಯ'ದ ಕವಿತೆಗಳನ್ನು ಹೆಣೆದಿದ್ದಾರೆ.

**'ವಿರಹಿಣಿ'** (೧೯೩೫) ಹೆಸರಿಗೆ ತಕ್ಕಂತೆ ಇದು ವಿರಹ ನಿರೀಕ್ಷೆಗಳ ಮಧುರಯಾತನೆಯ ನೆಳಲು ಬೆಳಕಿನ ಭಾವಗಳನ್ನು ಸೂರೆಗೊಂಡಿರುವ ಭಾವಗೀತೆಗಳ ಸಂಕಲನ.

ಯಾರಿಗರುಪಿಸಲಿದನು ಮಾಲೆಯ
ನಾರ ಕೊರಳೊಳಗಿರಿಸಲಿ?
ಯಾರಿಗೊಪ್ಪಿಸಿ ಕಣ್ಣೆದೆಯ ಬಾ
ಯಾರಿಕೆಯನೆಂತಾರಿಸಲಿ?
ಅಗಲಿಕೆಯೆ, ನಿನ್ನಗಲವನಳೆಯುವವರಾರಿಹರು
ಬಗೆಯೊಲವೆ ನಿನ್ನ ನೆಲೆ ತಿಳಿದವರದಾರು

ಮೂರು ದಿನಗಳು ಜಾರಿದವು ಬರಿ
ದಾರಿ ಕಾಯುತಲಿರುವೆನು
ಹಾರೈಕೆಯಂತಹದು? ನಲ್ಲನು
ಬಾರನೇಕೆನುತಿರುವೆನು

ಇಂತಹ ವಿರಹ ನಿರೀಕ್ಷೆಗಳ ಶೃಂಗಾರದ ಕಾತರ ಅನುಭಾವದ ಸೆಳೆತವಾಗುವ ಇನ್ನೊಂದು ಮುಖವನ್ನು 'ವಿರಹಿಣಿ' ಸಂಗ್ರಹದ 'ಶಬರಿ' ಕವಿತೆಯಲ್ಲಿ ಕಾಣಬಹುದಾಗಿದೆ. ನಾಡೋಜ ಚೆನ್ನವೀರ ಕಣವಿಯವರು ಇದನ್ನು ವಿಶೇಷವಾಗಿ ಗುರುತಿಸಿ ವಿಶ್ಲೇಷಿಸಿದ್ದಾರೆ.

**ಒಡನಾಡಿ :** ಆನಂದಕಂದರ ನಾಲ್ಕನೆಯ ಸಂಕಲನ **'ಒಡನಾಡಿ'** (೧೯೪೫) ಯಲ್ಲಿ ವಿರಹದ ಏಕಮುಖತೆಯನ್ನು ಮೀರಿದ ಒಲವಿನ ದಾಂಪತ್ಯದ ಪರಿಪಾಕವಿದೆ.

"ಮುಂಬರಯದ ಮುಗ್ಧ ಪ್ರಣಯದ ಆತುರ ಕಾತುರಗಳನ್ನೂ ಏರುವರಯದ ಕಾಮ-ಪ್ರಣಯದ ರತಿ ಹಾಸಗಳನ್ನೂ ತುಂಬುವರೆಯದ ಅನುಭವ ಪ್ರಣಯದ ಸುಖ ದುಃಖಗಳ ಉಯ್ಯಾಲೆಯಾಟವನ್ನೂ ಇಳಿವರೆಯದ ಪರಿಪಕ್ವ ಪ್ರಣಯದ ತತ್ವಜ್ಞತೆಯನ್ನೂ ಇಲ್ಲಿಯ ಕೃತಿಗಳಲ್ಲಿ ನೋಡಬಹುದು"[೨೫] ಎಂದು ಆನಂದಕಂದರು ಇದರ ಮುನ್ನುಡಿಯಲ್ಲಿ ಹೇಳಿರುವ ಮಾತುಗಳು ಶೃಂಗಾರ ಕಾವ್ಯದ ಭಿನ್ನ ಲಕ್ಷಣಗಳನ್ನು ವಿಸ್ತರಿಸಿ ಹೇಳಿದಂತಿದೆ. ಆನಂದಕಂದರ ರುಚಿಕೆಡದ ಪ್ರಣಯ ದೃಷ್ಟಿಗೆ ಅನೇಕ ಉದಾಹರಣೆಗಳು ಇಲ್ಲಿವೆ.

ನಿನ್ನೊಂದುಗೂಡೆ ಹೊಸ
ಬಣ್ಣ ಬಂದಿತು ತಿರೆಗೆ
ಚೆನ್ನೆ ಎಲ್ಲೆಲ್ಲಿಯು ನಲಿವೆ ನಲಿವು
ನಿನ್ನಿಂದಲೇ ಹಗಲು
ನಿನ್ನಿಂದಲೇ ಇರುಳು
ಚೆನ್ನತೆಯ ಪಡೆದೆನಗೆ ಸೊಗಯಿಸುವವು.

ಬೇಂದ್ರಯವರ 'ಸಖೀಗೀತ'ವನ್ನು ನೆನಪಿಸುವ ಇಲ್ಲಿನ ರಚನೆಗಳು ದೇಶೀ ಕನ್ನಡದ ತೀವ್ರ ಪರಿಣಾಮಕಾರತೆಯಿಂದ ತಟ್ಟನೆ ಸೆಳೆಯುತ್ತವೆ.

'ಕಾರಹುಣ್ಣಿವೆ' (೧೯೫೧) ಸಂಕಲನದಲ್ಲಿ ಆನಂದಕಂದರು ಜೀವನಾನುಭವದ ವಿಭಿನ್ನ ಮಗ್ಗಲುಗಳಲ್ಲಿ ಸಾಧಿಸಿರುವ ಪಕ್ವತೆಯ ಸಮತೋಲನದ ಸಹಜ ವಿಕಾಸವಿದೆ. ಕಣವಿಯವರು ಈ ಕುರಿತು ಹೇಳುವ ಮಾತುಗಳು ಗಮನಾರ್ಹ. "ಕಾರಹುಣ್ಣಿವೆ ಸಂಗ್ರಹದ ಇತರ ಕವಿತೆಗಳಲ್ಲಿ ವಿಷಯ ವೈವಿಧ್ಯವಿದೆ. ಕವಿಯ ಇನ್ನೂ ಒಂದೆರಡು ಹೆಚ್ಚಿನ ಗುಣಗಳನ್ನು ಈ ಸಂಗ್ರಹ ಪ್ರಕಾಶಗೊಳಿಸಿದೆ. ಭಕ್ತಿಭಾವ, ಅಣಕು-ವಿಡಂಬನೆ ಸಮಾಜಪ್ರಜ್ಞೆ ಇವುಗಳ ಜತೆಗೆ ಕವಿಯ ಜೀವನ 'ತತ್ತ್ವಜ್ಞಾನ'ದ ಪಕ್ವತೆಯನ್ನೂ ಮೊನೆಯನ್ನೂ ಇಲ್ಲಿ ಕಾಣಬಹುದು. ಮನದ ಮಾತು, ಮಾಟಗಾರ್ತಿ, ಕೊಳಲನುಡಿಸು ಸಾರಥಿಗೆ, ಬಯಕೆ, ಮೊರೆ, ಹಾವಾಡಿಗೆ, ಶ್ರೀಕೃಷ್ಣನ ಕೊಳಲಿಗೆ, ಪರಾತ್‌ಪರ, ಮುರಲೀನಾದ – ಈ ಕವಿತೆಗಳ ಭಕ್ತಿ ಭಾವದಿಂದ ನೆನೆದಿವೆ."[೨೬]

'ನಲ್‌ವಾಡುಗಳು' (೧೯೫೮) ಸಂಕಲನದ ಕವಿತೆಗಳು ಆನಂದಕಂದರನ್ನು ಕರ್ನಾಟಕದಾದ್ಯಂತ ಜನಪ್ರಿಯಗೊಳಿಸಿವೆ.

---

೨೫. ಒಡನಾಡಿ-ಮುನ್ನುಡಿ
೨೬. ಬೆಲವಳು – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೯೩

ಕಾಮನ ತಾಯಿಗೆ ಕಾಮನ ತಂದಿಗೆ
ಮೊದಲು ನಮ್ಮ ನಮನಾ
ಕಾಮನನ್ನವರು ಪಡಿಯದಿದ್ದರ
ಜೀವಕ ಬೆಲೆಯೇನಾ

ನಗ-ನಗತ್ಯ ನಡಿದಿಯಲ್ಲೆ ನಾರೀ-ವೈಯಾರೀ
ಮಿಂಚಿನಗೊನಿ ತೂರಿ-ನಗ ನಗತ್ಯ . . .
ಕಣ್ಣನೋಟ ಕಾಮನಬಿಲ್ಲಾ
ಕೆನ್ನೆಯೆರಡು ಕನಡೀ ಹಳ್ಳಾ . . .

ಉಟ್ಟಾಳು ಹಸರು ಪತ್ತಲಾ
ಪತ್ತಲಲ್ಲಾಲಾ ಹೂವಿನ್ಹಿತ್ತಲಾ

ಚಂದೂಮಾಮಾನ ಮಗಳಿವಳೇನೊ ಹಾಂಗ ನಗಿಯ ರೀತಿ.
ಮುಂಗಾರಿನ ನಿಲ ಹೊಂದೆನಿ ದಂಟಿನ ಹಂದರ ಹಾಕೆಯ್ತೆ
ಹೆಸರು ಹುರುಳಿ ಅಲಸಂದಿ ಅವರಿಬಳ್ಳಿ ತ್ವಾರಣ ಬಿಗದಯ್ತೆ
ಹುಚ್ಚೆಳ್ಳಿನ ಹೊಲ ಹೂಗಳ ಅರಳಿಸಿ ಕುಚ್ಚನುಕಟ್ಟೆಯ್ತೆ
ಉಡಿಯ ತುಂಬಲಕ ಮಾಗಿ ಬಾಗಿ ನಿಂತಾವ ನವಣೆ – ಸಾವಿ
ಅನ್ನಕುಮಾರನ ಬಸುರಿಯಾದಳೌ ನಮ್ಮ ಭೂಮಿದೇವಿ!

ಇಂಥ ಸಾಕಷ್ಟು ಹಾಡುಗಳು ಈ ಸಂಕಲನದಲ್ಲಿ ಸೇರಿದ್ದು 'ನಾ ಸಂತಿಗೆ ಹೋಗಿದ್ನಿ ಆಕೆ ತಂದಿಮ್ಯೋ ಬೆಣ್ಣಿ', 'ಯಾತಕ್ಕವ ಹುಬ್ಬಳ್ಳಿ ಧಾರ್ವಾಡ'ದಂತಹ ಅನೇಕ ಜನಪ್ರಿಯ ಗೀತೆಗಳು ಆನಂದಕಂದರನ್ನು ಉತ್ತರ ಕರ್ನಾಟಕದಲ್ಲಂತೂ ಮನೆಮಾತಾಗಿಸಿದ್ದ ಕಾಲವೊಂದಿತ್ತು. "ಜಾನಪದ ಶೈಲಿಯ ಸಹಜತೆಯಿಂದ ಈ ಸಂಕಲನದ ಹಲವು ಗೀತಗಳು ಜನವಾಣಿಯಲ್ಲಿ ಎಷ್ಟು ಗಾಢವಾಗಿ ಬೆರೆತಿವೆ ಎಂದರೆ ಅವುಗಳನ್ನು ರಚಿಸಿದವರು ಆನಂದಕಂದರು ಎಂಬುದು ಕೂಡ ಮರೆಯಾಗಿ ಜಾನಪದ ಕೋಶದಲ್ಲಿ ಸೇರ್ಪಡೆಯಾಗಿ ಸಮರಸ ಹೊಂದಿಬಿಟ್ಟಿವೆ. ಸ್ಥಾನಿಕರಾದ ಸಂಗೀತಗಾರರು, ಗಾಯಕರ ಕಂಠಕ್ಕೆ ಅನುಕೂಲವಾಗುವಂತೆ ಪಾಠಾಂತರ ಪ್ರಕ್ಷೇಪಾದಿಗಳನ್ನು ಪಡೆದು ಶುದ್ಧ ಜಾನಪದ ರೂಪವನ್ನೇ ಆನಂದಕಂದರ ಕವನಗಳು ಪಡೆದಿವೆ. ಇದು ಕವಿಯ ಪ್ರತಿಭೆಯನ್ನು ಸಾರುವ ಪ್ರಶಸ್ತಿಯಾಗಿದೆ."[೨೭]

**ಉತ್ಸಾಹಗಾಥಾ :** ಆನಂದಕಂದರ ಏಳನೆಯ ಕವನ ಸಂಕಲನ 'ಉತ್ಸಾಹಗಾಥಾ'

೨೭. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೩೭೨-೭೩

(೧೯೭೨) ಸ್ವಾತಂತ್ರ್ಯೋತ್ತರ ಭಾರತದ ಭ್ರಮನಿರಸನಗಳ ನಡುವೆಯೂ ಉತ್ಸಾಹವನ್ನು, ಆಶಾವಾದಿ, ನೆಲೆಯನ್ನು ಉಳಿಸಿಕೊಂಡು ಮಾನವತೆಯ ಪೂರ್ಣತೆಗಾಗಿ ನಿರಂತರ ಜಾಗೃತರಾಗಬೇಕೆನ್ನುವ ಆಶಯದಿಂದ ಕೂಡಿದ ಕವನಗಳನ್ನೊಳಗೊಂಡಿದೆ.

ಎಲ್ಲೆಲ್ಲಿಯೂ ಹಸಿದ ಬಸಿರು, ಎಲ್ಲೆಡೆಯೂ ಬಿಸಿಯ ಉಸಿರು
ಅಯ್ಯೋ ಆಹಾ! ಸಾಂಬಶಿವಾ! ಕುಯ್ಯೋಮರೋ ಎನುವ ಬೇರು
ನಡುವೆಯೆಲ್ಲೋ ಕೇಳಿಸುತಿದೆ ರೌದ್ರಹಾಸ್ಯದೇರು.

ಮಾನವ ಕುಲ ತಾನೆ ತಪ್ಪಿ ಇಳೆಯ ಬಾಳ ಕದಡಿದೆ
ದಾನವರಾಡಳಿತ ಗುಡಿಯನೆತ್ತಿ ಹಿಡಿದು ನಡೆದಿದೆ
ಕಾವ ತಾಯ ಕರುಳಲ್ಲಿಯೆ ಹಾವು ಹುಟ್ಟಿಕೊಲುತಿವೆ
ಗೋವು ಎಂದು ನಂಬಿದುವೇ ವ್ಯಾಘ್ರವಾಗಿ ತಿನುತಿವೆ.

ಎದೆಯೆದೆಯ ಬೆಸುಗೆಯಿಂದೇರು ಪೇರುಗಳನ್ನು
ತಿದ್ದಿ ವಿಷಮತೆಯ ಸರಿಪಡಿಸಬಹುದು ಅಂದು
ಹರಡಬಹುದೆಲ್ಲೆಡೆಗೆ ಭಾರತೀಯರ ಸತ್ಕೀರ್ತಿ
ಭರತಾಂಬೆಯಾಗುವಳು ವಿಶ್ವದಾರಾಧ್ಯಮೂರ್ತಿ.

ಸಾಮಾಜಿಕನ ಸಂವಚನಗಳು : (೧೯೮೧) ಆನಂದಕಂದರು ವಚನದ ರೂಪವನ್ನು ಬಳಸಿಕೊಂಡು ತಮ್ಮ ಚಿಂತನೆಗೆ ಮತ್ತೊಂದು ನೆಲೆಯನ್ನಿಲ್ಲಿ ಕಲ್ಪಿಸಿಕೊಳ್ಳಲು ಹವಣಿಸಿದ್ದಾರೆ. ಇವು ೧೯೪೪ ರಿಂದ ೧೯೭೧ರ ವರೆಗೆ 'ಜಯಂತಿ'ಗಾಗಿ ಬರೆದವುಗಳು. ಸರ್ವೋದಯ, ನವಯುಗದರ್ಶನ ಆನಂದಕಂದರ ಅಪ್ರಕಟಿತ ಸಂಕಲನಗಳು. ಇಲ್ಲಿ ಕೂಡ ಅವರು ಗಾಂಧೀಜಿ ಹಾಗೂ ವಿನೋಭಾರ ರಾಷ್ಟ್ರೀಯ ಚಿಂತನೆಗಳ ತಳಹದಿಯ ಮೇಲೆ ಮಾನವತೆಯ ಹುಡುಕಾಟ ನಡೆಸಲು ಯತ್ನಿಸಿದಂತಿದೆ.

ಆನಂದಕಂದರ ಕವಿತೆಗಳನ್ನು ಕುರಿತೇ ವಿಶೇಷ ಅಧ್ಯಯನಗಳು ನಡೆಯಬೇಕಾಗಿದೆ. ಅದರ ಸಾಧ್ಯತೆಗಳನ್ನು ಸೂಚಿಸುವ ದೃಷ್ಟಿಯಿಂದ ಈ ಭಾಗದಲ್ಲಿ ಅವರ ಕಾವ್ಯವನ್ನು ಕುರಿತು ಸ್ವಲ್ಪ ದೀರ್ಘವಾಗಿ ಚರ್ಚಿಸಲಾಗಿದೆ. ಆನಂದಕಂದರು ಮೂಲತಃ ಕನ್ನಡದ ಶ್ರೇಷ್ಠ ಕವಿ ಎಂಬುದನ್ನು ನಮ್ಮ ವಿಮರ್ಶೆ ಇನ್ನಷ್ಟು ವಿಸ್ತೃತವಾಗಿ ಚರ್ಚಿಸಿ ತೋರಿಸಬೇಕಾಗಿದೆ. ಆನಂದಕಂದರಿಗೆ ಈ ನಿಟ್ಟಿನಲ್ಲಿನ್ನೂ ನ್ಯಾಯ ಒದಗಬೇಕಿದೆ.

ಕವಿಭೂಷಣ ಎನ್ನುವ ಬಿರುದು ಅವರಿಗೆ ಅನ್ವರ್ಥಕವಾಗಿಯೇ ಇದೆ. ಅವರು

ಕಂಡ ದೃಶ್ಯ, ಅನಿಸಿದ ಸ್ಪಂದನ, ಉಂಡ ಅನುಭವ, ಪಡೆದ ದರ್ಶನ ಎಲ್ಲವೂ ನೂರಕ್ಕೆ ನೂರು ಕನ್ನಡ. ಅಚ್ಚಗನ್ನಡ ಭಾವನೆ, ಬದುಕು ಹಾಗೂ ಅಭಿವ್ಯಕ್ತಿಯಲ್ಲಿ ಅವರನ್ನು ಅದ್ದಿ ತೆಗೆದಂತೆ ಕೃಷ್ಣಶರ್ಮರು ಕನ್ನಡದ ಅಪ್ಪಟ ಅಪರಂಜಿ ಆಗಿದ್ದಾರೆ."[೨೮] ಎನ್ನುವ ನಾಡೋಜ ಪಾಟೀಲ ಪುಟ್ಟಪ್ಪನವರ ಮಾತುಗಳು ಕನ್ನಡತ್ವದ ಸಾಕ್ಷಾತ್ಕಾರದಲ್ಲಿಯೇ ಹೇಗೆ ಆನಂದಕಂದರು ಮಾನವತೆಯ ಆವಿಷ್ಕಾರವನ್ನು ಗುರುತಿಸಿಕೊಂಡಿದ್ದರೆಂಬುದು ತಿಳಿಯುತ್ತದೆ.

೧೯೨೪ರ ರಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ಸಿನ ಮಹಾಧಿವೇಶನಕ್ಕೆ ಹಾಡಲು ಸ್ವಾಗತ ಗೀತೆಯನ್ನು ಬರೆದುಕೊಡುವಂತೆ ನಾಡಿನ ಕವಿಗಳನ್ನೆಲ್ಲಾ ಕೇಳಿಕೊಂಡಿದ್ದರು. ತರುಣ ವಯಸ್ಸಿನ ಆನಂದಕಂದರ ಹಾಡು ಅದಕ್ಕೆ ಆಯ್ಕೆಗೊಂಡಿತ್ತೆಂದರೆ ಅವರ ಪ್ರತಿಭೆಯ ಸತ್ವ ಶಕ್ತಿಗಳ ಅರಿವುಂಟಾಗಬಲ್ಲದು. ಇಂತಹ ಕವಿ–ಚೇತನ ಬದುಕಿನ ವಿಭಿನ್ನ ಹೊಡೆತಗಳಿಗೆ ಸಿಕ್ಕು ತನ್ನ ಪ್ರತಿಭೆಯನ್ನು ಹಲವು ದಿಕ್ಕಿನಲ್ಲಿ ಹರಿಯಬಿಡಬೇಕಾಗಿ ಬಂದದ್ದೂ, ಅದರ ನಡುವೆಯೂ ದಿಟ್ಟವಾಗಿ ಹೋರಾಡಿ ಸಂಕಷ್ಟಗಳನ್ನು ಜಯಿಸಿ ನಿಲ್ಲಲು ಜೀವಂತ ಮಾದರಿಯಾಗಿ ನಿಂತ ವ್ಯಕ್ತಿತ್ವವೊಂದಕ್ಕೆ ಅವರ ಹೃದಯ ದನಿಗಳಂತಿರುವ ಅವರ ಕಾವ್ಯಕ್ಕೆ ನಾಡು ಸೂಕ್ತ ಗೌರವ ನೀಡುವುದು ಸಾಂಸ್ಕೃತಿಕವಾಗಿ ಮಹತ್ವದ ಸಂಗತಿ.

**೨. ಆನಂದಕಂದರ ಸಣ್ಣ ಕಥೆಗಳು :**

ಆನಂದಕಂದರ ಕವಿ ವ್ಯಕ್ತಿತ್ವ ಮುಂಚೂಣಿಯಾದರೂ ಅಷ್ಟೇ ಶ್ರದ್ಧೆಯಿಂದ ಅವರು ಸಣ್ಣ ಕಥೆಗಳನ್ನೂ ಬರೆದಿದ್ದಾರೆ. ಅವರ ಸಣ್ಣ ಕಥೆಗಳ ಫಸಲು ಸಮೃದ್ಧವಾಗಿಯೇ ಇದೆ. ಗ್ರಾಮೀಣ ಬದುಕಿನ ದಟ್ಟ ಜೀವನಾನುಭವಗಳಿಂದ ಪರಿಪುಷ್ಟವಾದ ಜೀವನ ಪ್ರೀತಿಯಿಂದ ನಿರಂತರ ಕ್ರಿಯಾಶೀಲತೆಯನ್ನು ಉಳಿಸಿಕೊಂಡಿದ್ದ, ಸ್ವತಃ ಬದುಕಿನಲ್ಲಿ ಸಂಕಷ್ಟಗಳ ಅಗ್ನಿದಿವ್ಯದಲ್ಲಿ ಹಾದುಬಂದ ಆನಂದಕಂದರ ಅಭಿವ್ಯಕ್ತಿಗೆ ಕಾವ್ಯದ ಭಾವನಿಷ್ಠ ಅಮೂರ್ತ ನೆಲೆಗಳ ವ್ಯಾಪ್ತಿ ಸಾಕಾಗದೆನಿಸಿರಬೇಕು. ಅವರು ಕಾವ್ಯದಲ್ಲಿ ಕಳೆದುಕೊಂಡದ್ದನ್ನು ಸಣ್ಣ ಕಥೆಗಳಲ್ಲಿ ತುಂಬಿಕೊಂಡಿದ್ದಾರೆ ಎಂದೇ ಹೇಳಬೇಕು. ಹಾಗಂತಲೇ ಆನಂದಕಂದರು ಆರು ಕಥಾ ಸಂಕಲನಗಳಲ್ಲಿ ಒಟ್ಟು ನಲವತ್ಮೂರು ಕಥೆಗಳನ್ನು ಬರೆಯಲು ಸಾಧ್ಯವಾಗಿದೆ. ಅವರ ಮೂರು ಕಥೆಗಳು ಅಪ್ರಕಟಿತವಾಗಿ ಉಳಿದಿವೆ. ಅವರ ಪ್ರಕಟಿತ ಕಥಾಸಂಕಲನಗಳು ಹೀಗಿವೆ :

---

೨೮. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೪೧

೧. ಬಡತನದ ಬಾಳು (೧೯೩೨)

೨. ಸಂಸಾರ ಚಿತ್ರ (೧೯೩೪)

೩. ನಮ್ಮ ಬದುಕು (೧೯೩೯)

೪. ಮಾತನಾಡುವ ಕಲ್ಲು (೧೯೪೯)

೫. ಜನಪದ ಜೀವನ (೧೯೫೫)

೬. ಕಳ್ಳರ ಗುರು (೧೯೬೯)

೭. ದಶಮಂಜರಿ (ಆಯ್ದ ಕಥೆಗಳು) (೧೯೬೮)

ಆನಂದಕಂದರು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಬೆಳೆದವರಾದರೂ, ಕಾವ್ಯದ ಒಲವನ್ನು ಅಂತರಂಗದಲ್ಲಿ ತುಂಬಿಕೊಂಡವರಾದರೂ ಅವರ ಜೀವನ ದೃಷ್ಟಿ ಬದುಕಿನ ನಿತ್ಯ ವಾಸ್ತವಗಳನ್ನು ಶೋಧಿಸುವ ಹಾಗೂ ರೂಪಿಸುವ ಕಡೆಗೆ ಆಸಕ್ತವಾದುದು. ಅವರ ಮಾತುಗಳಲ್ಲಿ ಇದರ ಸ್ಪಷ್ಟ ಹೊಳಹನ್ನು ಕಾಣಬಹುದು. "ಆದರ್ಶವನ್ನು ಸಾಧಿಸಲು ವಾಸ್ತವದ ದಾರಿಯಲ್ಲಿಯೇ ನಡೆಯಬೇಕಾಗುತ್ತದೆ. ವಾಸ್ತವದಲ್ಲಿ ಮಾರ್ಗ ಕ್ರಮಿಸದೇ ಹೋದರೆ ನಮಗೆ ಆದರ್ಶದ ದರ್ಶನವಾಗುವುದಿಲ್ಲ. ಆದರ್ಶದ ಸಿದ್ಧಿಯಿಲ್ಲದೆ ನಮ್ಮ ವಾಸ್ತವ ಜೀವನಕ್ಕೆ ಪರಿಪೂರ್ಣತೆಯಿಲ್ಲ. ಆದರ್ಶವೆಂಬುದು ಅವಾಸ್ತವವಲ್ಲ. ನಿಂತನೆಲೆಯಿಂದ ದೂರದಲ್ಲಿರುವ ವಾಸ್ತವ ಎಂದಿಷ್ಟೇ ಅದರ ಅರ್ಥ."[೨೯] ನವೋದಯ ಸಂದರ್ಭದಲ್ಲಿದ್ದು ಇಂಥ ವಾಸ್ತವ ದೃಷ್ಟಿಕೋನವನ್ನು ಹೊಂದಿರುವ ಸಾಹಿತಿಗಳ ಕುರಿತು ಇಂದು ಪುನಃ ಅಭ್ಯಸಿಸುವ ಅನುಸಂಧಾನಗೊಳಿಸಿಕೊಳ್ಳುವ ಅಗತ್ಯವಿದೆ. ಬದುಕನ್ನು ಕುರಿತಾದ ಇಂತಹ ನಿಲುವುಗಳಿಂದಲೇ ತಮ್ಮ ಕತೆಗಳ ಆಶಯಗಳನ್ನು ರೂಪಿಸಿಕೊಂಡಿದ್ದರಿಂದ ಆನಂದಕಂದರ ಕಥಾ ಸಾಹಿತ್ಯ ಅಭ್ಯಾಸಯೋಗ್ಯವಾಗಿದೆ. ಕನ್ನಡ ಸಣ್ಣ ಕಥೆಯ ಇತಿಹಾಸದಲ್ಲಿ ಅವರ ಸ್ಥಾನವನ್ನು ಗುರುತಿಸುವ ಡಾ. ಬಸವರಾಜ ಮಲಶೆಟ್ಟಿಯವರು ಹೀಗೆ ಬರೆಯುತ್ತಾರೆ: "ಆನಂದಕಂದರು ಕನ್ನಡದ ಪ್ರಮುಖ ಸಣ್ಣ ಕಥೆಗಾರರಲ್ಲಿ ಒಬ್ಬರು. ನಮ್ಮಲ್ಲಿ ಸಣ್ಣ ಕಥೆಗಳು ವಿಪುಲವಾಗಿ ಸೃಷ್ಟಿಗೊಂಡು ಒಂದು ಗಟ್ಟಿ ಸಂಪ್ರದಾಯವಾಗುತ್ತಿದ್ದ ಅವಧಿಯಲ್ಲಿಯೇ ಆನಂದಕಂದರು ತಮ್ಮ ಕತೆಗಳನ್ನು ಬರೆದರು. ಸಮಕಾಲೀನ ಸಾಹಿತ್ಯ ಪ್ರವೃತ್ತಿಯ ಲಕ್ಷಣಗಳೊಂದಿಗೆ ಅವುಗಳನ್ನು ಮೀರಿ ನಿಂತಿರುವ ವಿಲಕ್ಷಣ ಗುಣಗಳೂ ಅವರ ಕತೆಗಳಲ್ಲಿವೆ. ಆನಂದಕಂದರ ಸಾಹಿತ್ಯಿಕ ಧೋರಣೆ ಅವರ ಸಣ್ಣ ಕತೆಗಳಲ್ಲಿ

೨೯. ಜನಪದ ಜೀವನ–ಆನಂದಕಂದ ಪು. ೧೭

ಒಟ್ಟಾರೆ ಪ್ರತಿಬಿಂಬಿತವಾಗಿದೆ. ನವೋದಯದ ಅಂಶಗಳಾದ ಜೀವನ ಸೌಂದರ್ಯ, ಸಂಸ್ಕೃತಿ, ಅಭಿಮಾನ, ದೇಶಪ್ರೇಮ, ಆದರ್ಶ ಮುಂತಾದವುಗಳು ಸ್ಥೂಲವಾಗಿ ಆನಂದಕಂದರ ಸಾಹಿತ್ಯಿಕ ಮನೋಧರ್ಮವನ್ನು ರೂಪಿಸಿವೆ."[೩೦]

ಆನಂದಕಂದರ ಮೊದಲ ಕಥೆ 'ನನ್ನ ಗೆಳೆಯ' ೧೯೨೨ ರಲ್ಲಿ ತಾವೇ ಸಂಪಾದಿಸುತ್ತಿದ್ದ ಮಾತೃಭೂಮಿ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು. ಅದು ಯಾವ ಸಂಕಲನದಲ್ಲೂ ಸೇರಿಲ್ಲ. ೧೯೨೫ ರಲ್ಲಿ 'ಸ್ವಧರ್ಮ' ಪತ್ರಿಕೆಯಲ್ಲಿ ಪ್ರತಿ ತಿಂಗಳೂ ಒಂದೊಂದು ಕಥೆ ಪ್ರಕಟವಾದವು. ಹೀಗೆ ಅವರ ಕಥೆಗಳು ಪತ್ರಿಕಾ ಬರಹದ ಅನಿವಾರ್ಯತೆಯನ್ನು ತೂಗಿಸುವ ಉದ್ದೇಶವನ್ನೂ ಹೊಂದಿದ್ದವೆಂಬ ಅಭಿಪ್ರಾಯವೂ ಇದೆ.

**'ಬಡತನದ ಬಾಳು'** (೧೯೩೨): ಆನಂದಕಂದರ ಮೊದಲ ಕಥಾ ಸಂಕಲನ ಇದು. ಪ್ರಗತಿಶೀಲ ಚಳುವಳಿ ಆರಂಭವಾಗುವ ಒಂದೆರಡು ದಶಕ ಮೊದಲೇ ಆನಂದಕಂದರು ಬಡತನದ ಕ್ರೂರ ಚಿತ್ರಗಳನ್ನು ತಮ್ಮ ಕಥೆಗಳಲ್ಲಿ ಬಿಡಿಸಿದ್ದಾರೆ. ಮೊದಲ ಕಥೆ 'ಈ ಚಿತ್ರ- ಆಚಿತ್ರ'ದಲ್ಲಿ ಶ್ರೀಮಂತ ಹಾಗೂ ಆತನ ಆಳಿನ ಕುರಿತಾದ ಕಥೆಯಿದ್ದು, ಶ್ರೀಮಂತರ ಅಹಂಕಾರ, ಅಟ್ಟಹಾಸಗಳು, ಆಳಿನ ಅಸಹಾಯತೆಗಳೊಂದಿಗೆ ಶ್ರೀಮಂತರೂ ಕೂಡ ರೋಗರುಜಿನಗಳೆದುರಿಗೆ ಅಸಹಾಯಕರಾಗುವ ಸಂದರ್ಭವನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಇನ್ನೊಂದು ಕಥೆ ಬಹಿಷ್ಕಾರದಲ್ಲಿ ಬ್ರಾಹ್ಮಣರ ಮಡಿವಂತಿಕೆ ಎಂಥ ಅಮಾನವೀಯ ಸ್ವರೂಪದ್ದೆಂಬುದರ ಚಿತ್ರಣವಿದೆ. ಆನಂದಕಂದರು ತಮ್ಮ ಸ್ವಜಾತಿಯಲ್ಲಿ ಅಡಗಿದ್ದ ಅಮಾನವೀಯ ಭಾವನೆಗಳು ಸಾವಿನ ಸಂದರ್ಭದಲ್ಲೂ ಬದಲಾಗದಷ್ಟು ಕಠೋರವಾಗಿದ್ದನ್ನು ದಿಟ್ಟವಾಗಿ ತೋರಿಸಿದ್ದಾರೆ. ಪ್ಲೇಗಿನ ದುರಂತದ ವಾಸ್ತವ ಚಿತ್ರಣ ಮನಕಲಕುವಂತಿದೆ. 'ಹೊಟ್ಟೆಯ ಹೋರಾಟ' ಕಥೆಯಲ್ಲಿ ಬಡತನದ ಚಿತ್ರಣದ ಇನ್ನೊಂದು ಮುಖ ಚಿತ್ರಿತವಾಗಿದ್ದರೆ 'ರಾಜನ ಧರ್ಮ ಸಂಶೋಧನೆ' ಕಥೆಯಲ್ಲಿ ಹಿಂದೂ-ಮುಸ್ಲಿಂರಿಬ್ಬರ ಅಮಾನವೀಯ ಟೊಳ್ಳುತನಗಳು ಶೋಧಿಸಲ್ಪಟ್ಟಿವೆ.

**ಸಂಸಾರ ಚಿತ್ರ** : ಎರಡನೆಯ ಸಂಕಲನ 'ಸಂಸಾರ ಚಿತ್ರ' (೧೯೩೪) ದಲ್ಲಿ ಒಂಬತ್ತು ಕಥೆಗಳಿವೆ. ನವೋದಯದ ಗುಣ ದೌರ್ಬಲ್ಯಗಳನ್ನು ಈ ಕಥೆಗಳಲ್ಲಿ ಕಾಣಬಹುದಾದರೂ ವೈವಿಧ್ಯತೆ ಇಲ್ಲಿನ ವೈಶಿಷ್ಟ್ಯ. 'ಹೆಣ್ಣಿನ ಕಣ್ಣು' ಕಥೆಯಲ್ಲಿ ವಿರಸ ದಾಂಪತ್ಯದ ಚಿತ್ರಣವಿದ್ದರೆ 'ಜೀವದ ಹೂ'ವಿನಲ್ಲಿ ಮಗುವನ್ನು ಕಳೆದುಕೊಳ್ಳುವ

---

೩೦. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೧೦೭

ದಂಪತಿಗಳ ಶೋಕ ಚಿತ್ರಿಸಲ್ಪಟ್ಟಿದೆ. 'ಅನಾಥ ಬಂಧು' ಕಥೆಯಲ್ಲಿ ಬ್ರಾಹ್ಮಣ ಕುಟುಂಬದ ಬಡತನ ಹಾಗೂ ವೃದ್ಧನೊಂದಿಗೆ ಮದುವೆ ಇತ್ಯಾದಿಗಳ ಚಿತ್ರಣವಿದ್ದು, ಸಿನಿಮೀಯ ಎನಿಸುವ ಕೃತಕತೆ ಕಾಣಿಸಿಕೊಂಡಿದೆ. 'ಮಂಜಿನ ನೀರು' ಲೇಖಕನೊಬ್ಬನ ಬವಣೆಯನ್ನು ಬಿಡಿಸಿಟ್ಟರೆ 'ಬಾಡಿಬಿದ್ದ ಹೂ' ಗಂಡನನ್ನು ಕಳೆದುಕೊಂಡು ಹುಚ್ಚಿಯಾಗುವ ತರುಣಿಯ ಕಥೆಯನ್ನೊಳಗೊಂಡಿದೆ. 'ಆ ಹೆಂಗಸು' ಸಾಧಾರಣ ಕಥೆಯಾದರೆ 'ನೀನು ಪುಟ್ಟನ ತಾಯಿ' ಮಗುವೊಂದರ ಮನಃಸ್ಥಿತಿಯನ್ನು ಭಿನ್ನ ಸಂದರ್ಭದಲ್ಲಿ ಅರ್ಥೈಸಲು ಯತ್ನಿಸುವ ವಿಶಿಷ್ಟ ಪ್ರಯತ್ನವಾಗಿದೆ. 'ನನ್ನ ಹುಚ್ಚು', 'ಸಂಸಾರವೆಂದರೆ ಸೂಜಿಗಲ್ಲ' ಎಂಬ ಕಥೆಗಳು ಅನುಭವದ ಭಿನ್ನ ಮಗ್ಗುಲಗಳನ್ನು ನಿರೂಪಿಸುತ್ತವೆ. 'ನಮ್ಮ ಬದುಕು' (೧೯೩೯), 'ಮಾತನಾಡುವ ಕಲ್ಲು' (೧೯೪೯), 'ಜನಪದ ಜೀವನ' (೧೯೫೫) ಹಾಗೂ 'ಕಳ್ಳರ ಗುರು' (೧೯೬೯) ಸಂಕಲನದ ಕಥೆಗಳಲ್ಲಿ ಆನಂದಕಂದರ ದೃಷ್ಟಿಕೋನ ಒಂದೇಯಾಗಿದ್ದರೂ ಅನುಭವದ ಸಂದರ್ಭಗಳು ಬಿನ್ನ ಆಳವಿಸ್ತಾರಗಳನ್ನು ಪಡೆದಿವೆ. ಆನಂದಕಂದರ ಕಥನ ಶಕ್ತಿಯನ್ನು ಸಮರ್ಥವಾಗಿ ಪ್ರತಿನಿಧಿಸುವ ಇಲ್ಲಿನ ಕಥೆಗಳು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರದ ಸಾಮಾಜಿಕ ಸ್ಥಿತಿಗತಿಗಳನ್ನು ಬದಲಾದ ಪರಿಸ್ಥಿತಿಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವ ಮಹತ್ವದ ಚಾರಿತ್ರಿಕ ದಾಖಲೆಗಳಾಗಿ ನಿಲ್ಲುತ್ತವೆ. ಕೆಲವು ಕಥೆಗಳಲ್ಲಿ ಗ್ರಾಮೀಣ ಬದುಕಿನ ನಂಬಿಕೆಗಳು, ಐತಿಹ್ಯಗಳು, ಆಚರಣೆಗಳು ಭಿನ್ನ ಆಶಯಗಳೊಂದಿಗೆ ಶೋಧಿತಗೊಳ್ಳುತ್ತವೆ. ಮಾಲ್ಕೀ ಹಕ್ಕು, ಜಾಡರ ಜಾಣಪ್ಪ, ಮಾತನಾಡುವ ಕಲ್ಲು, ಸೀಮೆಯ ಕಲ್ಲು, ಜೋಗತಿ ಕಲ್ಲು, ಕಂಕಣದ ಕೈ, ಹುಳಹತ್ತಿದ ಹಳ್ಳಿ, ನೆತ್ತರ ಕೊಡುಗೆ. ಬೋನಗಿತ್ತಿಯ ಹಬ್ಬ ಇವೇ ಮೊದಲಾದ ಕಥೆಗಳು ಆನಂದಕಂದರನ್ನು ಒಬ್ಬ ಸಮರ್ಥ ಕತೆಗಾರರನ್ನಾಗಿ ಎತ್ತಿ ತೋರುತ್ತವೆ. ಕನ್ನಡದ ಶ್ರೇಷ್ಠ ವಿಮರ್ಶಕರಲ್ಲೊಬ್ಬರಾದ ಡಾ. ಗಿರಡ್ಡಿ ಗೋವಿಂದರಾಜ ಅವರು ಆನಂದಕಂದರ ಕಥೆಗಳನ್ನು ಕುರಿತು ತಳೆದಿರುವ ಅಭಿಪ್ರಾಯ ಕನ್ನಡ ಸಣ್ಣ ಕಥೆಯ ಪ್ರಕಾರದಲ್ಲಿ ಆನಂದಕಂದರ ಸ್ಥಾನವನ್ನು ಸ್ಪಷ್ಟವಾಗಿ ಗುರುತಿಸುವಂತಿದೆ. "ಮಾಸ್ತಿಯವರ ಪ್ರಾಭಾವದಿಂದ ತಪ್ಪಿಸಿಕೊಂಡು ಬೇರೆ ಮಾರ್ಗವನ್ನು ಹಿಡಿಯುವಂತಾಯಿತು. ಈ ಭಾಗದ ಕಥೆಗಾರರು ಹೆಚ್ಚು ಗಟ್ಟಿಯಾದ ತಳಹದಿಯ ಮೇಲೆ ತಮ್ಮ ಕಥೆಗಳನ್ನು ಕಟ್ಟಿದರು. ಗ್ರಾಮೀಣ ಬದುಕಿನ ನೈಜ ಮತ್ತು ದಟ್ಟವಾದ ಚಿತ್ರಗಳನ್ನು ಕೊಟ್ಟರು."[೩೧] ಆನಂದಕಂದರ ಕಥೆಗಳನ್ನು ಕನ್ನಡ ಸಣ್ಣ ಕತೆಗಳ ಬೆಳವಣಿಗೆಯ ವಿಸ್ತೃತ ಚೌಕಟ್ಟಿನಲ್ಲಿಟ್ಟು ಗಂಭೀರ ಅಧ್ಯಯನಕ್ಕೆ ಗುರಿಪಡಿಸುವ ಅಗತ್ಯವಿದ್ದು, ನವೋದಯದ ರಮ್ಯತೆಯನ್ನು ಮೀರಿದ ಪ್ರಗತಿಶೀಲತೆಯ ಮುದ್ರೆ

---

೩೧. ಕನ್ನಡ ಸಣ್ಣ ಕಥಾ ಸಂಕಲನ, ಪ್ರಸ್ತಾವನೆ: ಡಾ. ಗಿರಡ್ಡಿ ಗೋವಿಂದರಾಜ

ಒತ್ತದ ದೇಶೀ ನೆಲೆಯ ವಾಸ್ತವ ಮಾರ್ಗವೊಂದರ ಶೋಧಕ್ಕೆ ಈ ಅಧ್ಯಯನ ಪೂರಕವಾಗಬಲ್ಲದು. ಅನ್ಯ ಪ್ರಭಾವಗಳಿಗೆ ಪಕ್ಕಾಗದ ಕನ್ನಡತನ ಆನಂದಕಂದರ ಕಥೆಗಳಲ್ಲೂ ಹಾಸು ಹೊಕ್ಕಾಗಿದೆ.

೩. ಆನಂದಕಂದರ ಕಾದಂಬರಿಗಳು :

ಆನಂದಕಂದರು ತಮ್ಮ ಜೀವನದರ್ಶನದ ಆಳ ವಿಸ್ತಾರಗಳನ್ನು ಇನ್ನಷ್ಟು ವ್ಯಾಪಕವಾಗಿ ಶೋಧಿಸಿಕೊಳ್ಳುವ ಮಾರ್ಗದಲ್ಲಿ ತಮ್ಮ ಪ್ರತಿಭಾಶಕ್ತಿಯನ್ನು ಕಾದಂಬರಿ ಪ್ರಕಾರದಲ್ಲೂ ಹರಿಯಬಿಟ್ಟಿದ್ದಾರೆ. ಸಾಮಾಜಿಕ ಹಾಗೂ ಐತಿಹಾಸಿಕ ವಸ್ತುಗಳನ್ನುಳ್ಳ ಈ ಕೆಳಗಿನ ಐದು ಕಾದಂಬರಿಗಳನ್ನು ಸೃಷ್ಟಿಸಿದ್ದಾರೆ.

೧. ಸುದರ್ಶನ (ಸಾಮಾಜಿಕ) (೧೯೩೩)

೨. ರಾಜಯೋಗಿ (ಐತಿಹಾಸಿಕ) (೧೯೩೪)

೩. ಅಶಾಂತಿ ಪರ್ವ (ಐತಿಹಾಸಿಕ) (೧೯೩೫)

೪. ಮಗಳ ಮದುವೆ (ಸಾಮಾಜಿಕ) ೧೯೫೧)

೫. ಮಲ್ಲಿಕಾರ್ಜುನ (ಐತಿಹಾಸಿಕ) (೧೯೬೧)

ಆನಂದಕಂದರ ಐತಿಹಾಸಿಕ ಕಾದಂಬರಿಗಳ ಕುರಿತು ಅಧ್ಯಯನ ನಡೆಸಿರುವ ಶ್ರೀ ಕೆ.ಎಸ್.ಕೌಜಲಗಿಯವರು ಹೀಗೆ ಅಭಿಪ್ರಾಯ ಪಡುತ್ತಾರೆ: "ಗಳಗನಾಥ ವೆಂಕಟಾಚಾರ್ಯರ ನಂತರದ ಹೊಸಗನ್ನಡದ ಸ್ವತಂತ್ರ ಸಾಹಿತ್ಯದ ಹರಿಕಾರರಲ್ಲಿ ಆನಂದಕಂದರೊಬ್ಬರು. ಕನ್ನಡ ಐತಿಹಾಸಿಕ, ಸಾಮಾಜಿಕ ಸ್ವತಂತ್ರ ಕಾದಂಬರಿಗಳ ರಚನಾಯುಗವನ್ನು ಪ್ರಾರಂಭಿಸಿದವರಲ್ಲಿ ಇವರಿಗೊಂದು ಹಿರಿಯ ಸ್ಥಾನ ಮೀಸಲು. ಗಳಗನಾಥರಂತೆ ವಿಜಯನಗರದ ವೈಭವಕ್ಕೆ ಮಾರುಹೋಗಿ ವಿಜಯನಗರ ಕುರಿತು ಕಾದಂಬರಿ ರಚಿಸಿದವರು. ವಿಜಯನಗರ ಕುರಿತು ಒಟ್ಟು ೨೨-೨೪ ಕಾದಂಬರಿ ಗಳನ್ನು ಬರೆಯಲು ಸಂಕಲ್ಪಿಸಿದ್ದರು. ಆದರೆ ಕೃತಿಗಿಳಿದವು 'ರಾಜಯೋಗಿ', 'ಅಶಾಂತಿ ಪರ್ವ' ಮತ್ತು 'ಮಲ್ಲಿಕಾರ್ಜುನ ಮಾತ್ರ'."[೩೨]

ಕನ್ನಡದಲ್ಲಿ ಐತಿಹಾಸಿಕ ಕಾದಂಬರಿ ಹಾಗೂ ನಾಟಕಗಳ ಪರಂಪರೆಯೇ ಇದೆ. ಅವು ಅನೇಕ ವಾಗ್ವಾದಗಳಿಗೆ ಕಾರಣವಾಗಿರುವುದೂ ನಮ್ಮ ಸಾಮಾಜಿಕ-ಸಾಂಸ್ಕೃತಿಕ ಬದುಕಿನ ಒಳಸುಳಿಗಳನ್ನು ತಿಳಿಯಲು ಸಂದರ್ಭಗಳಾಗಿ ಒದಗುತ್ತಿರುವುದನ್ನು ಸಮಕಾಲೀನ ಸಂದರ್ಭದಲ್ಲಿ ಕಾಣುತ್ತೇವೆ. ತ.ರಾ.ಸು. ಅವರ

೩೨. ಬೆಳುವಲ - ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೧೭೯

'ದುರ್ಗದ ಚರಿತ್ರೆ', ಮಾಸ್ತಿಯವರ 'ಮಡಿಕೇರಿ ಚರಿತ್ರೆ', ಕಾರ್ನಾಡ, ಭೈರಪ್ಪನವರು ಚಿತ್ರಿಸುವ ಟಿಪ್ಪು ಆದಿಯಾಗಿ ಮುಸ್ಲಿಂ ಅರಸರುಗಳ ಚರಿತ್ರೆಗಳನ್ನು ಅವಲಂಬಿಸಿ ಬರೆಯಲಾದ ಕೃತಿಗಳು ಜಾತಿ ಧರ್ಮಗಳ ಕಲ್ಲೋಲಗಳಿಗೆ ಕಾರಣವಾದ ಪ್ರಸಂಗಗಳು ಈ ನಿಟ್ಟಿನ ಕೆಲವು ನಿದರ್ಶನಗಳು. ಆನಂದಕಂದರ ಐತಿಹಾಸಿಕ ಕಾದಂಬರಿಗಳಲ್ಲಿ ಇಂತಹ ವಿವಾದಾತ್ಮಕ ಸಂಗತಿಗಳು ಕಂಡುಬರುವುದಿಲ್ಲ. ಬದಲಾಗಿ ಕ್ನನಡ ನಾಡಿನ ಚರಿತ್ರೆಯ ವೈಭವ ಹಾಗೂ ಅದಃಪತನಗಳನ್ನು ಚಿತ್ರಿಸುವ ಮೂಲಕ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ನಾಡಿನ ಅಭಿಮಾನದ ಮೂಲಕ ಏಕೀಕರಣಕ್ಕೆ ಒತ್ತಾಸೆಯಾಗುವ ಆಸಕ್ತಿಯೊಂದು ಈ ಕೃತಿಗಳಲ್ಲಿ ಇರುವದು ಸ್ಪಷ್ಟವಿದೆ. ಹಕ್ಕ ಬುಕ್ಕರಿಗೆ ಒದಗಿದ ದಿವ್ಯ ಪ್ರೇರಣೆ ಹಾಗೂ ಸಾಹಸ ಪರಾಕ್ರಮಗಳಿಂದ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯ ಮಲ್ಲಿಕಾರ್ಜುನ ದೊರೆಯ ನಂತರ ಹೇಗೆ ದುರಂತಕ್ಕೆ ಒಳಗಾಯಿತು ಹಾಗೂ ಆ ಪತನಕ್ಕೆ ಬಾಹ್ಯ ವೈರಿಗಳಿಗಿಂತ ಆಂತರಿಕ ವೈರಿಗಳೇ ಹೇಗೆ ಕಾರಣರಾದರೆಂಬುದನ್ನು ಈ ಕೃತಿಗಳಲ್ಲಿ ಆನಂದಕಂದರು ಚಿತ್ರಿಸಿದ್ದಾರೆ.

ರಾಜಯೋಗಿ : (೧೯೩೪) ಆನಂದಕಂದರು ಬರೆದ ಮೊದಲ ಐತಿಹಾಸಿಕ ಕಾದಂಬರಿಯಾಗಿದ್ದು, ನ್ಯುನೀರು ಎಂಬ ವಿದೇಶಿ ಯಾತ್ರಿಕನ ವರದಿಯಲ್ಲಿ ದಾಖಲಾಗಿರುವ ಸಣ್ಣ ಎಳೆಯೊಂದನ್ನು ಆಧರಿಸಿ ಸ್ವಂತ ಕಲಾಪ್ರತಿಭೆಯ ಮೂಲಕ ಈ ಕೃತಿಯನ್ನು ಬರೆದಿದ್ದಾರೆ. ಮಲ್ಲಿಕಾರ್ಜುನ ಸಂಗಮವಂಶದ ದೊರೆ. ಇವನ ತಮ್ಮ ವಿರೂಪಾಕ್ಷರಾಯನು. ಅಣ್ಣನ ಮರಣದ ನಂತರ ಅವನ ಮಕ್ಕಳಿಗೆ ಸಲ್ಲಬೇಕಾದ ರಾಜ್ಯಾಧಿಕಾರವನ್ನು ತಾನೇ ಕಿತ್ತುಕೊಂಡು ಹೊಣೆಯನ್ನರಿಯದೆ ಲಂಪಟನಾಗಿ ವಿಲಾಸ ಜೀವನಕ್ಕೆ ತನ್ನನ್ನು ತೆತ್ತುಕೊಂಡು ಬಹಮನಿ ಸುಲ್ತಾನರ ಕುತಂತ್ರಕ್ಕೆ ಬಲಿಯಾಗಿ, ಸಾಮ್ರಾಜ್ಯವನ್ನು ಪತನದ ಅಂಚಿಗೆ ತರುತ್ತಾನೆ. ಇವನ್ನೆಲ್ಲ ಹತ್ತಿರದಿಂದ ಕಾಣುತ್ತಿದ್ದ ಮಲ್ಲಿಕಾರ್ಜುನನ ಮಕ್ಕಳಾದ ರಾಜಶೇಖರ ಮತ್ತು ಪೆದ್ದರಾಯರು ವಿಭಿನ್ನ ಸ್ವಭಾವವದರಾಗಿದ್ದರು. ಪೆದ್ದರಾಯ ತಾನು ಅಧಿಕಾರ ಪಡೆಯಲು ತಂತ್ರ ರೂಪಿಸುತ್ತಿದ್ದರೆ ರಾಜಶೇಖರ ರಾಜಕೀಯದಲ್ಲಿ ನಿರಾಸಕ್ತನಾಗಿ ಸಾತ್ವಿಕ ಸ್ವಭಾವದವನಾಗಿ ಪ್ರಕೃತಿ ಸೌಂದರ್ಯ ಆಸ್ವಾದನೆಯ ಕಡೆಗೆ ಗಮನಹರಿಸುತ್ತ ವಿಹಾರಗಳಲ್ಲಿ ತೊಡಗುತ್ತಾನೆ. ನರಸಿಂಹನಾಯಕ, ದಿಲವರಖಾನ, ಹೇಮಾಂಬಿಕೆಯ ರಂಥ ದೇಶಪ್ರೇಮಿಗಳು ರಾಜಶೇಖರನಲ್ಲಿ ಕ್ಷಾತ್ರ ತೇಜಸ್ಸನ್ನು ಜಾಗೃತಗೊಳಿಸಿ ವೈರಿಗಳ ಸಂಚನ್ನು ಬಯಲು ಮಾಡುತ್ತಾ ರಾಜ್ಯಾಧಿಕಾರ ನ್ಯಾಯವಾಗಿ ಸಲ್ಲಬೇಕಾದವರಿಗೆ ಉಳಿಯುವಂತೆ ಮಾಡಲಾಗುತ್ತದೆ. ಆದರೆ ರಾಜಶೇಖರ ಸಿಂಹಾಸನ ಏರಲು ನಿರಾಕರಿಸಿದ್ದರಿಂದ ಪೆದ್ದಣ್ಣ ಸಿಂಹಾಸನವೇರುತ್ತಾನೆ.

ಅಶಾಂತಿಪರ್ವ : (೧೯೩೫) ರಾಜಯೋಗಿಯ ಮುಂದುವರೆದ ಭಾಗ.

ರಾಜಯೋಗಿಯಂತೆ ಅಧಿಕಾರ ತ್ಯಜಿಸಿ ಬದುಕುತ್ತಿದ್ದ ರಾಜಶೇಖರನೇ ಚಿಕ್ಕಪ್ಪನನ್ನು ಇರಿದು ಕೊಂದಿದ್ದನಾದ್ದರಿಂದ ಪಾಪಪ್ರಜ್ಞೆಯಿಂದ ಬಳಲುತ್ತಿದ್ದ. ಅಪವಾದಭಯವೂ ಅವನನ್ನು ಕಾಡುತ್ತಿತ್ತು. ಇದರಿಂದಾಗಿ ಜನ ಅವನೇ ಅರಸನಾಗಲೆಂದು ಅಪೇಕ್ಷಿಪಟ್ಟರೂ ರಾಜನಾಗಲು ಒಪ್ಪದವನಾಗಿರುತ್ತಾನೆ. ದಳಪತಿ ದೇವಣ್ಣನಾಯಕನ ಮಗಳನ್ನು ಪ್ರೇಮಿಸುತ್ತಿದ್ದ ಪೆದ್ದಣ್ಣ, ಆಕೆಯ ವಿರೂಪಾಕ್ಷರಾಯನನ್ನು ಕೊಂದ ವೀರನನ್ನು ಮದುವೆಯಾಗುವ ತೀರ್ಮಾನದಿಂದ ನಿರಾಶನಾಗುತ್ತಾನೆ. ಸಾಳ್ವ ನರಸಿಂಹರಾಯನ ಮಗಳು ಕಮಲಾಂಬಿಕೆಯೊಂದಿಗಿನ ಅಪೇಕ್ಷೆಯೂ ಈಡೇರದೆ ಹೋಗುತ್ತದೆ. ಈ ಅಸಮಾಧಾನಗಳು ರಾಜಶೇಖರನ ಕೊಲೆಯಲ್ಲಿ ಹಾಗೂ ಪೆದ್ದಣ್ಣನ ಪಲಾಯನದಲ್ಲಿ ಪರ್ಯಾವಸಾನವಾಗಿ ಅರಾಜಕತೆ ಅಶಾಂತತೆ ತಾಂಡವವಾಡುವಂತಾಗುತ್ತದೆ. ಸಾಳ್ವನರಸಿಂಹ ಸಿಂಹಾಸನವೇರುವಂತಾಗುತ್ತದೆ.

ರಾಜಕೀಯ ಬದುಕಿನ ಸಂಕೀರ್ಣ ಮುಖಗಳನ್ನು ಹೆಣ್ಣು ಗಂಡಿನ ಸಂಬಂಧಗಳ ಆಯ್ಕೆ ನಿಗೂಢಗಳನ್ನು ರೋಚಕವಾಗಿ ಚಿತ್ರಿಸುವಲ್ಲಿ ಆನಂದಕಂದರು ಈ ಕೃತಿಗಳಲ್ಲಿ ಯಶಸ್ವಿಯಾಗಿದ್ದಾರೆ.

ಮಲ್ಲಿಕಾರ್ಜುನ : (೧೯೬೧) ಸುಸಂಸ್ಕೃತಿ ಸಾತ್ವಿಕತೆಗಳ ಸಾಕಾರವೆನಿಸಿದ್ದ ಪ್ರಜಾಪ್ರೇಮಿ, ನಾಡು ನುಡಿಗಳ ನಿಷ್ಠಾವಂತ ಸೇವಾಕಾಂಕ್ಷಿಯಾಗಿದ್ದ ಮಲ್ಲಿಕಾರ್ಜುನನು ರಾಜಕೀಯ ಷಡ್ಯಂತ್ರಗಳನ್ನು ಭೇದಿಸಿ ಒಳಗಿನ ಹೊರಗಿನ ವೈರಿಗಳನ್ನು ಸದೆಬಡೆದು ನಿಲ್ಲುವ ಕಥೆ ಅನೇಕ ರೋಚಕ ತಿರುವುಗಳಿಂದ ವಿಶೇಷ ಗಮನ ಸೆಳೆಯುತ್ತದೆ.

ಈ ಕಾದಂಬರಿಗಳು ಆ ಕಾಲದ ಓದುಗರ ಅಭಿರುಚಿ ನಿರ್ಮಾಣದಲ್ಲಿ ಮಹತ್ವವನ್ನು ಪಡೆಯುವದರೊಂದಿಗೆ ಐತಿಹಾಸಿಕ ನೆಲೆಗಳನ್ನು ಸಮಕಾಲೀನ ಸಂದರ್ಭದ ನಾಡುನುಡಿ ಹಾಗೂ ದೇಶಪ್ರೇಮದ ಭಾವನೆಗಳನ್ನು ಉದ್ದೀಪಿಸುವ ಸಲುವಾಗಿ ಅನುಸಂಧಾನಗೊಳಿಸಿಕೊಳ್ಳುವ ನಿಟ್ಟಿನಲ್ಲೂ ವಿಶೇಷ ಪ್ರಸ್ತುತ ಎನಿಸುತ್ತವೆ. ಐತಿಹಾಸಿಕ ಕಾದಂಬರಿಗಳ ಆರಂಭ ಹಾಗೂ ಬೆಳವಣಿಗೆಯ ವಿಷಯದಲ್ಲಿ ಆನಂದಕಂದರ ಪಾತ್ರ ಗಮನಾರ್ಹ ಎಂಬುದಕ್ಕೆ ಈ ಕಾದಂಬರಿಗಳು ದಾಖಲೆ ಎನಿಸಿವೆ.

ಆನಂದಕಂದರು ಎರಡು ಸಾಮಾಜಿಕ ಕಾದಂಬರಿ ಬರೆದಿದ್ದು, ಅದರಲ್ಲಿ ಮೊದಲನೆಯದು 'ಸುದರ್ಶನ' (೧೯೩೩). ಆನಂದಕಂದರ ಕಾದಂಬರಿಗಳಲ್ಲೆಲ್ಲ ಮೊದಲನೆಯದು ಕೂಡ. ಉತ್ತರ ಕರ್ನಾಟಕದ ಮಟ್ಟಿಗೆ ಸಾಮಾಜಿಕ ಕಾದಂಬರಿ ಬರೆದ ಮೊದಲಿಗರೆಂದು ಆನಂದಕಂದರನ್ನು ಪರಿಗಣಿಸಲಾಗಿದೆ. ಮನೋಹರ ಗ್ರಂಥಮಾಲೆಯ ಮೊದಲ ಕೃತಿಯಾಗಿಯೂ ಇದು ಪ್ರಕಟಗೊಂಡಿದೆ.

ಉಷಾ–ಸುದರ್ಶನ ಮತ್ತು ಪ್ರಭಾ–ಗಿರಿಧರ ಎರಡು ಜತೆ ವಿಫಲ ಪ್ರೇಮ ಪ್ರಕರಣಗಳ ಕಥೆ ಇಲ್ಲಿದೆ. ಪ್ರಭಾ ಗಿರಿಧರನನ್ನು ಬಯಸಿದರೆ, ಗಿರಿಧರ ಉಷಾಳನ್ನು ಬಯಸುತ್ತಾನೆ. ಉಷಾ ಸುದರ್ಶನನ್ನು ಆಶೆಪಡುತ್ತಾಳೆ. ಇದರಿಂದ ಅಸಮಾಧಾನಗೊಳ್ಳುವ ಗಿರಿಧರ, ಸುದರ್ಶನ, ಉಷಾ ಪರಸ್ಪರ ಭೇಟಿಯಾಗದ ಹಾಗೆ ನೋಡಿಕೊಳ್ಳುತ್ತಾನೆ. ಈ ವರ್ತುಲದಿಂದ ತಪ್ಪಿಸಿಕೊಂಡು ಹೋಗಿ ಸಮಾಜ ಸುಧಾರಕನಾಗುವ ಸುದರ್ಶನ ಮತ್ತೆ ಉಷಾಳನ್ನು ಸಂಪರ್ಕಿಸುವ ಸಂದರ್ಭ ಒದಗಿದರೂ ಪರಸ್ಪರ ಮದುವೆಯಾಗದೆ ಉಳಿಯುತ್ತಾರೆ. ಷೇಕ್ಸ್‌ಪಿಯರನ ನಾಟಕಗಳಲ್ಲಿ ಬರುವ ತ್ರಿಕೋನ ಪ್ರೀತಿಯ ಮಾದರಿಯ ಭಿನ್ನ ಸಾಧ್ಯತೆಗಳನ್ನು ಆನಂದಕಂದರು ಇಲ್ಲಿ ಪ್ರಯೋಗಿಸಿದ್ದಾರೆ. ವಿ.ಕೃ.ಗೋಕಾಕ, ಬಿ.ಟಿ.ಜಿ.ಕೃಷ್ಣಮ್ಮ, ವಿ.ಸೀ.ಹಾಗೂ ಮಿರ್ಜಿ ಅಣ್ಣಾರಾಯರು ಈ ಕಾದಂಬರಿ ಕುರಿತು ವಿಮರ್ಶೆ, ವಿಶ್ಲೇಷಣೆ ಮಾಡಿರುವುದು ಈ ಕೃತಿಯ ಗಮನಾರ್ಹತೆಗೆ ಸಾಕ್ಷಿ.

'ಮಗಳ ಮದುವೆ' (೧೯೫೧) ಆನಂದಕಂದರ ಇನ್ನೊಂದು ಸಾಮಾಜಿಕ ಕಾಂದಂಬರಿ. ಇದು 'ಸುದರ್ಶನ' ಕಾಂದಂಬರಿಗಿಂತ ಭಿನ್ನವಾದ ಕಾಲಘಟ್ಟದಲ್ಲಿ ಹಾಗೂ ಭಿನ್ನ ಸಾಮಾಜಿಕ ಪರಿಸರದಲ್ಲಿ ರಚನೆಯಾದ ಕೃತಿಯಾಗಿದ್ದು, ಓದುಗರ ಅಭಿರುಚಿಗಳಲ್ಲೂ ಗಮನಾರ್ಹ ಬದಲಾವಣೆಯಾದ ಸಂದರ್ಭ ಇದಾಗಿದೆ. ಸಹಜವಾಗಿಯೇ ಈ ಕೃತಿ ಭಿನ್ನ ಆಶಯ ನಿರೀಕ್ಷೆಗಳತ್ತ ಮುಖಮಾಡಿದೆ. ಹೆಚ್ಚು ವಾಸ್ತವವಾದಿ ನೆಲೆಗಳತ್ತ ಕೃತಿ ಆಸಕ್ತವಾದಂತಿದೆ.

ಗೋಪಾಲರಾಯನೆಂಬ ಗುಮಾಸ್ತನ ಮಗಳು ಕಾವೇರಿ ಎಂಬ ಕನ್ಯೆಯ ಮದುವೆಯ ಸುತ್ತ ಹೆಣೆದ ಕಥಾವಸ್ತು ಇಲ್ಲಿದೆ. ಸುಮಾರು ಇಪ್ಪತ್ತು ಜನ ವರಮಹಾಶಯರು ತಿರಸ್ಕರಿಸಿದ ಈ ಕನ್ಯೆ ಕೊನೆಗೆ ತನ್ನನ್ನು ತಿರಸ್ಕರಿಸಿ ಹೋದ ವೆಂಕಣ್ಣನೆಂಬುವವನ ಅಣ್ಣ ರಂಗನಾಥನೊಂದಿಗೆ ಮದುವೆಯಾಗುವ ಪ್ರಸಂಗ ಬರುತ್ತದೆ. ಈ ಮದುವೆ ನಡೆಯುವಲ್ಲಿ ಮಹತ್ವದ ಪಾತ್ರ ವಹಿಸುವ ರತ್ನಾಕರ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ ದೇಶಭಕ್ತ. ಗೆಳೆಯರೊಂದಿಗೆ ಗೆಳೆಯನಿಗಾಗಿ ಕಾವೇರಿಯನ್ನು ನೋಡಲು ಹೋದ ಸಂದರ್ಭದಲ್ಲಿ ಅನಂತರಾಯರೆಂಬುವವರ ಮಗಳು ಕುಮುದಾ ರತ್ನಾಕರನಿಗೆ ಮಾರು ಹೋಗುತ್ತಾಳೆ. ವೆಂಕಣ್ಣ ಕುಮುದಾಳನ್ನು ಮದುವೆಯಾಗಲು ಸಾಕಷ್ಟು ಪ್ರಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ. ಕುಮುದಾ ರತ್ನಾಕರನ ಹೋರಾಟವನ್ನು ಮೆಚ್ಚಿಕೊಂಡು ಅವನು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಅನೇಕ ಸಂದರ್ಭಗಳಲ್ಲಿ ಅವರ ಹೋರಾಟಕ್ಕೆ ಸಹಕರಿಸುತ್ತ ಅವನಿಗಾಗಿ ಕಾಯುತ್ತಾಳೆ.

ವೈದಿಕ ಕುಟುಂಬದಲ್ಲಿ ಹೆಣ್ಣುಮಗಳ ಮದುವೆಯಾಗುವದು ಎಷ್ಟೊಂದು ಸವಾಲಿನ ಸಂಗತಿಯಾಗಿತ್ತು ಎಂಬುದು ಈ ಕೃತಿಯ ಮುಖ್ಯ ಪ್ರಶ್ನೆ. ಕಾವೇರಿ ಸುಂದರಿಯಾಗಿದ್ದರೂ ಇಂಗ್ಲೀಷ್ ಬರುವದಿಲ್ಲ ಎಂಬ ಕಾರಣ ಅವಳ ಮದುವೆಗೆ ಅಡ್ಡಿಯಾಗುವುದು ಅಂದಿನ ಸಮಾಜದಲ್ಲಿ ಕಂಡುಬರುತ್ತಿದ್ದ ಟೊಳ್ಳು ಪ್ರತಿಷ್ಠೆ, ಆಡಂಬರಗಳನ್ನು ತಿಳಿಸುತ್ತದೆ. ಇಂಥ ಅನೇಕ ಸಾಮಾಜಿಕ ಗೊಂದಲಗಳನ್ನು, ವ್ಯಕ್ತಿಯ ಆಷಾಢಭೂತಿತನದ ವರ್ತನೆಗಳನ್ನು ಹಾಗೂ ಅದೇ ಪರಿಸರದಲ್ಲಿ ಮಾನವೀಯ ನೆಲೆಗೆ ಎಚ್ಚತ್ತುಕೊಳ್ಳುವ ರಾಷ್ಟ್ರೀಯ ಪ್ರಜ್ಞೆಯಿಂದ ಕೂಡಿ ತ್ಯಾಗಪೂರ್ಣ ಹೋರಾಟಕ್ಕೆ ಅಣಿಯಾಗುವ ಆದರ್ಶಮಯ ವ್ಯಕ್ತಿತ್ವಗಳಿಗೂ ಅವಕಾಶವಾಗುವ ವೈದೃಶ್ಯಮಯ ಪಾತ್ರಗಳನ್ನಿಲ್ಲಿ ಕಾಣಬಹುದಾಗಿದೆ.

ಆನಂದಕಂದರ ಕವಿ ವ್ಯಕ್ತಿತ್ವಕ್ಕೆ ಅವರ ಸಣ್ಣ ಕತೆ, ಕಾದಂಬರಿಗಳು ಸಾಮಾಜಿಕ, ರಾಷ್ಟ್ರೀಯ ಹಾಗೂ ಕನ್ನಡತನದ ಸಾಂಸ್ಕೃತಿಕ ಆಯಾಮಗಳನ್ನು ನೀಡಿ ಅದರಲ್ಲೊಬ್ಬ ವಾಸ್ತವವಾದಿ ಕಲಾವಿದನನ್ನು ಆವಿಷ್ಕಾರಗೊಳಿಸಿವೆ.

**೪. ಆನಂದಕಂದರ ನಾಟಕ–ರೂಪಕಗಳು :**

ಆನಂದಕಂದರ ಸೃಜನಾತ್ಮಕ ಸಾಹಿತ್ಯದ ಇನ್ನೊಂದು ಮುಖ್ಯ ಪ್ರಕಾರ ನಾಟಕ–ರೂಪಕಗಳು. ಇವು ರಂಗ ನಾಟಕಗಳಾಗಲಿ, ರಂಗರೂಪಕಗಳಾಗಲಿ ಆಗಿರದೆ ಆಕಾಶವಾಣಿಗಾಗಿ ರಚಿತಗೊಂಡ ಧ್ವನಿ ರೂಪಕಗಳು. ಇವುಗಳನ್ನು ತರಂಗ ರೂಪಕಗಳೆಂದೂ ಕರೆಯಲಾಗಿದೆ. ಇವು ಆಕಾಶವಾಣಿಯ ಆಯಾ ಸಂದರ್ಭದ ಅಗತ್ಯಕ್ಕನುಗುಣವಾಗಿ ರಚಿತವಾಗಿದ್ದರೂ ಆನಂದಕಂದರ ಸ್ವತಂತ್ರ ಕಲ್ಪನೆಗಳನ್ನ ವಲಂಬಿಸಿ ರಚನೆಗೊಂಡ ಪ್ರತಿಭಾ ಸೃಷ್ಟಿಗಳೇ ಆಗಿವೆ. ಇವುಗಳಿಂದ ಆನಂದಕಂದರಿಗೆ ಅಲ್ಪ ಸ್ವಲ್ಪ ಆರ್ಥಿಕ ಸಹಕಾರವೂ ಒದಗಿದಂತಿದೆ. ಹೆಂಡತಿಯ ಆಸ್ಪತ್ರೆಯ ಖರ್ಚಿಗಾಗಿ 'ಜಯಂತಿ'ಯ ಪ್ರಕಟಣೆಗಾಗಿ ಕೆಲವು ಸಂದರ್ಭಗಳಲ್ಲಿ ಸಹಾಯವಾದ ಪ್ರಸಂಗಗಳನ್ನು ಉಲ್ಲೇಖಿಸಲಾಗಿದೆ.

೧೯೫೦ ರಲ್ಲಿ ಧಾರವಾಡದಲ್ಲಿ ಆಕಾಶವಾಣಿ ಕೇಂದ್ರ ಆರಂಭಗೊಂಡಿತು. ಆವಾಗಿನಿಂದಲೂ ಆನಂದಕಂದರು ನಿರಂತರವಾಗಿ ನಿಯಮಿತವಾಗಿ ಈ ರೂಪಕಗಳನ್ನು ರಚಿಸಿದರು. ಅವರು ಒಟ್ಟು ೫೪ ತರಂಗ ರೂಪಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ೨೭ ರೂಪಕಗಳು ಪುಸ್ತಕ ರೂಪದಲ್ಲಿ ಸಂಗ್ರಹಿಸಲ್ಪಟ್ಟಿವೆ. ಉಳಿದವುಗಳು ಅಪ್ರಕಟಿವಾಗಿಯೇ ಉಳಿದಿವೆ. ೧೯೯೮ರಲ್ಲಿ 'ಅಪ್ರಕಟಿತ ರೂಪಕಗಳು' ಎಂಬ ಹೆಸರಿನಲ್ಲಿ ಆಯ್ದ ಹತ್ತು ರೂಪಕಗಳು ಪ್ರಕಟಗೊಂಡಿವೆ.

ನಾಟಕದಲ್ಲಿ ಭಾಗವಹಿಸುವ ಅಭ್ಯಾಸ ಅವರಿಗೆ ಬಾಲ್ಯದಲ್ಲಿಯೇ ಇತ್ತು. ನಾಟಕ

ಬರೆಯುವ ಪ್ರಯತ್ನವನ್ನು ಅವರು ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಮಾಡಿದ್ದಾರೆ. ಆ ಕುರಿತು ಆನಂದಕಂದರ ನೆನಪುಗಳು ಹೀಗಿವೆ. "ಸದ್ಬೋಧಚಂದ್ರಿಕೆ"ಯಲ್ಲಿ ಆಗ 'ಪಿತೃಭಕ್ತಿ' ಎಂಬ ರಾಜಸ್ತಾನದ ಕಥೆಯೊಂದು ಪ್ರಕಟವಾಗಿದ್ದಿತು. ಅದನ್ನು ಓದಿದ ಮೇಲೆ ನಾವೂ ನಾಟಕ ಬರೆಯಬೇಕೆಂದು ನಾನು ಮತ್ತು ನನ್ನ ಅಣ್ಣ ಬಲರಾಮ ಇಬ್ಬರೂ ಸೇರಿಕೊಂಡು ಒಂದು ಸಂಗೀತ ನಾಟಕವನ್ನು ಬರೆದೆವು. ಅದು ಸಮಗ್ರ ಸಂಗೀತ ನಾಟಕ. ಏಳೆಂಟು ಮಾತುಗಳಾದ ನಂತರ ಒಂದು ಹಾಡು ಬರಲೇಬೇಕು. ಆ ಹಾಡುಗಳನ್ನು ನಾವೇ ರಚಿಸಿದೆವು. ಆಗ ಪ್ರಚಾರದಲ್ಲಿದ್ದ ಶಿರಹಟ್ಟಿ ನಾಟಕ, ಕೊಣ್ಣೂರು ನಾಟಕ, ಕೊಪ್ಪಳ ನಾಟಕ ಇತ್ಯಾದಿ ಕಂಪನಿಗಳವರು ಹಾಡುತ್ತಿದ್ದ ಹಾಡುಗಳ ಧಾಟಿಗಳನ್ನೇ ನಾವು ತೆಗೆದುಕೊಂಡಿದ್ದೆವು."[೩೩] ಹೀಗೆ ನಾಟಕ ರಚನೆಯ ಸಹಜ ಪ್ರಯತ್ನವನ್ನು ಆನಂದಕಂದರು ಬಾಲ್ಯದಲ್ಲಿಯೆ ಮಾಡಿರುವುದು ಸ್ಪಷ್ಟವಿದೆ.

ಆಕಾಶವಾಣಿ ಕೇಂದ್ರ, ಧಾರವಾಡಕ್ಕೆ ಬರಬೇಕೆಂಬ ಒತ್ತಾಯದ ಬೇಡಿಕೆಯನ್ನು ಆನಂದಕಂದರು ೧೯೪೮ ರಲ್ಲಿಯೇ ಜಯಂತಿಯಲ್ಲಿ ಲೇಖನದ ಮೂಲಕ ಮಂಡಿಸಿದ್ದರು. ಆಕಾಶವಾಣಿಗಾಗಿ ರೂಪಕಗಳನ್ನು ಸ್ವತಃ ಬರೆಯಲು ಆರಂಭಿಸುವ ಪೂರ್ವದಲ್ಲಿ ಆನಂದಕಂದರಿಗೆ ಆ ಕುರಿತು ಸಾಕಷ್ಟು ಅಧ್ಯಯನ ಚಿಂತನಗಳಿದ್ದವು. ಮುಂಬೈ ಆಕಾಶವಾಣಿಗಾಗಿ ಶ್ರೀ ಗೌರೀಶ ಕಾಯ್ಕಿಣಿಯವರು ಬರೆದ 'ದೀಪಾವಳಿ' ಎಂಬ ರೂಪಕವನ್ನು ೧೯೪೮ ರಲ್ಲಿಯೇ ಜಯಂತಿಯಲ್ಲಿ ಆನಂದಕಂದರು ಪ್ರಕಟಿಸಿದ್ದೂ ಅಲ್ಲದೆ ಆ ಕುರಿತು ಒಂದು ಟಿಪ್ಪಣಿಯನ್ನು ಪ್ರತ್ಯೇಕವಾಗಿ ಬರೆದಿಟ್ಟುಕೊಂಡಿದ್ದರು. ರಂಗಭೂಮಿಯ ಮೇಲೆ ಆಡುವ ಕಥಾನಕ ನಾಟಕಗಳಿಗಿಂತ ಆಕಾಶವಾಣಿ ನಾಟಕಗಳನ್ನು ಬರೆಯುವ ರೀತಿ ಬೇರೆಯಾಗಿರುವುದು. ಇಲ್ಲಿ ಹಿನ್ನೆಲೆಯನ್ನು ಬೇರೆ ಬೇರೆ ಧ್ವನಿಗಳ ಮೂಲಕ ಸೂಚಿಸಬೇಕಾಗುವುದು. ಭಾವಾನುಗುಣವಾದ ಮಾತಿನ ಏರಿಳಿತಗಳ ಕಡೆಗೆ ತುಂಬ ಲಕ್ಷ್ಯ ಕೊಡಬೇಕಾಗುವುದು."[೩೪]

ಆನಂದಕಂದರ ಪ್ರಕಟಿತ ರೂಪಕಗಳ ಸಂಗ್ರಹಗಳು ಕೆಳಗಿನಂತಿವೆ.

೧. ಬೆಳವಡಿ ಮಲ್ಲಮ್ಮ (೧೯೫೧)

೨. ಬೆಂದ ಹೃದಯ (೧೯೫೪)

---

೩೩. ನನ್ನ ನೆನಪುಗಳು–ಆನಂದಕಂದ ಪು. ೯೫

೩೪. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೩೭೫

೩. ಮುಂಡರಿಗೆಯ ಗಂಡುಗಲಿ (೧೯೬೨)

೪. ಪಂಚಗಂಗಾ (೧೯೬೩)

೫. ಆನಂದಕಂದರ ಅಪ್ರಕಟಿತ ಬಾನುಲಿ ರೂಪಗಳು (೧೯೯೮)

ಇಲ್ಲಿ ಹಲವಾರು ರೂಪಕಗಳು 'ಜಯಂತಿ', 'ಕರ್ಮವೀರ', 'ಶೃಂಗಾರ' ಪತ್ರಿಕೆಗಳಲ್ಲಿ ಆಗಾಗ ಪ್ರಕಟಗೊಂಡದ್ದಿದೆ. ಗೀತರೂಪಕಗಳು ಹಾಗೂ ತರಂಗರೂಪಕಗಳು ಎಂದೂ ಈ ರಚನೆಗಳನ್ನು ವಿಂಗಡಿಸಲಾಗಿದೆ.

'ಬೆಳವಡಿ ಮಲ್ಲಮ್ಮ' (೧೯೫೧) ಈ ಸಂಗ್ರಹದಲ್ಲಿ ೬ ರೂಪಕಗಳಿವೆ. ಮೊದಲನೆಯದು 'ಬೆಳವಡಿ ಮಲ್ಲಮ್ಮ'. ಮಲ್ಲಮ್ಮನ ವೀರವ್ಯಕ್ತಿತ್ವ, ಶಿವಾಜಿಯ ಪರನಾರಿ ಸೋದರತ್ವ ಇಲ್ಲಿ ವ್ಯಕ್ತವಾಗಿದ್ದು ಚರಿತ್ರೆಯ ಸಂಗತಿಯೊಂದು ಇಲ್ಲಿ ಎರಡು ಭಾಷಾಸಮುದಾಯಗಳ ನಡುವೆ ಸಾಮರಸ್ಯ ಮೂಡಿಸುವ ಬಾಂಧವ್ಯದ ಸ್ವರೂಪ ಪಡೆದಿದೆ. ಎರಡನೆಯ ರೂಪಕ 'ನವರಾತ್ರಿ'ಯಲ್ಲಿ ವಿಜಯನಗರ ಸಾಮ್ರಾಜ್ಯದ ವೈಭವದ ಹಿನ್ನೆಲೆಯಲ್ಲಿ ಮೂಡಿಬಂದ ನಾಡಹಬ್ಬದ ಆಚರಣೆ ಕನ್ನಡಿಗರಿಗೆ ಸ್ಫೂರ್ತಿದಾಯಕವೆನಿಸುವಂತಿದೆ. ಮೂರನೆಯ ರೂಪಕ 'ಬಲಿಚಕ್ರವರ್ತಿ' ಪೌರಾಣಿಕ ಹಿನ್ನೆಲೆಯಲ್ಲಿ ರಚನೆಗೊಂಡ ಕಲಾತ್ಮಕವಾಗಿ ಅತ್ಯಂತ ಯಶಸ್ವಿ ಎನಿಸುವ, ಸೊಗಸಾದ ಹಾಡುಗಳಿಂದ ಕೂಡಿದೆ. ನಾಲ್ಕನೆಯ ರೂಪಕ 'ಅಮೃತಾತ್ಮ' ಸ್ವಾತಂತ್ರ್ಯೋತ್ತರದಲ್ಲಿ ಮೃತರಾದ ಗಾಂಧಿ, ಸರೋಜಿನಿ ನಾಯ್ಡು, ತೇಜಬಹಾದ್ದೂರ, ಸರದಾರ ಪಟೇಲ, ರಮಣರು ಹಾಗೂ ಅರವಿಂದರು ಮೊದಲಾದ ಮಹನೀಯರ ವಿಯೋಗ ಭಾರತೀಯರಿಗೆ ಬಹುದೊಡ್ಡ ಆಘಾತವನ್ನುಂಟು ಮಾಡಿತೆಂಬ ಭಾವ ಇಲ್ಲಿ ಸ್ಥಾಯಿಯಾಗಿದೆ. ಐದನೆಯದಾದ 'ತಂಬಿಟ್ಟು' ನಾಗಪಂಚಮಿಯ ಹಿನ್ನೆಲೆಯಲ್ಲಿ ಸೋದರ ವಾತ್ಸಲ್ಯದಂತಹ ಮೌಲ್ಯಗಳನ್ನು ಜನಮನದಲ್ಲಿ ಬಿತ್ತುವ, ಬಿಂಬಿಸುವ ಗುರಿಯನ್ನು ಹೊಂದಿದೆ. ಮಕ್ಕಳಿಗೂ ಈ ಹಬ್ಬ ಸಂಭ್ರಮದಾಯಕ ಎಂಬುದಕ್ಕೂ ಇಲ್ಲಿ ಒತ್ತು ಬಿದ್ದಿದೆ. 'ನಾನೇನಾಗುವೆ?' ಎಂಬ ಕೊನೆಯ ರೂಪಕ ಮಕ್ಕಳ ಮನಸ್ಸನ್ನು ರೂಪಿಸುವ ಆಶಯವನ್ನು ಹೊಂದಿದೆ.

'ಬೆಂದ ಹೃದಯ' (೧೯೫೪) ದಲ್ಲಿ ಐದು ರೂಪಕಗಳಿದ್ದು, ಇಲ್ಲಿ ಆನಂದಕಂದರು ಸಾಮಾಜಿಕ ವಸ್ತು ವಿಷಯಗಳನ್ನು ಎತ್ತಿಕೊಂಡು ಬರೆದಿರುವ ಬೆಂದಹೃದಯ, ಕಾಣದ ಕೈ ಹೆಚ್ಚು ಪರಿಣಾಮಕಾರಿ ಎನಿಸುತ್ತವೆ. ಶಿವಭಕ್ತ ನಂದಾನಾರ್ ಎಂಬ ರೂಪಕ ಅಸ್ಪೃಶ್ಯತೆಯನ್ನು ಆಚರಿಸುವವರ ಟೊಳ್ಳುತನವನ್ನು ಹಾಗೂ ಭಕ್ತಿಗೆ ಆ ಕಟ್ಟಳೆಯಿಲ್ಲವೆಂಬ ಆಧ್ಯಾತ್ಮಿಕ ವಾಸ್ತವವನ್ನು ಪ್ರತಿಪಾದಿಸುತ್ತದೆ.

'ಮುಂಡರಿಗೆಯ ಗಂಡುಗಲಿ' (೧೯೬೨) ಒಂದೇ ರೂಪಕವನ್ನು ಒಳಗೊಂಡ

ಪುಸ್ತಕ. ೧೮೫೭ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ದಿಟ್ಟವಾಗಿ ಹೋರಾಡಿ ತನ್ನೊಂದಿಗೆ ಕರ್ನಾಟಕದ ಹೆಸರನ್ನು ಚಿರಸ್ಥಾಯಿಯಾಗಿಸಿದ ಗಂಡುಗಲಿ ಭೀಮರಾಯನನ್ನು ಕುರಿತ ಈ ರೂಪಕ ಎಲ್ಲ ಕಾಲಕ್ಕೂ ರೋಮಾಂಚನವುಂಟುಮಾಡುವ ಸ್ಫೂರ್ತಿಯ ಸೆಲೆಯಾಗಿದೆ.

'ಪಂಚಗಂಗಾ' (೧೯೬೩) ಸಂಗ್ರಹದಲ್ಲಿ ಐದು ರೂಪಕಗಳಿದ್ದು ಹೆಳವನಕಟ್ಟೆ ಗಿರಿಯಮ್ಮ, ನಮ್ಮ ಭಾಗ್ಯ ದೊಡ್ಡದೊ, ನಿಮ್ಮ ಭಾಗ್ಯ ದೊಡ್ಡದೊ, (ಪುರಂದರದಾಸರ ಜೀವನ ಕುರಿತು) ಮಾದವ ಮಹಿಮಾದರ್ಶನ, ಶಂಕರಾಚಾರ್ಯ, ಸುದಾಮ – ಈ ಮೊದಲಾದ ಚರಿತ್ರೆ ಪುರಾಣಗಳ ಭಕ್ತಿ ಸಾಧನೆಯ ಸಂದರ್ಭಗಳ ಸುತ್ತ ಹೆಣೆಯಲಾದ ಕಥನಗಳು ಇಲ್ಲಿವೆ.

ಆನಂದಕಂದರ ಅಪ್ರಕಟಿತ 'ಬಾನುಲಿ ರೂಪಕಗಳು' (೧೯೯೮) ಸಾಕಷ್ಟು ತಡವಾಗಿ ಪ್ರಕಟಗೊಂಡಿದ್ದು, ಅವುಗಳಲ್ಲಿ ಹತ್ತು ರೂಪಕಗಳು ಮಾತ್ರ ಸಂಗ್ರಹಗೊಂಡಿವೆ. ಇನ್ನೂ ಒಟ್ಟು ಇಪ್ಪತ್ತೇಳು ರೂಪಕಗಳು ಪ್ರಕಟಗೊಳ್ಳಬೇಕಿದೆ. ಹೊಸ ಸಂಗ್ರಹದ ರೂಪಕಗಳಲ್ಲಿ 'ಅಶಾಂತಿ ಪರ್ವ' ಇದೇ ಹೆಸರಿನ ಕಾದಂಬರಿಯಲ್ಲಿ ಚಿತ್ರಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಒಂದು ಕಾಲಘಟ್ಟದ ಚಾರಿತ್ರಿಕ ಸಂಗತಿಯನ್ನು ಒಳಗೊಂಡಿದೆ. 'ಮಮತೆಯ ಮುಡಿಪು' ಗಾಂಧೀಜಿಯವರ ಅಸಹಕಾರ ಚಳುವಳಿ ಕರ್ನಾಟಕದ ಮೂಲೆಯಲ್ಲಿರುವ ಹಳ್ಳಿವೊಂದರಲ್ಲಿ ಉಂಟು ಮಾಡಿದ ಸಂಚಲನವನ್ನು ಕುರಿತದ್ದಾಗಿದೆ. 'ಅರಳಿದ ಜೀವ' ಬರಗಾಲದ ಸನ್ನಿವೇಶವೊಂದರಲ್ಲಿ ತನ್ನದೆಲ್ಲವನ್ನೂ ಹಂಚಿ ಔದಾರ್ಯ ಮೆರೆಯುವ ಜೀವವೊಂದರ ಸುತ್ತ ಹೆಣೆಯಲಾದ ವಸ್ತುವನ್ನೊಳಗೊಂಡಿದೆ. ಭಾರತದ ಸ್ವಾತಂತ್ರ್ಯ ಸಂಧಿ–ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ದುರವಸ್ಥೆಗಳನ್ನು ಜಯಿಸಬಹುದಾದ ಆಶಾವಾದಿ ಮನೋಭಾವದ ಸೂಚನೆಗಳನ್ನು ಈ ರೂಪಕ ಒಳಗೊಂಡಿದೆ. 'ಸರ್ವೋದಯ', 'ಭಾಷಾ ಭಾರತಿ' ರೂಪಕಗಳಲ್ಲಿ ಭಾರತ ಮುನ್ನಡೆಯಬೇಕಾದ ಆದರ್ಶ ಕನಸು ವಾಸ್ತವಗಳ ನೆಲೆಗಳನ್ನು ಗಾಂಧಿ ವಿನೋಭಾರಂಥವರ ಚಿಂತನೆಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳುವ ಪ್ರಯತ್ನವಿದೆ. ತ್ರಿವೇಣಿ ಸಂಗದಲ್ಲಿ ಪುರಂದರದಾಸರ ಕೀರ್ತನೆಗಳ ಮೂಲಕ ಅವರ ಬದುಕನ್ನು ರೂಪಿಸಿದ ಮೌಲ್ಯಗಳ ವಿಶ್ಲೇಷಣೆಯಿದೆ. 'ಊರ್ಮಿಳೆ'ಯಲ್ಲಿ ಉಪೇಕ್ಷಿತ ಪೌರಾಣಿಕ ಪಾತ್ರವೊಂದರ ಮೌನದಲ್ಲಿ ಅಡಕವಾದ ನೋವು ಯಾತನೆಗಳ ಶ್ರುತಿಯನ್ನು ಶೋಧಿಸುವ ಯತ್ನವಿದೆ. ಶ್ರೀ ಗಣೇಶ ಲೀಲಾವಿಲಾಸ ಹಾಗೂ ವೇಣುನಾದ ರೂಪಕಗಳು ಸಂಗೀತ ಪ್ರಧಾನವಾಗಿದ್ದು ಹಾಸ್ಯ ವಿಡಂಬನೆಗಳ ಸಂಚಾರಿ ನೆಲೆಗಳ ಮೂಲಕ ಪ್ರಸಂಗಗಳ ಪರಿಣಾಮಕಾರತೆಯನ್ನು ಸಾಧಿಸಲು ಯತ್ನಿಸಲಾಗಿದೆ.

ಉಳಿದ ರೂಪಕಗಳು ಪ್ರಕಟಗೊಳ್ಳಬೇಕಾದ ಅಗತ್ಯವಿದ್ದು, ಸಮಗ್ರ ಅಧ್ಯಯನಕ್ಕೆ ಅವು ಸಹಕಾರಿಯಾಗಬಲ್ಲವು. ಕನ್ನಡ ರೂಪಕಗಳ ಪರಂಪರೆಯಲ್ಲಿ ಆನಂದಕಂದರಿಗೆ ವಿಶೇಷ ಸ್ಥಾನವಿದ್ದು ಅದನ್ನು ನಾಡಿನ ಜನರ ಗಮನಕ್ಕೆ ತರುವ ಕೆಲಸ ಇನ್ನಷ್ಟು ನಡೆಯಬೇಕಿದೆ.

■

## ೩. ಆನಂದಕಂದರ ಸೃಜನೇತರ ಸಾಹಿತ್ಯ :

ಆನಂದಕಂದರು ಸೃಜನಶೀಲ ನೆಲೆಗಳಲ್ಲಿ ಸಾಧಿಸಿರುವ ಆಳ ವಿಸ್ತಾರಗಳನ್ನೆ ಸೃಜನೇತರ ಪ್ರಕಾರಗಳಲ್ಲೂ ಸಾಧಿಸಿರುವುದು ಗಮನಾರ್ಹ ಸಂಗತಿ. ಏಕ ಕಾಲಕ್ಕೆ ಅನೇಕ ಮುಖಗಳಲ್ಲಿ ತೊಡಗಿಸಿಕೊಂಡು ಸಮಾನ ಪ್ರಮಾಣದ ಯಶಸ್ಸನ್ನು ಸಾಧಿಸಿರುವುದರ ಹಿಂದೆ ಆನಂದಕಂದರ ಉತ್ಕಟವಾದ ಜೀವನ ಪ್ರೀತಿಯಿದೆ. ಕೆಳಗೆ ನಮೂದಿಸಲಾದ ಸೃಜನೇತರ ಪ್ರಕಾರಗಳಲ್ಲಿ ಆನಂದಕಂದರು ಕೃಷಿ ಮಾಡಿದ್ದು ಅವರ ಕ್ರಿಯಾಶೀಲತೆಯ ವ್ಯಾಪ್ತಿಗೆ ನಿದರ್ಶನವಾಗಿವೆ.

೧) ವಿಮರ್ಶೆ–ಸಂಶೋಧನೆ–ಸಂಸ್ಕೃತಿ

ಅ. ಕರ್ನಾಟಕದ ಜನಜೀವನ (೧೯೩೯)

ಆ. ಸಾಹಿತ್ಯವು ಸಾಗಿರುವ ದಾರಿ (೧೯೬೧)

ಇ. ನಮ್ಮ ಸಂಸ್ಕೃತಿ ಪರಂಪರೆ (೧೯೬೯)

ಈ. ಸಾಹಿತ್ಯ ವಿಹಾರ (೧೯೮೧)

೨) ಚರಿತ್ರೆ

ಅ. ಕನ್ನಡ ರಾಜ್ಯ ರಮಾರಮಣ

೩) ಜಾನಪದ ಸಾಹಿತ್ಯ

ಅ. ಬೀಸುಕಲ್ಲಿನ ಹಾಡುಗಳು (೧೯೨೮)

ಆ. ಕನ್ನಡ ಜಾನಪದ ಸಾಹಿತ್ಯ (೧೯೭೬)

ಇ. ಅಧ್ಯಕ್ಷ ಭಾಷಣ (೧೯೭೧) (ನಾಗಮಂಗಲ ಜನಪದ ಸಾಹಿತ್ಯ ಸಮ್ಮೇಳನ)

೪) ಸಂಪಾದಿತ ಕೃತಿಗಳು

ಅ. ಮೃಚ್ಛಕಟಿಕ (೧೯೬೧)

ಆ. ಪೂಜಾತತ್ವ (೧೯೬೪)

ಇ. ಆರ್ತಭಾವ (೧೯೬೪)

ಈ. ಮಹಾತ್ಮ್ಯಜ್ಞಾನ (೧೯೬೫)

ಉ ಕೃಷ್ಣಲೀಲಾ (೧೯೬೫)

ಊ. ಲೋಕನೀತಿ (೧೯೬೫)

ಋ. ಸಂಕೀರ್ಣ (೧೯೬೫)

ಋೂ. ಕನಕದಾಸರ ಭಕ್ತಿ ಗೀತೆಗಳು (೧೯೬೫)

ಎ. ಅಕ್ರೂರ ಚರಿತ್ರ (೧೯೬೯)

ಏ. ಪ್ರಸನ್ನ ವೆಂಕಟದಾಸರ ಭಾಗವತ (೧೯೬೯)

ಐ. ಹರಿದಾಸ ಭಕ್ತಿಸಾಧನೆ (೧೯೬೯)

೫) ಅನುವಾದ

ಅ. ಮಧ್ಯಮ ವ್ಯಾಯೋಗ

೬) ಮಕ್ಕಳ ಸಾಹಿತ್ಯ

ಅ. ಬಸವಣ್ಣನವರು (೧೯೨೭)

ಆ. ಭೀಷ್ಮ (೧೯೬೨)

ಇ. ಲವ ಕುಶ (೧೯೬೨)

ಈ. ಚಂದ್ರಹಾಸ (೧೯೬೭)

೭) ಆತ್ಮ ಕಥೆ

ಅ. ನನ್ನ ನೆನಪುಗಳು (೧೯೯೯)

ಈ ಕೃತಿಗಳ ಪಟ್ಟಿ ನೋಡಿದರೆ ಆನಂದಕಂದರ ಶ್ರಮ, ಶ್ರದ್ಧೆ, ನೋವುಗಳ ಅರಿವಾಗುತ್ತದೆ. ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಯಾವುದೇ ಸ್ವಾರ್ಥ ನಿರೀಕ್ಷೆಗಳಿಲ್ಲದೆ ಕೇವಲ ನಾಡು, ನುಡಿ, ಸಂಸ್ಕೃತಿ ಮಾನವತೆಗಳ ಗುರಿಯನ್ನಿಟ್ಟುಕೊಂಡು ಇಷ್ಟೊಂದು ಕಾರ್ಯ ಸಾಧಿಸುವುದು ಸಾಮಾನ್ಯವಾದುದಲ್ಲ. ಬಡತನದ ದುರ್ಭರ ಸ್ಥಿತಿಯನ್ನು ತನ್ನ ಹಾಗೂ ಧರ್ಮಪತ್ನಿಯ ಅನಾರೋಗ್ಯದ ಸಂದರ್ಭಗಳನ್ನು ನಿರ್ಲಕ್ಷಿಸಿ ಇಂಥ ಸಾಧನೆಗೈಯ್ದಿರುವುದು ಕನ್ನಡರಿಗರ ಕೃತಜ್ಞೆಗೆ ಪಾತ್ರವಾಗುವಂತಹದು. ಆದರೆ ಪ್ರತಿಯಾಗಿ ನಾಡು ಅವರಿಗೆ ನೀಡಿದ್ದೇನು?

ಕನಿಷ್ಠ ಅವರ ಸಮಗ್ರ ಕೃತಿಗಳು ಕನ್ನಡಿಗರಿಗೆ ಸಿಗುವಂತೆ ಮಾಡಲು ಸಾಧ್ಯವಾಗಿಲ್ಲ. ಇನ್ನು ಸಮಗ್ರ ಅಧ್ಯಯನ ನಮ್ಮ ಕಲ್ಪನೆಗೆ ಮೀರಿದ್ದು. ಆದರೆ ಅವರ ಕೃತಿಗಳ ಸ್ಥೂಲ ಪರಿಚಯವನ್ನಾದರೂ ಮಾಡಿಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

೧. **ವಿಮರ್ಶೆ, ಸಂಶೋಧನೆ, ಸಂಸ್ಕೃತಿ :** ಈ ಕುರಿತಾಗಿ ಆನಂದಕಂದರು ನಾಲ್ಕು ಕೃತಿಗಳನ್ನು ರಚಿಸಿದ್ದು, 'ಕರ್ನಾಟಕ ಜನಜೀವನ' ಅವುಗಳಲ್ಲಿ ಮೊದಲನೆಯದು. ಕನ್ನಡಿಗರ ಕೋಟೆ ಕಾಳಗ, ಕನಕದಾಸರು ಕಂಡ ವಿಜಯನಗರ, ಚಾರಣ ಕವಿ ಗೋವಿಂದ ವೈದ್ಯ ಎಂಬ ಮೂರು ದೀರ್ಘ ಪ್ರಬಂಧಗಳು ಇಲ್ಲಿವೆ. ಮಾನವನ ಚರಿತ್ರೆಯೆಂದರೆ ಯುದ್ಧಗಳ ಚರಿತ್ರೆಯೆಂಬಷ್ಟು ಯುದ್ಧಗಳು ಮನುಷ್ಯನ ಬದುಕಿನೊಂದಿಗೆ ಹಾಸುಹೊಕ್ಕಾಗಿವೆ. ಈ ಹಿನ್ನೆಲೆಯಲ್ಲಿ ಕೋಟೆಕೊತ್ತಲಗಳು ಒಂದು ಕಾಲದ ಮನುಷ್ಯ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಅವುಗಳ ಸುತ್ತ ಜನರಲ್ಲಿದ್ದ ಕಟ್ಟುಕತೆಗಳನ್ನು ವಾಸ್ತವ ದೃಷ್ಟಿಯಿಂದ ಶೋಧಿಸಿ ನೋಡುವ ಪ್ರಯತ್ನವನ್ನು ಬೆಟಗೇರಿಯವರು ನಡೆಸಿದ್ದಾರೆ. ಹಳಗನ್ನಡ ಕಾವ್ಯಗಳಲ್ಲಿ ಪ್ರಸ್ತಾಪಿಸಲ್ಪಟ್ಟ ಕೋಟೆ ಕೊತ್ತಲಗಳ ವರ್ಣನೆಯನ್ನು ಆಧಾರವಾಗಿಟ್ಟುಕೊಂಡು ಈ ವಿಶ್ಲೇಷಣೆಗೆ ಅಧಿಕೃತತೆ ಹಾಗೂ ರೋಚಕತೆಗಳನ್ನು ತಂದಿದ್ದಾರೆ.

ಎರಡನೆಯ ಪ್ರಬಂಧ 'ಕನಕದಾಸರು ಕಂಡ ವಿಜಯನಗರ' ವಿಶೇಷ ಮಹತ್ವ ಪಡೆಯುವದು. ಕನಕದಾಸರು ಚಾರಿತ್ರಿಕ ಸಂದರ್ಭವೊಂದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ಆ ಕಾಲದ ರಾಜಕೀಯ, ಸಾಮಾಜಿಕ ಜೀವನಗಳ ಸ್ಪಷ್ಟ ಚಿತ್ರಣವನ್ನು ನೀಡುವುದರಿಂದ ಕೀರ್ತನಕಾರ, ಕವಿಯಾಗಿದ್ದ ಕನಕದಾಸರು ತಮ್ಮ 'ಮೋಹನ ತರಂಗಿಣಿ' ಕಾವ್ಯದಲ್ಲಿ ಕೃಷ್ಣದೇವರಾಯನನ್ನು ಕೃಷ್ಣನಿಗೆ ಹೋಲಿಸಿ ವರ್ಣಿಸಿರುವುದು ಮತ್ತು ವಿಜಯನಗರದ ಆ ಕಾಲದ ವೈಭವದ ನೆಲೆಗಳನ್ನು ದಾಖಲಿಸಿರುವುದು ಅದಕ್ಕೆ ಚಾರಿತ್ರಿಕ ಮಹತ್ವ ಒದಗಿಸಿದೆ. ಆದರೆ ಹಾಡುಗಬ್ಬವಾದ ಸಾಂಗತ್ಯದಲ್ಲಿ ಈ ಕೃತಿ ರಚನೆಯಾಗಿದ್ದು ಸಾಂಪ್ರದಾಯಿಕ ಪಂಡಿತರ ಅವಗಣನೆಗೆ ಇದು ಗುರಿಯಾಗಿದೆ ಎಂದು ಆನಂದಕಂದರು ವಿಷಾದಿಸುತ್ತಾರೆ.

ಮೂರನೆಯದಾದ ಚಾರಣ ಕವಿ ಗೋವಿಂದ ವೈದ್ಯ ಮುನ್ನೂರು ವರ್ಷಗಳ ಹಿಂದಿನ ಕರ್ನಾಟಕ ಎಂಬ ಹೆಸರಿನ ಲೇಖನದಲ್ಲಿ ಗೋವಿಂದ ವೈದ್ಯನಿಂದ ರಚನೆಗೊಂಡ 'ಕಂಠೀರವ ನರಸರಾಜ ವಿಜಯ' ಕಾವ್ಯದಲ್ಲಿ ವರ್ಣಿತವಾದ ಯುದ್ಧದ ವಾಸ್ತವ ಚಿತ್ರಗಳು ಇವನನ್ನು ಮೊದಲ ಚಾರಣ ಕವಿ ಎಂದು ಗುರುತಿಸಲು ಕಾರಣವಾಗಿದೆ. ಪ್ರತಿಯೊಂದು ಯುದ್ಧದಲ್ಲಿ ಕನ್ನಡ ದೊರೆಗಳು ಜಯಿಸಿರುವುದನ್ನು ರಾಜಸ್ಥಾನಿ ಹಾಗೂ ಮರಾಠಿ ಐತಿಹಾಸಿಕ ವೀರಪ್ರಸಂಗಳಿಗೆ ಹೋಲಿಸಿ ವಿವರಿಸಿರುವುದು ಆನಂದಕಂದರ ವೈಶಿಷ್ಟ್ಯ. ರಣದುಲ್ಲಾಖಾನ ಮತ್ತು ಮುಸ್ತಾ

ಘಖಾನರನ್ನು ಸೋಲಿಸಿ ಓಡಿಸಿದ ಸಂದರ್ಭಗಳನ್ನು ಗೋವಿಂದ ವೈದ್ಯ ಕಣ್ಣಾರೆ ಕಂಡಿದ್ದರಿಂದ ಕನ್ನಡಿಗರ ನಾಡಿನ ಅಭಿಮಾನ ಹಾಗೂ ಮುಸಲ್ಮಾನರ ಹಾವಳಿಯ ಭೀಕರತೆಯನ್ನು ವಸ್ತುನಿಷ್ಠವಾಗಿ ವರ್ಣಿಸಲು ಸಾಧ್ಯವಾಗಿದೆ.

ನಮ್ಮ ಸಾಹಿತ್ಯ ಸಾಗಿರುವ ದಾರಿ ಪುಸ್ತಕದಲ್ಲಿ ಹನ್ನೆರಡು ಲೇಖನಗಳಿದ್ದು, ಎಂಟು ಲೇಖನಗಳು ಸಮಕಾಲೀನ ಕನ್ನಡ ಸಾಹಿತ್ಯದ ವಿವಿಧ ಮಗ್ಗಲುಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದಕ್ಕೆ ಮೀಸಲಾಗಿದ್ದರೆ ನಾಲ್ಕು ಲೇಖನಗಳು ಜನಪದ ಸಾಹಿತ್ಯ ಕುರಿತು ಬರೆಯಲ್ಪಟ್ಟಿವೆ.

'ನಮ್ಮ ಸಾಹಿತ್ಯ ಸಾಗಿ ಬಂದಿರುವ ದಾರಿ' ಎಂಬ ಮೊದಲ ಲೇಖನದಲ್ಲಿ ಆಧುನಿಕ ಪ್ರಭಾವಗಳಿಂದ ಓದುಗರ ಅಭಿರುಚಿಯಲ್ಲಿ ಉಂಟಾಗುತ್ತಿರುವ ಬದಲಾವಣೆಯಾದಿಯಾಗಿ ಸಾಂಸ್ಕೃತಿಕ ಮಹತ್ವಕ್ಕಿಂತ ಕ್ಷಣಿಕ ಮನರಂಜನೆಗೆ ಒತ್ತು ಬೀಳುತ್ತಿರುವುದರ ಕುರಿತು ವಿಷಾದವಿದೆ. ನಮ್ಮ ಸಾಹಿತ್ಯದ ನಿರಾಶಾವಾದಿ ಮನೋಭಾವದ ಕುರಿತು ಅಸಮಾಧಾನವನ್ನು ಆನಂದಕಂದರು ಆರಂಭದಲ್ಲಿಯೇ ಹೊಂದಿದ್ದರೆಂಬ ಸಂಗತಿ ಕುತೂಹಲಕಾರಿ. 'ಸಾಹಿತ್ಯ ವಿಮರ್ಶೆ', 'ಜೀವನ ಸಾಗರ' 'ಮಂಥನ' ಲೇಖನಗಳಲ್ಲಿ ವಿಮರ್ಶೆಯ ಸ್ವರೂಪ ಹಾಗೂ ವಿಮರ್ಶೆಗೆ ಸತ್ಯ ಶೋಧನೆಯೇ ಗುರಿಯಾಗಿರಬೇಕೆಂಬ ಆಶಯಕ್ಕೆ ಒತ್ತುಬಿದ್ದಿದೆ. ಸಾಹಿತ್ಯದಲ್ಲಿ ಅಶ್ಲೀಲತೆ ಹಾಗೂ ಪ್ರಣಯ ಸಾಹಿತ್ಯ ಎಂಬ ಲೇಖನಗಳಲ್ಲಿ ಒಂದು ಕಾಲಕ್ಕೆ ಅ.ನ.ಕೃ. ಆದಿಯಾಗಿ ಮಹತ್ವದ ಲೇಖಕರು ನಡೆಸುತ್ತಿದ್ದ ಬಹುಚರ್ಚಿತ ಸಂಗತಿಗಳ ಕುರಿತು ಆನಂದಕಂದರ ಸ್ವತಂತ್ರ ದೃಷ್ಟಿಯ ನಿಷ್ಠುರ ಅಭಿಪ್ರಾಯಗಳನ್ನು ಕಾಣಬಹುದು. ಪ್ರಣಯ ಸನ್ನಿವೇಶಗಳ ಚಿತ್ರಣ ಅಶ್ಲೀಲತೆಗೆ ತಿರುಗಿಕೊಳ್ಳದ ಹಾಗೆ ವಹಿಸಬಹುದಾದ ಎಚ್ಚರವನ್ನು ಕನ್ನಡ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿ ವಿವರಿಸಿರುವುದು ಅನುಕರಣೀಯ ಸಂಗತಿ ಎನಿಸುತ್ತದೆ. ಕವನ ಸಾಹಿತ್ಯದ ನವನಿರ್ಮಾಣ ಎಂಬ ಲೇಖನದಲ್ಲಿ ನವ್ಯಕಾವ್ಯದ ಅರೆಕೊರೆಗಳನ್ನು ಸಾಮಾಜಿಕ ಜೀವನದಲ್ಲಿ ಕಾವ್ಯದ ಜವಾಬ್ದಾರಿ ಹಾಗೂ ಸಾಂಸ್ಕೃತಿಕ ನೆಲೆಗಳ ಅಳವಡಿಕೆಯಿಂದ ಒದಗುವ ಗಾಂಭೀರ್ಯಗಳ ಹಿನ್ನೆಲೆಯಲ್ಲಿ ನಿಷ್ಠುರವಾಗಿ ವಿವರಿಸಿರುವದು ಬೆಟಗೇರಿಯವರ ದೂರದರ್ಶಿತ್ವಕ್ಕೆ ಸಾಕ್ಷಿ. ಕಾದಂಬರಿಗಳಲ್ಲಿ ಪಾತ್ರಪರಿಪೋಷಣೆ, 'ಕನ್ನಡ ಸಣ್ಣ ಕತೆಗಳ ಕತೆ' ಎಂಬ ಲೇಖನಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಎರಡು ಮುಖ್ಯ ಪ್ರಕಾರಗಳ ಕುರಿತು ಆ ಸಂದರ್ಭದ ವಿವಿಧ ತಾತ್ವಿಕ ಸಂಘರ್ಷದ ಸೂಕ್ಷ್ಮ ಎಳೆಗಳನ್ನು ಆಧುನಿಕ ವಿಮರ್ಶಾ ಭೂಮಿಕೆಗಳನ್ನು ಒಳಗೊಂಡಂತೆ ಚರ್ಚಿಸಿರುವುದು ಆನಂದಕಂದರ ವ್ಯುತ್ಪತ್ತಿಯ ಪ್ರೌಢಿಮೆಯನ್ನು ಸೂಚಿಸುತ್ತದೆ.

'ಸಾಮಾನ್ಯರ ಸಾಹಿತ್ಯದ ಸ್ವರೂಪದರ್ಶನ', 'ಜಾನಪದ ವಿನೋದ', 'ವಿಲಾಸ',

'ಜಾನಪದ ಸುಖಸಂಕಥಾ ವಿನೋದ', 'ಕನ್ನಡ ಜನಪದ ಕಥಾವಾಹಿನಿ' – ಈ ಲೇಖನಗಳು ಜನಪದ ಸಾಹಿತ್ಯಕ್ಕೆ ಸಂಬಂಧಪಟ್ಟವುಗಳಾಗಿವೆ. ಜನಪದ ಸಾಹಿತ್ಯ ಅನಾಮಿಕವಾಗಿ ಬೆಳೆದು ಬಂದ ಬಗೆಯನ್ನು ಆ ಸಾಹಿತ್ಯದಲ್ಲಿ ಕಂಡುಬರುವ ಹಾಸ್ಯವಿಡಂಬನೆಗಳನ್ನು, ಒಗಟು ಪ್ರಕಾರ ಹೇಗೆ ಪ್ರೌಢ ಸಾಹಿತ್ಯದಲ್ಲಿ ಬೆಡಗು, ಮುಂಡಿಗೆ, ಪ್ರಶ್ನೋತ್ತರ ಪದ್ಯಗಳು ಬೆಳೆಯಲು ಕಾರಣವಾದವು ಎಂಬುದನ್ನು ಶೋಧನಾತ್ಮಕವಾಗಿ ವಿವರಿಸಲಾಗಿದೆ. ಜಾನಪದ ಕಥೆಗಳಲ್ಲಿ ಮಕ್ಕಳ ಕಥೆಗಳು, ಐತಿಹಾಸಿಕ ಕಥೆಗಳು, ಜೋಗಿ ಗೊಂದಲಿಗರ ಕಥೆಗಳು ಮೊದಲಾದ ವೈವಿಧ್ಯತೆಗಳನ್ನು ಕೊನೆಯ ಲೇಖನದಲ್ಲಿ ಗುರುತಿಸಲಾಗಿದೆ. ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನೆಲ್ಲ ಆನಂದಕಂದರು ಹೇಗೆ ಮೈಗೂಡಿಸಿಕೊಂಡಿದ್ದರು ಹಾಗೂ ಆತ್ಮಸಾತ್ ಮಾಡಿಕೊಂಡಿದ್ದರೆಂಬುದನ್ನು ಈ ಲೇಖನಗಳಲ್ಲಿ ಕಾಣಬಹುದಾಗಿದೆ.

'ನಮ್ಮ ಸಂಸ್ಕೃತಿ ಪರಂಪರೆ' ಆನಂದಕಂದರು ಭಾರತೀಯ ಸಾಂಸ್ಕೃತಿಕ ಪರಂಪರೆಯ ವಿಶಾಲ ಚೌಕಟ್ಟಿನಲ್ಲಿ ಕರ್ನಾಟಕ ಸಾಂಸ್ಕೃತಿಕ ಪರಂಪರೆಯನ್ನು ನಿರ್ವಚಿಸಿಕೊಳ್ಳಲು ನಡೆಸಿದ ಪ್ರೌಢ ಚಿಂತನೆಗಳ ಫಲವಾಗಿ ಮೂಡಿದ ವಿಶೇಷ ಕೃತಿ. ಈ ಕೃತಿಯನ್ನು ಕುರಿತು ಪ್ರೊ. ಜ್ಯೋತಿ ಹೊಸೂರ ಅವರ ಅಭಿಪ್ರಾಯ ಆ ಕೃತಿಯ ಮಹತ್ವವನ್ನು ವಿಷದೀಕರಿಸುತ್ತದೆ. "ಶಿಷ್ಟ ಮತ್ತು ಜಾನಪದ ಸಂಸ್ಕೃತಿಯ ಪದರು ಪದರುಗಳನ್ನು ಅಮೂಲಾಗ್ರವಾಗಿ ಅರಿತ ಡಾ. ಬೆಟಗೇರಿ ಕೃಷ್ಣಶರ್ಮ ಅವರು 'ನಮ್ಮ ಸಂಸ್ಕೃತಿ ಪರಂಪರೆ' ಗ್ರಂಥ ಬರೆದು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಭಾರತೀಯರ ಎಣಿಕೆಯ ಚಾಂದ್ರಮಾನ ಒಂದು ಸಂವತ್ಸರದ ಅವಧಿಯಲ್ಲಿಯ ವಿವಿಧ ಸಾಂಸ್ಕೃತಿಕ ಪರಂಪರೆ ನಡಾವಳಿ ಇತ್ಯಾದಿಗಳ ಕುರಿತು ವ್ಯವಸ್ಥಿತವಾಗಿ ಬರೆದ ಅಭ್ಯಾಸಪೂರ್ಣ ಪ್ರಬಂಧಗಳ ಸಂಕಲನವೇ 'ನಮ್ಮ ಸಂಸ್ಕೃತಿ ಪರಂಪರೆ'. ಅದು ಚೈತ್ರಮಾಸದಿಂದ ಮೊದಲುಮಾಡಿ ಫಾಲ್ಗುಣ ಮಾಸದವರೆಗಿನ ಹನ್ನೆರಡು ತಿಂಗಳುಗಳಲ್ಲಿಯ ಸಾಂಸ್ಕೃತಿಕ ಪ್ರವಾಹದ ವೈವಿಧ್ಯವನ್ನು ಚಿತ್ರಿಸುವ ಹನ್ನೆರಡು ಪ್ರಬಂಧಗಳ ಒಂದು ಕಟ್ಟು, ಈ ಗ್ರಂಥದ ಜೀವ ಜೀವಾಳ. ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆಯ ದೀಪಸ್ಥಂಭಗಳಂತಿರುವ 'ಕರ್ನಾಟಕದಲ್ಲಿ ವಸಂತೋತ್ಸವ', 'ಶಮೀ ಸಂಕೇತ' ಮತ್ತು 'ನಾಡಹಬ್ಬ' ಈ ಕುರಿತು ಮೂರು ಲೇಖನಗಳು ಈ ಗ್ರಂಥಕ್ಕೆ ವಿಶೇಷ ಕಳೆಯನ್ನು ತಂದುಕೊಟ್ಟಿವೆ. ಒಟ್ಟು ಹದಿನೈದು ಪ್ರಬಂಧಗಳು ಇಲ್ಲಿವೆ."[೩೫]

'ಸಾಹಿತ್ಯ ವಿಹಾರ' ಆನಂದಕಂದರು ಆಗಾಗ ಪತ್ರಿಕೆಗಳಿಗಾಗಿ ಬರೆದ ಇಪ್ಪತ್ತೆರಡು

೩೫. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು.

ಲೇಖನಗಳ ಸಂಗ್ರಹ. ನಾಲ್ಕು ವಿಹಾರಗಳಾಗಿ ಈ ಲೇಖನಗಳನ್ನು ವಿಂಗಡಿಸಲಾಗಿದೆ.

ಮೊದಲನೆಯ ವಿಹಾರದಲ್ಲಿ ಕನ್ನಡಿಗರ ಅಡಿಗೆ (ಸೂಪಶಾಸ್ತ್ರ) ಭಾರತೀಯರ ಹೂಗಳ ಪ್ರೀತಿ, ಕನ್ನಡ ನಾಡಿನ ಪುಷ್ಪ ವೈವಿಧ್ಯ, ಕನಕದಾಸರು ಚಿತ್ರಿಸಿದ ಜನಜೀವನ, ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯದ ಭಾಗವಾಗಿ ಆಲೂರ ವೆಂಕಟರಾಯರು ಮತ್ತು ಶಾಂತಕವಿಗಳು ಮೊದಲಾದವರ ಕುರಿತಾದ ಲೇಖನಗಳನ್ನೊಳಗೊಂಡಂತೆ ವೈವಿಧ್ಯಪೂರ್ಣ ವಿಷಯಗಳು ಪ್ರೌಢ ವಿಶ್ಲೇಷಣೆಗೆ ಒಳಗಾಗಿವೆ.

ಎರಡನೆಯ ವಿಹಾರದಲ್ಲಿ ಕವಿ ಕುಮಾರವ್ಯಾಸನ ಕಾಲ, ಚರಿತ್ರೆ, ಕನ್ನಡ ಭಾಗವತ ಕರ್ತೃವಿಚಾರ, ಪುರಂದರದಾಸರು ಮತ್ತು ಕನಕದಾಸರ ಕೀರ್ತನೆಗಳ ತುಲನಾತ್ಮಕ ಅಧ್ಯಯನ, ಜಗನ್ನಾಥದಾಸರ ಚರಿತ್ರೆ ಮತ್ತು ಕೃತಿಗಳು ಮ.ಪ್ರಪೂಜಾರವರ, ವಾಗ್ಭೂಷಣರ ಲೇಖನಗಳು ಹಾಗೂ ಇತರ ಕೊಡುಗೆಗಳು, ಗಳಗನಾಥರ ಕೃತಿಗಳು ಇವೇ ಮೊದಲಾದ ಅಪ್ಪಟ ಸಾಹಿತ್ಯ ಹಾಗೂ ಸಂಶೋಧನಾತ್ಮಕ ಲೇಖನಗಳು ಸೇರಿವೆ.

ಮೂರನೆಯ ವಿಹಾರದಲ್ಲಿ ಜಾನಪದಕ್ಕೆ ಸಂಬಂಧಪಟ್ಟ ಐದು ಪ್ರಬಂಧಗಳಿದ್ದು, ಜನಪದ ನಾಟಕ, ರಂಗಭೂಮಿ, ಲಾವಣಿಗಳಿಗೆ ಸಂಬಂಧಪಟ್ಟ ವಿಷಯಗಳ ಚರ್ಚೆ ಇದೆ. ಜನಪದ ನಾಟ್ಯಗೀತಗಳು, ಜನಪದ ಶಿಶು ಸಾಹಿತ್ಯಗಳನ್ನು ಒಳಗೊಂಡ ಸಂಗತಿಗಳೂ ಇಲ್ಲಿವೆ.

ನಾಲ್ಕನೆಯ ವಿಹಾರ ಸಂಸ್ಕೃತಿ ಸಂಚಯವೆನಿಸಿದ್ದು ಜನಪದ ಸಂಸ್ಕೃತಿಯ ಹಬ್ಬ ಹರಿದಿನಗಳ ಚರ್ಚೆಯಿದೆ. ಹಿಂದೂ ಮಹಿಳೆಯರ ಬಾಳನೋಟ, ಭಾರತೀಯ ತತ್ತ್ವವಿದುಷಿಯರು, ಪಂಚಾಣುವ್ರತಗಳು ಮೊದಲಾದ ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳೂ ಇಲ್ಲಿ ಸ್ಥಾನ ಪಡೆದಿವೆ.

ಜಾನಪದ ಸಾಹಿತ್ಯ ಅವರ ವಿಶೇಷ ಆಸಕ್ತಿಯ ವಿಷಯವಾಗಿದ್ದು ಅದಕ್ಕೆ ಸಂಬಂಧಪಟ್ಟ ಸಂಗತಿಗಳು ಅವರ ಸಾಹಿತ್ಯರಾಶಿಯಲ್ಲೆಲ್ಲ ಎದ್ದು ಕಾಣುವಂತಿವೆ. ಹತ್ತಕ್ಕೂ ಹೆಚ್ಚು ಗ್ರಂಥಗಳನ್ನು ಅವರು ಸಂಪಾದಿಸಿಕೊಟ್ಟಿದ್ದಾರೆ. ಚರಿತ್ರೆ, ಮಕ್ಕಳ ಸಾಹಿತ್ಯ, ಆತ್ಮಕಥೆ, ಅನುವಾದ ಹೀಗೆ ಆನಂದಕಂದರು ಸೃಜನೇತರ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಪ್ರಾತಿನಿಧಿಕವೆನಿಸುವ ಪ್ರೌಢ ಹೆಜ್ಜೆಗಳನ್ನು ಮೂಡಿಸಿದ್ದಾರೆ.

■

# ೪. ಪತ್ರಿಕೋದ್ಯಮ–ಸಾಂಸ್ಕೃತಿಕ ಪರಿಚಾರಿಕೆ

ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನಗಳು ಇಂದು ಇಡೀ ಜಗತ್ತನ್ನೇ ಒಂದು ಹಳ್ಳಿಯನ್ನಾಗಿಸಿವೆ. Global Village ಅಂದರೆ; ಜಾಗತಿಕ ಗ್ರಾಮ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿವೆ. ಆದರೆ ಅದರ ಹಿಂದಿನ ವ್ಯಾಪಾರೀಕರಣದ ಉದ್ದೇಶ ಕೆಲವೇ ರಾಷ್ಟ್ರಗಳ ಸ್ವಾರ್ಥಕ್ಕೆ, ಅದಕ್ಕೆ ಸಂಬಂಧಪಟ್ಟ ಕುತಂತ್ರಗಳಿಗೆ ಪೂರಕವಾಗಿ ಎಲ್ಲ ಶೋಧಗಳು ಬಳಕೆಗೊಳ್ಳುತ್ತಿರುವುದು ಸಾಮಾನ್ಯ ರಾಷ್ಟ್ರಗಳ ಹಾಗೂ ಸಮಾನ್ಯರ ಜನರ–ಜೀವನದ ದೃಷ್ಟಿಯಿಂದ ನೋಡಿದಾಗ ವಿಪರ್ಯಾಸದ ಸಂಗತಿಗಳಾಗಿ ತೋರುತ್ತವೆ. ಮುದ್ರಣ ತಂತ್ರಜ್ಞಾನದಿಂದ ವಿದ್ಯುನ್ಮಾನ ತಂತ್ರಜ್ಞಾನದವರೆಗಿನ ಬೆಳವಣಿಗೆಯ ಚರಿತ್ರೆಯನ್ನು ಗಮನಿಸಿದಾಗ ಸಾಂಸ್ಕೃತಿಕ ನೆಲೆಗಳು ತಂತ್ರಜ್ಞಾನದ ಬೆಳವಣಿಗೆಯ ಎದುರು ಶಿಥಿಲಗೊಳ್ಳುತ್ತ ಸಾಗಿರುವದು ಅಪಾಯಕಾರಿ ಎನಿಸುತ್ತಿವೆ. ಕೇವಲ ಪತ್ರಿಕೋದ್ಯಮ ಒಂದೇ ಮುಖ್ಯ ಸಮೂಹ ಮಾಧ್ಯಮವಾಗಿದ್ದಾಗ ಸಾಂಸ್ಕೃತಿಕ ಆಯಾಮಗಳು ವ್ಯಾಪಕವಾದ ಹಾಗೂ ವಿಶೇಷವಾದ ಪ್ರಾಶಸ್ತ್ಯ ಪಡೆದುಕೊಂಡು ಜನರ ಅಭಿರುಚಿ–ಆಸಕ್ತಿ–ಜ್ಞಾನಾಕಾಂಕ್ಷೆಗಳನ್ನು ಖಚಿತವಾದ ಮಾನವೀಯ ನೆಲೆಗಳ ಕಡೆಗೆ ತಿರುಗಿಸುವ, ರೂಪಿಸುವ ಪ್ರಾಮಾಣಿಕ ಯತ್ನಗಳು ನಡೆಯುತ್ತಿದ್ದವು. ಭಾರತಕ್ಕೆ ಸ್ವಾತಂತ್ರ್ಯ ಇನ್ನೂ ಸಿಗದೆ ಇರುವ ಸಂದರ್ಭದಲ್ಲಿ ರಾಷ್ಟ್ರೀಯ ಚಳುವಳಿ ದೇಶಾದ್ಯಂತ ವ್ಯಾಪಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ತಿಳಕ, ಗಾಂಧಿ, ಅರವಿಂದಘೋಷ ಮೊದಲಾದವರು ಪತ್ರಿಕೋದ್ಯಮದ ನೀತಿಸಂಹಿತೆಗೆ ಪಾರದರ್ಶಕ ತೇಜವನ್ನೊದಗಿಸಿದ್ದರು. ಅಂತಹ ತತ್ಕಾಲೀನ ಹಾಗೂ ಚಿರಂತನ ಮೌಲ್ಯಗಳ ಬೆಳಕಿನಲ್ಲಿ ಆನಂದಕಂದರು ತಮ್ಮ ಬದುಕನ್ನು, ಅದರ ಸಾರ್ಥಕತೆಯ ಕಾಣ್ಕೆಯನ್ನು ರೂಪಿಸಿಕೊಂಡಿದ್ದರು. ಆದ್ದರಿಂದ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲಿ ಆನಂದಕಂದರ ಪತ್ರಿಕೋದ್ಯಮದ ಪ್ರಯೋಗ ವೈಯಕ್ತಿಕ ಸ್ವಾರ್ಥಗಳನ್ನು ಮೀರಿದ ಮಾನವೀಯ ನೆಲೆಗಳ ಅನಾವರಣದ ಶ್ರದ್ಧಾಪೂರ್ಣ ಕಾಯಕವಾಗಿತ್ತು. ಆದ್ದರಿಂದ ಅವರು ಪತ್ರಿಕೆಗಳ ಹೊಣೆ ಹೊತ್ತು ಕಾಲು ಶತಮಾನ ಅದನ್ನೊಂದು ಅಸಿಧಾರಾವ್ರತದಂತೆ ನಿಭಾಯಿಸಿಕೊಂಡು ಹೋದ ಅವರ ಆ ಹೋರಾಟದ ಪರ್ವವನ್ನು ಸಾಂಸ್ಕೃತಿಕ ಪರಿಚಾರಿಕೆ ಎಂದು ಕರೆಯುವದೇ

ಸೂಕ್ತವೆನಿಸುತ್ತದೆ. ಆಧುನಿಕತೆಯ ಎಲ್ಲ ಬಗೆಯ ಸಂಕೀರ್ಣತೆ ಹಾಗೂ ಬಿಕ್ಕಟ್ಟುಗಳ ನಡುವೆ ಪತ್ರಿಕೆಯನ್ನು ಸಾಂಸ್ಕೃತಿಕ ಪರಿಚಾರಿಕೆಯ ನೆಲೆಗೆ ಒತ್ತುಕೊಟ್ಟು ನಡೆಸಿದ ಒಂದು ಉದಾಹರಣೆ 'ಲಂಕೇಶ್ ಪತ್ರಿಕೆ'ಯದು. ಬದಲಾದ ಪರಿಸ್ಥಿತಿಯಲ್ಲಿ ಇದರ ರೂಪ, ವ್ಯತ್ಯಾಸ ಮತ್ತು ಮಾರುಕಟ್ಟೆಯ ನಿರೀಕ್ಷೆಗಳು ಭಿನ್ನವಾಗಿದ್ದರೂ 'ಜಯಂತಿ'ಯ ಮೂಲಕ ಐವತ್ತು ವರ್ಷಗಳಿಗೂ ಮೊದಲು ಆನಂದಕಂದರು ನಡೆಸಿದ ಪತ್ರಿಕೋದ್ಯಮದ ವ್ರತ ಇದಕ್ಕಿಂತಲೂ ಮಿಗಿಲಾದ ಚಾರಿತ್ರಿಕ ಮಹತ್ವ ಪಡೆದಿದೆ. ಆನಂದಕಂದರು ಬದುಕಿದ್ದಾಗ ಅವರ ಈ ಸೇವೆಯಿಂದ ಅವರಿಗೆ ಯಾವುದೇ ವೈಯಕ್ತಿಕ ಅನುಕೂಲ ಒದಗದಿದ್ದರೂ ಅದೊಂದು ಐತಿಹಾಸಿಕ ಘಟನೆ ಎಂದು ನೆನಪಿಸಿಕೊಂಡದ್ದು ಕನಿಷ್ಠ ಅವರ ತ್ಯಾಗಮಯ ಬದುಕಿಗೆ ಸಂದ ಸ್ಮರಣೀಯ ಗೌರವವೆಂದಾದರೂ ತಿಳಿಯಬಹುದು. ಅಂಥ ಪ್ರಾತಿನಿಧಿಕ ಉಲ್ಲೇಖವೊಂದನ್ನಿಲ್ಲಿ ಕೊಡಲಾಗುತ್ತಿದೆ. "ಶ್ರೀ ಬೆಟಗೇರಿ ಕೃಷ್ಣಶರ್ಮರು ಕನ್ನಡ ಪತ್ರಿಕೋದ್ಯಮದ ಆದ್ಯಪುರುಷರಲ್ಲದಿದ್ದರೂ ವ್ಯವಸ್ಥಿತವಾದ ಇಂದಿನ ಕನ್ನಡ ಪತ್ರಿಕೋದ್ಯಮದ ಆದ್ಯ ಪ್ರವರ್ತಕರಲ್ಲಿ ಒಬ್ಬರೆನ್ನುವಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡ ಪತ್ರಿಕಾರಂಗದಲ್ಲಿ ಕೃಷ್ಣಶರ್ಮರು ಪ್ರವೇಶಿಸುವ ಹೊತ್ತಿಗೆ ಸಾಕಷ್ಟು ಕನ್ನಡ ಪತ್ರಿಕೆಗಳಿದ್ದವು. ಚಿಕ್ಕದಾದ ಕನ್ನಡ ನಾಡಿನಲ್ಲಿ. ವಾಚನಾಭಿರುಚಿ ಕಡಿಮೆ ಇದ್ದ ಅಂದಿನ ಕಾಲದಲ್ಲಿ ಅವರು 'ಜಯಂತಿಯ'ನ್ನು ಪ್ರಾರಂಭಿಸಿದಾಗ ಹಲವು ಜನ ಆಕ್ಷೇಪಿಸಿದರು. ಇಂತಹ ವಾಚನಾಭಿರುಚಿಯನ್ನು ಕುದುರಿಸಿ ಪ್ರತಿಭಾವಂತ ಲೇಖಕರನ್ನು, ಬೆಳಕಿಗೆ ತರುವ ಸಾಹಿತ್ಯಿಕ-ಸಾಂಸ್ಕೃತಿಕ ಮುಖಪತ್ರದಂತಿರುವ ಅಖಿಲ ಕರ್ನಾಟಕ ವ್ಯಾಪ್ತಿಯುಳ್ಳ ಪತ್ರಿಕೆಯನ್ನು ಕಟ್ಟಿ ಏಕಾಂಗಿಯಾಗಿ ಅದರ ನೇತೃತ್ವವನ್ನು ವಹಿಸಿ ಯಾರ ಹಂಗಿಗೂ ಒಳಗಾಗದೆ ಅಖಂಡವಾಗಿ ಇಪ್ಪತ್ತೂರು ವರ್ಷ ನಡೆಸಿಕೊಂಡು ಬಂದ ಕೀರ್ತಿ ಕನ್ನಡ ಪತ್ರಿಕೋದ್ಯಮದಲ್ಲಿ ಶ್ರೀ ಬೆಟಗೇರಿ ಕೃಷ್ಣಶರ್ಮರ ಹೊರತು ಬೇರಾರಿಗೂ ಸಲ್ಲಲಾರದು ಎಂದರೆ ಅತಿಶಯೋಕ್ತಿಯಲ್ಲ."[೩೬]

ಕಾವ್ಯ, ಕಥೆ, ಕಾದಂಬರಿ, ನಾಟಕ ಮೊದಲಾದ ಸೃಜನಶೀಲ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿ ಜಾನಪದ ಅಧ್ಯಯನ, ಸಂಶೋಧನೆ, ಸಾಹಿತ್ಯ ವಿಮರ್ಶೆ, ಗ್ರಂಥ ಸಂಪಾದನೆ, ಅನುವಾದ ಮೊದಲಾದ ಸೃಜನೇತರ ಪ್ರಕಾರಗಳಲ್ಲಿ ದುಡಿಯುತ್ತ, ಪತ್ರಿಕೋದ್ಯಮದ ನಿರಂತರ ಕಡ್ಡಾಯ ಬರಹಗಳಿಗೆ ತಮ್ಮನ್ನೊಡ್ಡಿಕೊಂಡ ಬೆಟಗೇರಿಯವರ ಕ್ರಿಯಾಶೀಲತೆ ಅನ್ಯಾದೃಶ್ಯವಾದುದು. 'ಜಯಂತಿ'ಯ ಮೂಲಕ ಕೃಷ್ಣಶರ್ಮ ತಮ್ಮ ಸ್ವಂತ ಸಾಹಿತಿಯ ಸೃಷ್ಟಿಗೆ ಮೀರಿದ ಘನವಾದ ಮಾನವೀಯ ಸಾಂಸ್ಕೃತಿಕ

---

೩೬. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೬೫

ಉದ್ದೇಶವೊಂದನ್ನು ಸಾಧಿಸುವಲ್ಲಿ ಸಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ 'ಜಯಂತಿ' ಬೇಟಗೇರಿ ಕೃಷ್ಣಶರ್ಮ ಅವರ ಮಹಾಕಾವ್ಯ ಎಂದೇ ಹೇಳಬೇಕು. ಇಂತಹ ಸಾಧನೆಯ ಕಠೋರ ವ್ರತಕ್ಕೆ ತಮ್ಮನ್ನು ಆನಂದಕಂದರು ತೊಡಗಿಸಿಕೊಂಡದ್ದು ಆಕಸ್ಮಿಕವಲ್ಲ. . ಯಾವುದೇ ಕ್ಷೇತ್ರದಲ್ಲಿ ಗಾಢಶ್ರದ್ಧೆಯಿಂದ ತೊಡಗುವುದು ಕೇವಲ ಪ್ರಯತ್ನಪೂರ್ವಕ ಅಭ್ಯಾಸದಿಂದ ಸಾಧ್ಯವಾಗುವಂತಹದಲ್ಲ. ಹುಟ್ಟಿನಿಂದ ಪಡೆದ ಕೆಲವಾದರೂ ಪ್ರವೃತ್ತಿಗಳು, ಪ್ರೇರಣೆಗಳು ವ್ಯಕ್ತಿತ್ವದಲ್ಲಿದ್ದರೆ ಆಯ್ಕೆ ಮಾಡಿಕೊಂಡ ಕೆಲಸಕ್ಕೆ ಒಂದು ಚೆಲುವು, ಘನತೆ ಪ್ರಾಪ್ತವಾಗುತ್ತದೆ. ಹಾಗೆ ಆಯ್ಕೆ ಮಾಡಿಕೊಂಡು ಸಂಪೂರ್ಣವಾಗಿ ಅದರಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ವ್ಯಕ್ತಿಗೆ ಎದುರಾಗುವ ತೊಂದರೆಗಳನ್ನು, ಸಂಕಷ್ಟಗಳನ್ನು ಎದುರಿಸಿ ಗೆಲ್ಲುವ ಶಕ್ತಿಯನ್ನು ಹಾಗೂ ತನ್ನ ಕಾರ್ಯತತ್ಪರತೆಯಲ್ಲಿ ಆನಂದವನ್ನು ನೀಡುವಂತಹದು. ಹೀಗಾಗಿ ಪ್ರತಿಭೆ ಕೇವಲ ಕಲೆಯ ಕ್ಷೇತ್ರಕ್ಕೆ ಸೀಮಿತವಾದುದಲ್ಲ. ವಿಜ್ಞಾನ ಕ್ಷೇತ್ರದ ಗಹನ ಶೋಧಗಳಿಗೂ ಪ್ರತಿಭೆಯೇ ಕಾರಣ ಎಂಬುದನ್ನು ಅಲ್ಲಗಳೆಯಲಾಗದು. ಸಾಂಪ್ರದಾಯಿಕವಾಗಿ ಪ್ರತಿಭೆಯನ್ನು ಕಲಾಸೃಷ್ಟಿಯ ಆಕರವಾಗಿ ಗ್ರಹಿಸುತ್ತ ಬಂದಿದ್ದರೂ ಇದನ್ನವಲಂಬಿಸಿ ಸೃಜನ-ಸೃಜನೇತರ ಎಂಬ ವಿಂಗಡಣೆ ಮಾಡಲಾಗಿದ್ದರೂ ಇದು ಸಂಪೂರ್ಣ ಪ್ರತ್ಯೇಕ ಎಂದೇನು ಭಾವಿಸಬೇಕಿಲ್ಲ ಎಂಬುದು ಸೂಕ್ಷ್ಮ ಗ್ರಹಿಕೆಗೆ ತಿಳಿಯುವಂತಹದೇ ಆಗಿದೆ. ಈ ಸಂಗತಿಯನ್ನು ವಿವರವಾಗಿ ಚರ್ಚಿಸಲು ಕಾರಣ ಆನಂದಕಂದರ ಪ್ರತಿಯೊಂದು ಕೆಲಸದ ಹಿಂದೆ ಪ್ರತಿಭೆಯ ಹೊಳಹು ಇದೆ. ತಪಸ್ಸಿನ ತನ್ಮಯತೆಯಿದೆ. ಅದು ಯಾವುದೇ ಲೌಕಿಕ ಲಾಭಗಳ ಉದ್ದೇಶದಿಂದ ಮಾಡಿದ್ದಲ್ಲ, ತನ್ನ ಅಸ್ತಿತ್ವವನ್ನು, ಮಾನವೀಯ ಉದ್ದೇಶವೊಂದರಲ್ಲಿ ಸಂಪೂರ್ಣ ಕರಗಿಸಿಕೊಳ್ಳುವ ಭಾವ ಅದರಲ್ಲಿದೆ. ಅಂದ ಮಾತ್ರಕ್ಕೆ ಇದು ಅಲೌಕಿಕತೆಯ ಅಮೂರ್ತ ನೆಲೆಯಲ್ಲಿ ವ್ಯವಹರಿಸುವಂತಹದೆಂದು ಭಾವಿಸಬೇಕಾಗಿಲ್ಲ. ಅದಾವುದೂ ಅಲ್ಲದೆ ವಾಸ್ತವಿಕ ಮಾನವೀಯ ದೃಷ್ಟಿ ಆನಂದಕಂದರದು. ಹಾಗಂತಲೇ ಅವರ ಕಾರ್ಯಗಳು ಜನ ಮೆಚ್ಚಿಗೆಯಿಂದ ಸ್ವೀಕರಿಸಲಿ, ಬಿಡಲಿ ಅವು ಚರಿತ್ರೆಯ ಒಂದು ಸಂದರ್ಭದ ಸಾಂಸ್ಕೃತಿಕ ಅಗತ್ಯಗಳನ್ನು ಸಾಧ್ಯಂತವಾಗಿ ಈಡೇರಿಸುವಲ್ಲಿ ಯಶಸ್ವಿಯಾಗಿವೆ ಎಂದೇ ಹೇಳಬೇಕು. ಈ ಯಶಸ್ಸಿನ ಸ್ವರೂಪವನ್ನ ಶ್ರೀ ಗೌರೀಶ ಕಾಯ್ಕಿಣಿಯವರು ಹೀಗೆ ಗುರುತಿಸಿದ್ದಾರೆ: "ಜಯಂತಿಯ ಮುಖಾಂತರ ಕೃಷ್ಣಶರ್ಮರು ಅದೆಷ್ಟು ಹೊಸ ಕವಿಗಳನ್ನು, ಲೇಖಕರನ್ನು, ಕತೆಗಾರರನ್ನು ಬಯಲಿಗೆ, ಬೆಳಕಿಗೆ ತಂದಿರುವರೋ ಅವರೇ ಬಲ್ಲರು. 'ಜಯಂತಿ' ಹೋಯಿತು. ಅದಕ್ಕಾಗಿ ಅದರ ಬದುಕಿಗಾಗಿ ಬೇಟಗೇರಿ ಕೃಷ್ಣಶರ್ಮರ ತನು-ಮನ-ಧನ, ಹೊಲ-ಮನೆ, ಆಯುರಾರೋಗ್ಯ ಎಲ್ಲ ಸವೆದು ಸೊರಗಿ ಸೋರಿ ಹೋಯಿತು. ಆದರೆ ಆ ವೈಭವಶಾಲಿಯಾದ ಪತನದಿಂದ ಹೊಸಗನ್ನಡದ ಹೊಸ ಹೊಸ ಕ್ಷಿತಿಜಗಳು

ತೆರೆದು ತೋಳಗಿದವು. ಜಯಂತಿಯೂ ಅದರ ಮೂಲಕ ಬೇಟಗೇರಿ ಕೃಷ್ಣಶರ್ಮರೂ ಆಧುನಿಕ ಕನ್ನಡ ಸಾಹಿತ್ಯದ ಉತ್ಥಾಪನೆಗೆ ಅದರ ಅಭಿವೃದ್ಧಿ ಸಮೃದ್ಧಿಗಳ ಸ್ಥಾಪನೆಗೆ ಏನೇನು ಮಾಡಿದರು – ಇದರ ಕಥೆಯನ್ನು ಇನ್ನೂ ಯಾರೂ ಹೇಳಿಲ್ಲ. ಇನ್ನಾದರೂ ಬೇಟಗೇರಿ ಕೃಷ್ಣಶರ್ಮರು ಲೋಕದ ಈ ಲೋಕಕ್ಕೆ ಕಣ್ಣು ಮುಚ್ಚುವ ಮುಂಚೆಯೇ ಯಾರಾದರೂ ಪುಣ್ಯಾತ್ಮರು ಹೇಳಬೇಕು! ಆಲೂರ ವೆಂಕಟರಾಯರ 'ಜಯ ಕರ್ನಾಟಕ'ದ ಪರ್ವ, ಬೇಟಗೇರಿ ಕೃಷ್ಣಶರ್ಮರ 'ಜಯಂತಿ'ಯ ಪರ್ವ ಓ ಕನ್ನಡದ ನವೋದಯದ ಇತಿಹಾಸದ ಸ್ವರ್ಣ ಕಾಂಡಗಳಿವು."[೩೭] ಬೇಟಗೇರಿಯವರು ಬದುಕಿದ್ದಾಗ ಬರೆದ ಮಾತುಗಳಿವು.

ಇಂತಹ ಯಶಸ್ಸಿನ ಕಥಾನಕದ ಹಿಂದೆ ಕ್ರಿಯಾಶೀಲವಾಗಿದ್ದ ಪ್ರತಿಭೆಯ ಹೊಳಹುಗಳು ಆನಂದಕಂದರ ಬಾಲ್ಯದಲ್ಲಿಯೇ ಪ್ರಕಟಗೊಂಡಿದ್ದವೆಂಬುದಕ್ಕೆ ಸಾಕಷ್ಟು ಸೂಚನೆಗಳು, ಉದಾಹರಣೆಗಳು ಸಿಗುತ್ತವೆ. ತಮ್ಮ ಎಂಟನೆಯ ವಯಸ್ಸಿಗೆ ಬರೆಯುವ ಪ್ರಯತ್ನದಲ್ಲಿ ತೊಡಗಿದ್ದ ಆನಂದಕಂದರು ಆವಾಗಲೇ ಸಿಕ್ಕದ್ದನ್ನು ಓದುವ ಗೀಳನ್ನು ಅಂಟಿಸಿಕೊಂಡಿದ್ದರು. ಈಗಾಗಲೇ ಅವರ ಓದಿನ ಗೀಳನ್ನು ಕುರಿತು ಬಾಲ್ಯ ಹಾಗೂ ಶಿಕ್ಷಣರಾದ ಸಂದರ್ಭದಲ್ಲಿ ವಿವರಿಸಲಾಗಿದೆ. ಅವರ ಓದಿಗೆ ವಿಷಯಗಳ ಕಟ್ಟು ಕಟ್ಟಳೆಯಾಗಲಿ, ಪ್ರಕಾರಗಳ ಸೀಮಿತ ನಿಷ್ಠೆಯಾಗಲಿ ಇರಲಿಲ್ಲ. ಉಪಲಬ್ಧವಿದ್ದ ಬದುಕಿನ ಎಲ್ಲ ಕ್ಷೇತ್ರಗಳ ಜ್ಞಾನಪದ ಎಲ್ಲ ಶಾಖೆಗಳ ಓದಿಗೆ ತಮ್ಮನ್ನು ಒಡ್ಡಿಕೊಂಡಿದ್ದು ಪತ್ರಿಕೋದ್ಯಮದ ವೈವಿಧ್ಯಪೂರ್ಣ ಆಸಕ್ತಿಗಳ ಕಡೆಗೆ ಅವರ ಒಲವು ರೂಪುಗೊಳ್ಳಲು ತಳಹದಿಯಾಯಿತು. ಆ ಕಾಲದಲ್ಲಿ ಸುತ್ತ ಮುತ್ತಲಿನ ಊರುಗಳಲ್ಲೆಲ್ಲ ನಡೆಯುತ್ತಿದ್ದ ನಾಟಕ, ದೊಡ್ಡಾಟ, ಸಣ್ಣಾಟ ಹಾಗೂ ಇತರ ಬಯಲಾಟಗಳು ಜಾನಪದ ಹಾಡುಗಳೂ ಅವರನ್ನು ಗಾಢವಾಗಿ ಪ್ರಭಾವಿಸಿದವು. ಹನ್ನೊಂದನೆಯ ವಯಸ್ಸಿನಷ್ಟೊತ್ತಿಗೆ ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಪ್ರಮುಖ ಪತ್ರಿಕೆಗಳನ್ನು ಓದುವ ಅವಕಾಶ ಅವರಿಗೆ ಒದಗಿದ್ದು ಅಥವಾ ಆನಂದಕಂದರು ಆ ಕುರಿತು ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದು ಅವರ ಅಂತಃಪ್ರೇರಣೆಗೆ ದಿಕ್ಸೂಚಿ ಎನ್ನಬಹುದು. ೧೮೪೩ ರಷ್ಟೊತ್ತಿಗೆ 'ಮಂಗಳೂರು ಸಮಾಚಾರ' ಪತ್ರಿಕೆಯೊಂದಿಗೆ ಆರಂಭವಾದ ಕನ್ನಡ ಪತ್ರಿಕೋದ್ಯಮ ೧೯೧೦ ರಷ್ಟೊತ್ತಿಗೆ ಅನೇಕ ಏರಿಳಿವುಗಳನ್ನು ಕಾಣುತ್ತ ಸಾಗಿತ್ತು. ಗಳಗನಾಥರಂತಹ ಮಹನೀಯರ ಪ್ರಯತ್ನದಿಂದ 'ಸದ್ಬೋಧ ಚಂದ್ರಿಕೆ', 'ಸದ್ಗುರು'ಗಳಂತಹ ಪತ್ರಿಕೆಗಳು ಸಾಹಿತ್ಯವನ್ನು ಗುರಿಯಾಗಿಟ್ಟುಕೊಂಡು ನಡೆಯುತ್ತಿದ್ದವು. ವಿದ್ಯಾವರ್ಧಕ ಸಂಘದ 'ವಾಗ್ಭೂಷಣ ಪತ್ರಿಕೆ'ಯನ್ನು ಆಲೂರು

---

೩೭. ಬೆಳುವಲ – ಬೆಟಗೇರಿ ಕೃಷ್ಣಶರ್ಮ ಸಂಭಾವನಾ ಗ್ರಂಥ, ಪು. ೪೪, ೪೫

ವೆಂಕಟರಾಯರು ಸಂಪಾದಕರಾಗಿ ನಡೆಸುತ್ತಿದ್ದರು. ಕೆರೂರು ವಾಸುದೇವಾಚಾರ್ಯರ 'ಶುಭೋದಯ' ಹಾಗೂ ಧಾರವಾಡದಿಂದ ಹೊರಡುತ್ತಿದ್ದ 'ಪ್ರಭಾತ' ಪ್ರತಿಕೆಗಳು ಈ ನಿಟ್ಟಿನಲ್ಲಿ ಕ್ರಿಯಾಶೀಲವಾಗಿದ್ದವು. ಬಾಲಗಂಗಾಧರ ತಿಲಕರ 'ಕೇಸರಿ', ಶ್ರೀ ಹರಿನಾರಾಯಣ ಆಪ್ಟೆಯವರ 'ಕರಮಣೂಕ'ದಂತಹ ಪ್ರತಿಕೆಗಳೂ ಮರಾಠಿಯಲ್ಲಿ ಪ್ರಖ್ಯಾತವಾಗಿದ್ದಷ್ಟೇ ಅಲ್ಲ ಮರಾಠಿ ಪತ್ರಿಕೋದ್ಯಮ ರಾಷ್ಟ್ರದಲ್ಲಿಯೇ ಮಾದರಿಯೆಂಬಂತೆ ಪ್ರಭಾವಶಾಲಿಯಾಗಿದ್ದವು. ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯ ಮೇಲೂ ಮರಾಠಿಯ ಪ್ರಭಾವ ಇದ್ದೇ ಇತ್ತು. ಈ ಎಲ್ಲ ಪ್ರಭಾವಗಳಿಗೆ ಹಾಗೂ ಅವು ಕನ್ನಡದ ಮೂಲಕ ಪಡೆದುಕೊಳ್ಳುತ್ತಿದ್ದ ಅವಸ್ಥಾಂತರಗಳಿಗೆ ಸ್ಪಂದಿಸುತ್ತ ಸಾಗಿದ್ದ ಆನಂದಕಂದರು ೧೯೧೧ ರಲ್ಲಿ 'ಸದ್ಬೋಧ ಚಂದ್ರಿಕೆ'ಯಲ್ಲಿ ಪ್ರಕಟವಾದ ಗಳಗನಾಥರ 'ಪಿತೃಭಕ್ತಿ' ಕಥೆಯನ್ನು ಸಂಗೀತಮಯ ನಾಟಕವಾಗಿ ಪರಿವರ್ತಿಸಲು ತಮ್ಮ ಸೋದರನೊಡಗೂಡಿ ಪ್ರಯತ್ನಿಸಿದ್ದನ್ನು ಈಗಾಗಲೇ ಪ್ರಸ್ತಾಪಿಸಲಾಗಿದ್ದು, ಆ ಸಂದರ್ಭ ಆನಂದಕಂದರ ಪ್ರಯೋಗಶೀಲತೆ ಹಾಗೂ ಆ ನಿಟ್ಟಿನ ಸಾಹಸಪೂರ್ಣ ನಡೆಗೆ ಆರಂಭದ ನಿದರ್ಶನವೆನ್ನಬಹುದು. ಆ ಎಳೆಯ ವಯಸ್ಸಿನಲ್ಲಿ ಆನಂದಕಂದರು ಊರಲ್ಲಿ ವಾಚನಾಲಯ ಆರಂಭಿಸಿ ೧೦-೧೨ ಪತ್ರಿಕೆಗಳು ಬರುವಂತೆ ಮಾಡಿದ್ದು ಓದು ತಿಳಿಯದ ಹಲವರಿಗೆ ತಾನೇ ಓದಿ ಹೇಳುತ್ತ ಅರಿವು ಹಂಚುವ ಕಾಯಕದಲ್ಲಿ ನಿರತವಾದದ್ದು ಪತ್ರಿಕಾ ವ್ಯವಸಾಯದ ಪ್ರಾಥಮಿಕ ಸಿದ್ಧತೆ ಎಂಬಂತೆ ತೋರುವ ಹಾಗಿದೆ. ಓದುವ ಓದಿಸುವ ಈ ಹವ್ಯಾಸ ಅವರಿಗೆ ಸಾಹಿತ್ಯದ ವಿವಿಧ ಪ್ರಕಾರಗಳ ರಚನೆಗೆ ಪ್ರೇರೇಪಿಸುವಂತಾಯಿತು. ೧೯೧೮ ರಲ್ಲಿ ಧಾರವಾಡದಲ್ಲಿ ಆರಂಭವಾದ 'ಪ್ರಭಾತ'ವೆಂಬ ಕಾವ್ಯಕ್ಕೆ ಮೀಸಲಾದ ಪತ್ರಿಕೆಯಲ್ಲಿ ಪ್ರಕಟವಾದ ಶಾಂತ ಕವಿಗಳು, ಕಾವ್ಯಾನಂದರು, ಕೆ.ಬಸವಾಚಾರ್ಯ, ಶ್ರೀನಿವಾಸ ಮೊದಲಾದವರ ಕವನಗಳನ್ನೋದಿದ್ದು ತಾವೂ 'ಪ್ರಭಾತ'ಕ್ಕೆ ಕವನಗಳನ್ನು ಕಳಿಸುವಂತೆ ಪ್ರೇರೇಪಿಸಿತು. ಅದೇ ವರ್ಷ ಅವರ ಭಕ್ತಿ ಕುಸುಮಾವಳಿಯೇ ಮೊದಲಾದ ಕವನಗಳು ಅದರಲ್ಲಿ ಪ್ರಕಟವಾಗಿ ಅವರ ಬರವಣಿಗೆಯ ಉತ್ಸಾಹವನ್ನು ಹೆಚ್ಚಿಸಿದವು. ಆದರೆ 'ಪ್ರಭಾತ' ಅದೇ ವರ್ಷ ನಿಂತುಹೋಯಿತು. ಆದರೂ ಅವರೊಬ್ಬ ಕವಿ, ಯುವ ಸಾಹಿತಿ ಎಂದು ಸಾಹಿತ್ಯಿಕ ವಲಯದಲ್ಲಿ ಹೆಸರು ಮಾಡಿದ್ದು ಮುಂದೆ ಅನೇಕ ತಿರುವುಗಳಿಗೆ ಕಾರಣವಾಯಿತು.

೧. ಪತ್ರಿಕಾಕರ್ತನಾಗಿ ಆರಂಭದ ಅನುಭವಗಳು :

**ಮಾತೃ ಭೂಮಿ :** ಶ್ರೀ ಕರಗುಪ್ಪಿ ಕೃಷ್ಣರಾಯರ ಸಂಪಾದಕತ್ವದಲ್ಲಿ ಬೆಳಗಾವಿಯಿಂದ ಹೊರಬರುತ್ತಿದ್ದ 'ಮಾತೃಭೂಮಿ' ಪತ್ರಿಕೆ ಕರಗುಪ್ಪಿಯವರ ಅಕಾಲಿಕ ಮರಣದಿಂದ ಬೆಟಗೇರಿ ಕೃಷ್ಣಶರ್ಮರವರ ಕೊರಳಿಗೆ ಬಿತ್ತು. ಶ್ರೀ ದೇಶಪಾಂಡೆ ಗಂಗಾಧರ

ರಾಯರು. ಶ್ರೀ ಯಾಳಗಿ ಗೋವಿಂದರಾಯರು, ಶ್ರೀ ಮಜಲಿ ವಕೀಲರು ಈ ಪತ್ರಿಕೆಯ ಹಿಂದಿನ ಶಕ್ತಿಯಾಗಿದ್ದರು. ಈ ಮಹನೀಯರು ಬೆಟಗೇರಿಯವರಿಗೆ ಸಂಪಾದಕತ್ವದ ಜವಾಬ್ದಾರಿ ಒಪ್ಪಿಸಿದರು. ಇಪ್ಪತ್ತೊಮ್ಮರು ವರ್ಷದ ಆನಂದಕಂದರು ಮೊಟ್ಟ ಮೊದಲ ಸಲ ಪತ್ರಿಕೆಯೊಂದರ ಸಂಪಾದಕರಾಗಿ ತಮಗೆ ಅನಿರೀಕ್ಷಿತವಾಗಿ ಒದಗಿದ ಗುರುತರ ಹೊಣೆಯನ್ನು ಅತ್ಯಂತ ಘನತೆಯಿಂದ ನಿರ್ವಹಿಸಿದರು. ಇದು ಕೇವಲ ಒಂದು ವರ್ಷ ಮಾತ್ರ ಸಾಧ್ಯವಾಯಿತು. ಪತ್ರಿಕಾ ಮಾಲಿಕರ ಹಣ ಹಾಳು ಮಾಡುವಂತಾಯಿತೇ ಹೊರತು ಈ ಪ್ರಯೋಗದಿಂದ ಹೆಚ್ಚಿನದೇನನ್ನೂ ಸಾಧಿಸಲಾಗಲಿಲ್ಲವೆಂದು ವಿನಯದಿಂದ ಹೇಳಿರುವ ಆನಂದಕಂದರು ಪತ್ರಿಕಾ ಸಂಪಾದನೆಯ ಅಮೂಲ್ಯ ಅನುಭವ ಪಡೆದದ್ದು ಮಾತ್ರ ಬಹು ಮುಖ್ಯವಾದ ಲಾಭ ಎಂದಿದ್ದಾರೆ. ಸಂಪಾದಕೀಯ ಬರಹಗಳನ್ನು ಬರೆಯುವಲ್ಲಿ ಪಳಗಿದ್ದೂ ಅಲ್ಲದೆ ಅನೇಕ ಸಂಶೋಧನಾತ್ಮಕ ಚರ್ಚೆಗೆ ಅವಕಾಶವಾಗುವ ಸಂದರ್ಭಗಳನ್ನು ಈ ಪತ್ರಿಕೆಯ ಮೂಲಕ ಹುಟ್ಟು ಹಾಕಿದರು. ಆನಂದಕಂದರ ಕನ್ನಡಾಭಿಮಾನವನ್ನು ಹುಟ್ಟು ಹಾಕುವ ಅನೇಕ ಕವನಗಳು ಮಾತೃಭೂಮಿಯಲ್ಲಿ ಪ್ರಕಟವಾದವು. ಕನ್ನಡ ಹೋರಾಟಗಾರರಾದ ದೇಶಪಾಂಡೆ ಗಂಗಾಧರರಾಯರ ಈ ಕವನಗಳು ತಮ್ಮ ಮೇಲೆ ಪ್ರಭಾವ ಬೀರಿದ್ದನ್ನು ಪ್ರಸ್ತಾಪಿಸಿದ್ದಾರೆ. ಮರಾಠಿ ವಾತಾವರಣದಲ್ಲಿ ಮಾತೃಭೂಮಿ ಕನ್ನಡದ ಜಾಗೃತಿ ಉಂಟುಮಡುವಲ್ಲಿ ಸಂಜೀವಿನಿಯಾಗಿ ಕೆಲಸ ಮಾಡಿತೆಂದು ಶ್ರೀ ವೆಂ.ಮು.ಜೋಶಿಯವರು ಅಭಿಪ್ರಾಯಪಟ್ಟಿದ್ದಾರೆ. ನಿಸ್ವಾರ್ಥ ಸಮರ್ಥ ಪತ್ರಿಕಾಕರ್ತನಾಗಿ ಬೆಳೆಯಲು ಮಾತೃಭೂಮಿಯ ಅನುಭವ ನಾಂದಿಹಾಡಿತು.

ಸ್ವಧರ್ಮ: ಬೆಳಗಾವಿ ಹಾಗೂ ಇದೇ ಜಿಲ್ಲೆಯ ಬೇರೆ ಬೇರೆ ಕಡೆಗೆ ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿ ಕೆಲಸ ಮಾಡಿ ಆನಂದಕಂದರು ೧೯೨೫ರಲ್ಲಿ ಅದೇ ಸಂಸ್ಥೆಯ ಶಿಕ್ಷಕರಾಗಿ ಧಾರವಾಡಕ್ಕೆ ಬಂದರು. ಶ್ರೀ ಬೆನಗಲ್ ರಾಮರಾಯರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಹಿತ್ಯ ಸಮ್ಮೇಳನದ ಸಂಘಟನೆಯ ಜವಾಬ್ದಾರಿ ಹೊತ್ತ ಶ್ರೀ ಪೋತದಾರ ರಂಗರಾಯರ ಜತೆಗೆ ಕನ್ನಡದ ಸ್ವಯಂ ಸೇವಕರಾಗಿ ಕೆಲಸ ಮಾಡುವ ಅವಕಾಶ ಆನಂದಕಂದರಿಗೆ ಒದಗಿತ್ತು. ಈ ಸಹವಾಸದಿಂದಾಗಿ ಪೋತದಾರರು ಆನಂದಕಂದರಿಗೆ ಧಾರವಾಡಕ್ಕೆ ಬರಲು ಕಾರಣರಾದದ್ದಷ್ಟೇ ಅಲ್ಲ, ಗೆಳೆಯರ ಗುಂಪಿನೊಂದಿಗಿನ ಸಂಬಂಧಕ್ಕೂ ಕಾರಣರಾದರು. ರಾಷ್ಟ್ರೀಯ ಶಾಲೆಗೆ ಸೇರಿದ ದಿನವೇ ಹುಣ್ಣಿಮೆ-ಅಮವಾಸ್ಯೆಗಳ ಕುರಿತಾದ ಬೇಟಗೇರಿಯವರ ಉಪನ್ಯಾಸದಿಂದ ಪ್ರಭಾವಿತರಾದ ಸ್ವಧರ್ಮ ಮಾಸ ಪತ್ರಿಕೆ ನಡೆಸುತ್ತಿದ್ದ ಶ್ರೀ ಸುರೇಂದ್ರ ದೇಸಾಯಿ ಅವರು ಪತ್ರಿಕೆಯ ಸಂಪಾದಕತ್ವದ ಹೊಣೆಯನ್ನು

ಬೆಟಗೇರಿಯವರಿಗೆ ವಹಿಸಿದರು. 'ಸ್ವಧರ್ಮ' ಸಂಪಾದಕೀಯ ಮೊದಲಾದ ಸ್ಥಿರ ಶೀರ್ಷಿಕೆಗಳಿಲ್ಲದ, ಕಥಾಸಂಕಲನದ ರೂಪದಲ್ಲಿ ಬರುತ್ತಿದ್ದ ಪತ್ರಿಕೆ. ಆನಂದಕಂದರು ತಮ್ಮ ಮಹತ್ವದ ಕಥೆಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸು ವಂತಾದುದಷ್ಟೇ ಅಲ್ಲ 'ಆನಂದಕಂದ' ಎಂಬ ಕಾವ್ಯನಾಮ ಇಲ್ಲಿ ಪ್ರಕಟವಾದ ಕಥೆಗಳ ಮೂಲಕವೇ ಆರಂಭವಾಗಿ ಖಾಯಂ ಆಗಿ ಉಳಿಯುವಂತಾಯಿತು. ಈ ಪತ್ರಿಕೆಯ ಜವಾಬ್ದಾರಿ ಗೆಳೆಯರ ಗುಂಪಿಗೆ ಹಸ್ತಾಂತರವಾಗಿ ಶ್ರೀ ಕೊಣ್ಣೂರು ಹನುಮಂತರಾಯರೊಂದಿಗೆ ಆನಂದಕಂದರು ಸಂಪಾದಕರಾಗಿ ಮುಂದುವರೆದರು. ಈ ಪತ್ರಿಕೆಯ ಮೂಲಕ ಆನಂದಕಂದರು ಕತೆಗಾರರಾಗಿ ಪ್ರಖ್ಯಾತರಾದದ್ದಷ್ಟೇ ಅಲ್ಲ ನಾಡಹಬ್ಬಕ್ಕೆ ನಾಂದಿಯಾದ ಲೇಖನವನ್ನು ಆನಂದಕಂದರು ಇದರಲ್ಲಿಯೇ ಬರೆದರು. ಶ್ರೀ ಘಾಣೇಕರ ಹಾಗೂ ಶ್ರೀ ಅರ್ಜುಣಗಿಯವರ ಪ್ರಚಾರ ಹಾಗೂ ಶ್ರಮದಿಂದ 'ಸ್ವಧರ್ಮ' ಸರಿಯಾದ ರೀತಿಯಲ್ಲಿ ಮಾರಾಟದ ವ್ಯವಸ್ಥೆಗೆ ಒಳಪಟ್ಟಿತ್ತು. ೧೯೨೭ರ ವರೆಗೆ ಈ ಹೊಣೆಯನ್ನು ನಿರ್ವಹಿಸಿದ ಆನಂದಕಂದರು ಬೆಂಗಳೂರಿನ ಆರ್ಯವಿದ್ಯಾಶಾಲೆಯಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದಾಗ 'ಸ್ವಧರ್ಮ'ದ ಜವಾಬ್ದಾರಿಯನ್ನು ಕಳಚಿಕೊಳ್ಳಬೇಕಾಯಿತು.

ಜನಜೀವನ : ಬೆಂಗಳೂರಿನಲ್ಲಿ ಮಕ್ಕಳ ಪುಸ್ತಕ ಪ್ರಕಟಿಸುತ್ತ 'ಜನಜೀವನ' ಪತ್ರಿಕೆಯ (ವಾರಪತ್ರಿಕೆ) ಜವಾಬ್ದಾರಿ ನಿರ್ವಹಿಸುತ್ತಿದ್ದ ಶ್ರೀ ಅಶ್ವತ್ಥನಾರಾಯಣ ಅವರು ಆನಂದಕಂದರಿಗೆ ಈ ಪತ್ರಿಕೆಯ ಕ್ರಿಸ್‌ಮಸ್ ವಿಶೇಷ ಸಂಚಿಕೆ ಸಂಪಾದಿಸಿಕೊಡಲು ಕೇಳಿಕೊಂಡರು. ಆನಂದಕಂದರು ಇನ್ನೊಂದು ಅದ್ಭುತ ಮಾದರಿ ಸಂಚಿಕೆಯಾಗಿ ರೂಪಿಸಿ ತಮ್ಮ ಪತ್ರಿಕಾ ಸಂಪಾದನೆಯ ಸಹಜ ಸಾಮರ್ಥ್ಯವನ್ನು ತೋರಿಸಿದರು. ಪಡುಕೋಣೆ ರಮಾನಂದರಾಯರ 'ನನ್ನ ಭಾವ' ಹರಟೆಯನ್ನು ಅದರಲ್ಲಿ ಪ್ರಕಟಿಸಿ ಹರಟೆ ಸಾಹಿತ್ಯದ ಪ್ರಕಟಣೆಯನ್ನು ಆರಂಭಿಸಿದ ಮೊದಲಿಗರೆಂಬ ಕೀರ್ತಿಗೂ ಪಾತ್ರರಾದರು.

**ಜಯ ಕರ್ನಾಟಕ** : ಸ್ವಾಭಿಮಾನದ ಕಾರಣದಿಂದ ೧೯೩೦ ರಲ್ಲಿ ಬೆಂಗಳೂರಿನ ಆರ್ಯವಿದ್ಯಾಶಾಲೆಯನ್ನು ಬಿಡಬೇಕಾದ ಪ್ರಸಂಗ ಆನಂದಕಂದರಿಗೆ ಒದಗಿತು. ಆಗ ಅವರು ಮರಳಿ ಬೆಟಗೇರಿಗೆ ಬಂದರು. ನಾಲ್ಕು ತಿಂಗಳು ಅಲ್ಲಿದ್ದರು. ಅಷ್ಟೊತ್ತಿಗೆ ಗೆಳೆಯರ ಗುಂಪಿನಲ್ಲಿ ಒಬ್ಬರಾಗಿದ್ದ ಶ್ರೀ ಶಂ.ಬಾ.ಜೋಶಿಯವರು, ಧಾರವಾಡಕ್ಕೆ ಬಂದು 'ಜಯಕರ್ನಾಟಕ'ದ ಸಂಪಾದಕತ್ವ ವಹಿಸಿಕೊಳ್ಳಲು ಕೇಳಿಕೊಂಡರು. ಆನಂದಕಂದರು ಧಾರವಾಡಕ್ಕೆ ಬಂದು 'ಜಯಕರ್ನಾಟಕ'ದ ಸಂಪಾದಕ ಮಂಡಳಿ ಸೇರಿದರು. ಇದನ್ನು ಸ್ಥಾಪಿಸಿ ನಡೆಸುತ್ತಿದ್ದವರು ಶ್ರೀ ಆಲೂರು ವೆಂಕಟರಾಯರು.

ಆನಂದಕಂದರ ಸಂಪಾದಕತ್ವದಲ್ಲಿ ಮಂಗನ ಮೆರವಣಿಗೆ, ತಿರುಕರ ಪಿಡುಗು, ಗರತಿಯ ಹಾಡು, ಬಿಸಿಲುಗುದುರೆ, ಬಡತನದ ಬಾಳು ಮುಂತಾದ 'ಜಯ ಕರ್ನಾಟಕ'ಕ್ಕೆ ಹೆಸರು ತಂದ ಪ್ರಕಟಣೆಗಳು ಹೊರಬಂದವು. 'ಜಯ ಕರ್ನಾಟಕ'ವು ಕನ್ನಡ ಪತ್ರಿಕೋದ್ಯಮದ ಒಂದು ಮೈಲಿಗಲ್ಲು. ಸರ್ವಾಂಗೀಣವಾಗಿ ಪ್ರಗತಿಯನ್ನು ಸಾಧಿಸಿದ್ದ ಜಯಕರ್ನಾಟಕವು 'ಮಾಡರ್ನ್ ರಿವ್ಯೂ' ಎಂದು ಖ್ಯಾತಿಯನ್ನು ಪಡೆದಿತ್ತು. ಸಂಪಾದಕೀಯ ಲೇಖನ ಟಿಪ್ಪಣಿಗಳು ಸ್ಥಿರಶೀರ್ಷಿಕೆಗಳು, ಸಾಹಿತ್ಯಿಕ, ಸಾಂಸ್ಕೃತಿಕ ಲೇಖನಗಳು, ಪ್ರಾಮಾಣಿಕ ನಿಯಮಿತತನದಿಂದ ಖ್ಯಾತನಾಮರಾದ ಲೇಖಕರ ಬಳಗ ಹೀಗೆ ಯಾವ ದೃಷ್ಟಿಯಿಂದ ಅಳೆದರೂ ಅಂದಿನ ದಿನಗಳಲ್ಲಿ ಜಯಕರ್ನಾಟಕವು ಮೇಲ್ಮಟ್ಟವನ್ನು ಪಡೆದಿತ್ತು. ಗೆಳೆಯರ ಗುಂಪಿನ ಮುಖವಾಣಿಯಾಗಿತ್ತು. ೧೯೩೧ ರಿಂದ ಎರಡು ವರ್ಷ, ೧೯೩೩ ರಿಂದ ಒಂದು ವರ್ಷ ಆನಂದಕಂದರು ಜಯಕರ್ನಾಟಕದ ಸಂಪಾದಕರಾಗಿದ್ದರು. ೧೯೩೪ ರಲ್ಲಿ ಗೆಳೆಯರ ಗುಂಪು ಒಡೆದು ಜಯಕರ್ನಾಟಕಕ್ಕೆ ಶ್ರೀ ಬೆಳಗಾವಿ ರಾಮಚಂದ್ರರಾಯರು ಸಂಪಾದಕರಾದರು. ಆದರೆ ರಾಮಚಂದ್ರರಾಯರ ಕೋರಿಕೆಯ ಮೇರೆಗೆ ಆನಂದಕಂದರು ೧೯೩೭ರವರೆಗೆ ಸಂಪಾದಕರೆಂದು ಹೆಸರು ನಮೂದಿಸದೆ ಪತ್ರಿಕೆಯ ಸಂಪಾದನೆಯ ಎಲ್ಲ ಕೆಲಸವನ್ನು ನಿರ್ವಹಿಸುತ್ತಿದ್ದರು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೆಯ ಉತ್ಸವದ ಸಂದರ್ಭದಲ್ಲಿ ಜಯಕರ್ನಾಟಕದ ವಿಶೇಷ ಸಂಚಿಕೆಯನ್ನು ರೂಪಿಸುವ ಹೊಣೆಯನ್ನು ಆನಂದಕಂದರೆ ವಹಿಸಿಕೊಂಡು ಅದನ್ನೊಂದು ಆಧಾರ ಗ್ರಂಥವೆಂಬಷ್ಟು ಮಹತ್ವ ಪೂರ್ಣವಾಗಿ ಹೊರತಂದರು. ಆ ಸಂಚಿಕೆಗಾಗಿ ಹಾಳು ಹಂಪೆಯ ಕುರಿತು ಕರುಳು ಮಿಡಿಯುವಂತಹ ಕವನವೊಂದನ್ನು ಆನಂದಕಂದರು ರಚಿಸಿದ್ದು ಅದರ ಒಂದು ನುಡಿ ಹೀಗಿದೆ :

ಹಾಳುಪಟ್ಟಣಾದ ಬಂಡೆಯ ಬಳಗದ
ಗೋಳಿನ ಮೌನದ ಕೂಗನು ಕೇಳಿ
ಅರಮನೆ ಸಿರಿಮನೆಗಲ್ಲದೆಯಾದರೂ
ಸೆರೆಮನೆಗಾದರೂ ನಮ್ಮನು ಬಳಸಲಿ

ಸಂಯುಕ್ತ ಕರ್ನಾಟಕ : ಸಂಸಾರಿಕ ಜವಾಬ್ದಾರಿಯ ಅನೇಕ ಆರ್ಥಿಕ ಅಗತ್ಯಗಳ ಒತ್ತಡದ ನಡುವೆಯೂ ಆನಂದಕಂದರು ಅನಿವಾರ್ಯವಾಗಿ ಜಯಕರ್ನಾಟಕದಿಂದ ಹೊರಬಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಸೇವೆ ಸಲ್ಲಿಸಬೇಕಾಯಿತು. ಇದೇ ಅವಧಿಯಲ್ಲಿ ತಮ್ಮನಾದ ವಿಜಯೇಂದ್ರ ಎಂ.ಎ. ಓದುತ್ತಿದ್ದವನು

ಅನಿರೀಕ್ಷಿತವಾಗಿ ಸಾವನ್ನಪ್ಪಿದ. ಅವನನ್ನು ಕುರಿತು ಅನೇಕ ಕನಸುಗಳನಿಟ್ಟುಕೊಂಡಿದ್ದ ಆನಂದಕಂದರು ಹತಾಶರಾಗಿ ತಮ್ಮೆಲ್ಲ ಸಮಸ್ಯೆಗಳಿಗೆ ಧಾರವಾಡವೇ ಕಾರಣವೆಂದು ಭಾವಿಸಿ ಮರಳಿ ಬೆಟಗೇರಿ ಸೇರಿಬಿಟ್ಟರು. ಆದರೆ ಶಂಬಾ ಅವರು ಈ ಸಲವೂ ಅವರನ್ನು ಧಾರವಾಡಕ್ಕೆ ಕರೆತರುವಲ್ಲಿ ಯಶಸ್ವಿಯಾದರು. ಈ ಘಟನೆ ಮೇಲುನೋಟಕ್ಕೆ ಆಕಸ್ಮಿಕ ಅನಿಸಿದರೂ ಕನ್ನಡ ಪತ್ರಿಕೋದ್ಯಮದ ಮಹತ್ವದ ಸಿದ್ಧಿಯೊಂದಕ್ಕೆ ಮುನ್ನುಡಿ ಬರೆಯಿತು. ಅಷ್ಟೇ ಅಲ್ಲ ಆನಂದಕಂದರ ಕರ್ತೃತ್ವಶಕ್ತಿ ತನ್ನೆಲ್ಲ ಉತ್ಕಟತೆಯೊಂದಿಗೆ ಪ್ರಕಟಗೊಳ್ಳಲು ಕಾರಣವಾಯಿತು. ಅದೇ ಜಯಂತಿಯ ಹೊಣೆ ಹೊತ್ತು ೨೩ ವರ್ಷಗಳವರೆಗೆ ಮುನ್ನಡೆಸಿ ಅದೊಂದು ಸಾಂಸ್ಕೃತಿಕ ಮಹಾಕಾವ್ಯ ಎಂಬತೆ ನಾಡಿನ ಚರಿತ್ರೆಯಲ್ಲಿ ದಾಖಲಾಗುವಂತೆ ಜೀವಶಕ್ತಿಯಾಗಿ ಸ್ಫೂರ್ತಿ ನೀಡುವಂತೆ ಅದನ್ನು ಆನಂದಕಂದರು ನಿರ್ವಹಿಸಿದ ಬಗೆ, ಅದರ ಹಿಂದಿನ ತ್ಯಾಗಪೂರ್ಣ ಹೋರಾಟ ಅನ್ಯಾದೃಶ.

ವಾಗ್ಭೂಷಣ : 'ಕರ್ನಾಟಕ ವಿದ್ಯಾವರ್ಧಕ ಸಂಘ'ದಿಂದ ಪ್ರಕಟವಾಗುತ್ತಿದ್ದ ಆಲೂರು ವೆಂಕಟರಾಯರು ಹಿಂದೆ ಸಂಪಾದಕರಾಗಿದ್ದ 'ವಾಗ್ಭೂಷಣ' ಪತ್ರಿಕೆಗೆ ಸಂಘದ ಕಾರ್ಯದರ್ಶಿಯಾಗಿದ್ದ ಬೆಟಗೇರಿ ಕೃಷ್ಣಶರ್ಮರು. ದ.ರಾ. ಬೇಂದ್ರೆಯವರೊಂದಿಗೆ ಸಂಪಾದಕರಾಗಿ ನೇಮ್ಕಕಗೊಂಡು ೧೯೪೩-೧೯೪೪ ರಲ್ಲಿ ಅದಕ್ಕೆ ಹೊಸ ರೂಪ ನೀಡಿದರು.

**'ಜಯಂತಿ' ಮಾಸ ಪತ್ರಿಕೆ :**

ಸಾಂಸ್ಕೃತಿಕ ಕ್ಷೇತ್ರದ ಮಹತ್ವದ ಸಾಧನೆಗಳು ಸಾಮಾನ್ಯವಾಗಿ ಸಂಕಷ್ಟಗಳಿಗೆ ಗುರಿಯಾಗಿ ಹೋರಾಡುವ ಸಾಮಾನ್ಯ ವರ್ಗಗಳಿಂದ ಮೂಡಿಬರುವುದು ಅಚ್ಚರಿಯ ಸಂಗತಿಯಾದರೂ ವಿಷಾದಪೂರ್ಣ ವಾಸ್ತವ. ಅಧಿಕಾರದ-ಸಂಪತ್ತಿನ ದರ್ಪದೌಲತ್ತುಗಳಿಗೆ ಸಕಲ ಸೌಕರ್ಯಗಳ ಆಡಂಬರದ ವ್ಯಸನಗಳಿಗೆ ನಿಲುಕದ ಸಂವೇದನೆಯ ಸೂಕ್ಷ್ಮಗಳು ನೊಂದ ಹೃದಯದ ಯಾತನಾಗ್ರಸ್ತ ತಳಮಳಗಳಿಗೆ ಒದಗಿಬರುವುದು ವಿಶ್ವದ ಆಂತರಿಕ ವ್ಯವಸ್ಥೆಯ ವೈಪರಿತ್ಯವಾಗಿದ್ದರೂ ಜಗತ್ತಿನ ಕಲಾ ಪರಂಪರೆಗಳ ಆರೋಗ್ಯ ಪೂರ್ಣ ಜೀವಂತ ಸತ್ವ ಈ ನೆಲೆಗಳಲ್ಲಿಯೇ ಪ್ರಕಟಗೊಂಡಿರುವುದು ಮಾನವೀಯ ಗುಣಗಳ ಆವಿಷ್ಕರಣದ ವಿಶ್ವಾತ್ಮಕ ಪ್ರಜ್ಞೆಯ ಸೂಕ್ಷ್ಮ ಯೋಜನೆಯಂತೆ ತೋರುತ್ತದೆ. ಅಧಿಕಾರದ ಉನ್ನತ ಸ್ಥಾನಗಳಲ್ಲಿದ್ದು ವಿಲಾಸ ವೈಭವಗಳಿಗೆ ವಂಚಿತರಾಗುವ, ವನವಾಸದಂತಹ ಶಿಕ್ಷೆಗಳಿಗೆ ಗುರಿಯಾಗುವ ಸಂದರ್ಭಗಳು ಹಾಗೂ ಸಾಮಾನ್ಯತೆ ತನ್ನ ಮುಗ್ಧ ಪ್ರಾಮಾಣಿಕ ಪಾರದರ್ಶಕ ನಿಷ್ಠೆಗಳ ಮೂಲಕ ಅಂತಿಮವಾಗಿ ಜಯಿಸಿ ನಿಲ್ಲುವ ಸಂಗತಿಗಳು ಜಗತ್ತಿನ ಉನ್ನತ ಮಿಥ್‌ಗಳಾಗಿ ಅವತರಿಸುವುದರ ಹಿಂದೆ ಕೂಡ ಇದೇ ಪ್ರಜ್ಞೆ ಕ್ರಿಯಾಶೀಲವಾಗಿರುತ್ತದೆ. ಬೆಂದರೆ ಬೇಂದ್ರೆಯಾಗುವಂತೆ ನೋವಿನಿಂದಲೇ

ಆನಂದಕಂದನ ಉಗಮ ನೋವು ತ್ಯಾಗಗಳು ಎಲ್ಲ ಕಾಲದಲ್ಲೂ ಅನಿವಾರ್ಯವಾಗಿ ದುಃಖಕ್ಕೆ ಗುರಿಯಾಗುವವರಿಗೆ ಮೌಲಿಕ ಮಾದರಿಯಾಗುವ ಸಂದರ್ಭಗಳು ಚರಿತ್ರೆಯಿಂದ ಎದ್ದು ಬಂದು ವರ್ತಮಾನವನ್ನು ರೂಪಿಸುತ್ತಲೇ ಸಾಗುತ್ತವೆ. 'ಜಯಂತಿ'ಯ ಹಿಂದಿನ ಆನಂದಕಂದರ ಹೋರಾಟದ ಪ್ರಸಂಗ ಇಂತಹದೇ ಎಂಬುದರಲ್ಲಿ ಅನುಮಾನವಿಲ್ಲ.

೨. 'ಜಯಂತಿ' ಸಂಪಾದಕರಾಗಿ ಬೆಟಗೇರಿ ಕೃಷ್ಣಶರ್ಮರು :

ಮುಂಬೈ ಆಧುನಿಕ ಭಾರತದ ರಾಜಕೀಯ ಹಾಗೂ ವ್ಯಾವಹಾರಿಕ ಕೇಂದ್ರವಾಗಿ ಬ್ರಿಟೀಷರಿಂದ ಬೆಳೆಯತೊಡಗಿದ ಸಂದರ್ಭದಲ್ಲಿ ಸಹಜವಾಗಿ ಮರಾಠಿ ಭಾಷೆ ಅನೇಕ ವಿಧದಲ್ಲಿ ಹೊಸತನದ ಪ್ರಭಾವಗಳನ್ನು ಬಹುಬೇಗನೆ ಮೈಗೂಡಿಸಿಕೊಳ್ಳಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಮರಾಠಿ ಸಾಹಿತ್ಯ ಸಂಸ್ಕೃತಿಗಳ ಪ್ರಭಾವ ಕಳೆದ ಶತಮಾನದ ಆರಂಭ ಕಾಲದಿಂದಲೂ ನೇರವಾಗಿ ಕನ್ನಡದ ವಿವಿಧ ಕ್ಷೇತ್ರಗಳ ಮೇಲೆ ಆಗುತ್ತ ಬಂದಿತು. ಮುಂಬೈ ಕರ್ನಾಟಕ ಎಂದು ಕರೆಯಿಸಿಕೊಂಡಿದ್ದ ಉತ್ತರ ಕರ್ನಾಟಕದ ಮೇಲಂತೂ ಈ ಪ್ರಭಾವ ಇನ್ನೂ ಗಾಢವಾದದ್ದು. 'ಜಯಂತಿ'ಯ ಸ್ಥಾಪನೆಯ ಹಿಂದಿನ ಪ್ರೇರಣೆ ಕೂಡ ಮರಾಠಿಯಲ್ಲಿ ಪ್ರಕಟವಾಗುತ್ತಿದ್ದ 'ಕಿರ್ಲೋಸ್ಕರ' ಎಂಬ ಮಾಸಿಕ ಪತ್ರಿಕೆ. ಇದರ ಜನಪ್ರಿಯತೆ ಹಾಗೂ ಲಾಭಗಳಿಕೆಯ ವಿಷಯವನ್ನು ತಿಳಿದ ಶ್ರೀ ಶಂಕರರಾವ ಜಠಾರ ಹಾಗೂ ಶ್ರೀ ವ್ಹಿ.ವಾಯ್. ಜಠಾರ ಅವರು ಧಾರವಾಡದ ಕರ್ನಾಟಕ ಕಾಲೇಜ್‌ದಲ್ಲಿ ಭೂಗೋಳಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಶ್ರೀ ಸಿ.ಡಿ.ದೇಶಪಾಂಡೆ, ಶ್ರೀ ಎಂ.ಜಿ.ಪಾಟೀಲರೊಂದಿಗೆ ಸೇರಿಕೊಂಡು 'ಜಯಂತಿ'ಯನ್ನು ಸ್ಥಾಪಿಸುವ ಯೋಜನೆ ರೂಪಿಸಿದರು. ಜಠಾರ ಬಂಧುಗಳು ಆಗಲೇ ಧಾರವಾಡದಲ್ಲಿ 'ಕರ್ನಾಟಕ ಪ್ರೆಸ್'ನ್ನು ನಡೆಸುತ್ತಿದ್ದರು. "ಇವರಲ್ಲಿ ಯಾರಿಗೂ ಕನ್ನಡ ಸಾಹಿತ್ಯಿಕ ಹಿನ್ನೆಲೆಯಾಗಲಿ, ನಾಡು-ನುಡಿಯ ಅಭ್ಯುದಯದ ಸಂಕಲ್ಪವಾಗಲಿ ಸಾಂಸ್ಕೃತಿಯ ವಿಕಸನದ ದೃಷ್ಟಿಯಾಗಲಿ, ಕನ್ನಡ ಪರಂಪರೆಯ ಅಭಿಮಾನವಾಗಲಿ ಪತ್ರಿಕೆಯನ್ನು ಪ್ರಾರಂಭಿಸುವ ಸಮಯದಲ್ಲಿ ಇರಲಿಲ್ಲ, ಕೈತುಂಬ ಲಾಭ ಬರಬಹುದೆಂಬ ಕಲ್ಪನೆಯಿಂದಲೇ ಪತ್ರಿಕಾ ವ್ಯವಸಾಯಕ್ಕೆ ಈ ಮಹನೀಯರು ಮನಸ್ಸು ಮಾಡಿದ್ದರು. ಪ್ರೀತಿಯ ತಮ್ಮನ ವಿಯೋಗದಿಂದ ದುಃಖಾರ್ತರಾಗಿ ಬೆಟಗೇರಿಯಲ್ಲಿದ್ದ ಶ್ರೀ ಕೃಷ್ಣಶರ್ಮರು, ಶಂ.ಬಾ.ಜೋಶಿಯವರ ಆತ್ಮೀಯ ಕರ್ತವ್ಯ ಕರೆಯಿಂದ ಧಾರವಾಡಕ್ಕೆ ಬರಲು ಈ ನಾಲ್ವರೂ ಮಹನೀಯರು ತಾವು ಹೊರಡಿಸಲಿದ್ದ ಪತ್ರಿಕೆಗೆ ಸಂಪಾದಕರಾಗಲು ಅವರನ್ನು ಕರೆದರು. ೧೯೩೮ನೆಯ ಮೇ ತಿಂಗಳಲ್ಲಿ 'ಜಯಂತಿ' ಅವತರಿಸಿತು."[೩೮]

---

೩೮. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು. ೧೧೮

ಲಾಭಗಳಿಕೆಯ ಉದ್ದೇಶ ಈಡೇರದೆ, ವರ್ಷದಿಂದ ವರ್ಷಕ್ಕೆ ನಷ್ಟಕ್ಕೆ ಗುರಿಯಾಗುತ್ತ ಸಾಗಿದ 'ಜಯಂತಿ'ಯನ್ನು ಅದರ ಸಂಸ್ಥಾಪಕರು ೧೯೪೧ರಲ್ಲಿ ಮುಚ್ಚುವ ತೀರ್ಮಾನಕ್ಕೆ ಬಂದರು. ಆದರೆ ಆಗಲೇ ಅದರೊಂದಿಗೆ ಕರುಳು ಬಾಂಧವ್ಯವನ್ನು ರೂಢಿಸಿಕೊಂಡಿದ್ದ ಆನಂದಕಂದರು ಅದನ್ನು ಮುಚ್ಚಲು ಬಿಡಲಿಲ್ಲ. ಅವರೇ ಅದನ್ನು ಪಾಲುಗಾರರ ಕೈಯಿಂದ ತೆಗೆದುಕೊಂಡು, ಸಂಪೂರ್ಣ ಮಾಲಿಕತ್ವ ಹಾಗೂ ಸಂಪಾದಕತ್ವದ ಜವಾಬ್ದಾರಿಯನ್ನು ವಹಿಸಿಕೊಂಡರು.

### ೩. 'ಜಯಂತಿ'ಯ ಧ್ಯೇಯೋದ್ದೇಶಗಳು ಹಾಗೂ ಸಾಧನೆ :

ಯಾವುದೇ ಒಳ್ಳೆಯ ಕೆಲಸಕ್ಕೂ ಅಡ್ಡಿ–ಆತಂಕ–ಆಕ್ಷೇಪಗಳು ಇದ್ದೇ ಇರುತ್ತವೆ. ಅಂಥ ಅಡಚಣೆಗಳೇ ಕಾರ್ಯ ಸಾಧನೆಯ ಸಂಕಲ್ಪವನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ. 'ಜಯಂತಿ' ಆರಂಭವಾದಾಗ 'ಜಯಕರ್ನಾಟಕ'ದಲ್ಲಿ ವ್ಯಕ್ತವಾದ ಆಕ್ಷೇಪದ ಅಭಿಪ್ರಾಯವಿದು. ಕನ್ನಡ ನಾಡು ಚಿಕ್ಕದು. ವಾಚನಾಭಿರುಚಿ ಕಡಿಮೆ. ಈ ಮೊದಲೆ ಹೊರಟ ಪತ್ರಿಕೆಗಳೂ ಸಾಕಷ್ಟಿವೆ. ಹೀಗಿರುವಾಗ 'ಜಯಂತಿ'ಯದೇನು ಅವಶ್ಯಕತೆ ಇದ್ದೀತು? ಈ ಆಕ್ಷೇಪವನ್ನು ಜಯಕರ್ನಾಟಕದಲ್ಲಿ ಪ್ರಸ್ತಾಪಿಸಿ ಈ ಆಕ್ಷೇಪಕ್ಕೆ ಸ್ವತಃ ಅದರ ಸಂಪಾದಕರು ಈ ರೀತಿ ಉತ್ತರ ಕೊಟ್ಟಿದ್ದಾರೆ. "ಜಯಂತಿಯ ಮೊದಲನೆಯ ಸಂಚಿಕೆಯನ್ನು ನೋಡಿದವರಿಗೆ ಕನ್ನಡ ನಾಡಿನ ಎಲ್ಲ ಗಣ್ಯ ಲೇಖಕರ ನೆರವು ಇದಕ್ಕಿದೆ."[೨೫] ಕನ್ನಡ ನಾಡಿನ ಮಹತ್ವದ ಲೇಖಕರೆಲ್ಲ ಜಯಂತಿಯನ್ನು ಸ್ವಾಗತಿಸಿದ್ದೂ ಅಲ್ಲದೆ ಜಯಂತಿಯಲ್ಲಿ ತಮ್ಮ ಬರಹಗಳು ಪ್ರಕಟಗೊಳ್ಳಬೇಕೆಂದು ಆಶಿಸಿದ್ದು ವಿಶೇಷ. ಕನ್ನಡದ ಗಣ್ಯ ಲೇಖಕರನ್ನು ಒಳಗೊಳ್ಳುವುದು ಹಾಗೂ ತರುಣ ಲೇಖಕರನ್ನು ಬೆಳೆಸುವುದು ಜಯಂತಿಯ ಮುಖ್ಯ ಗುರಿಗಳಲ್ಲೊಂದಾಗಿತ್ತು. ಆ ವಿಷಯದಲ್ಲಿ ಜಯಂತಿಯ ಸಾಧನೆಯನ್ನು ಮುಂದೆ ವಿವರಿಸಲಾಗುವುದು.

ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಬೆಳೆಸುವುದು ಕನ್ನಡ ನಾಡಿಗಾಗಿ ಕರ್ತವ್ಯ ನಿಷ್ಠೆಯಿಂದ ಕಾರ್ಯ ಮಾಡುವುದನ್ನು ಪ್ರೇರೇಪಿಸುವುದು 'ಜಯಂತಿ'ಯ ಮತ್ತೊಂದು ಗುರಿ. ಕನ್ನಡಿಗರ ಸ್ವಾಭಿಮಾನ ಶೂನ್ಯತೆಯನ್ನು ಹೋಗಲಾಡಿಸಿ ವೀರ ಕನ್ನಡತನವನ್ನು ಜಾಗೃತಗೊಳಿಸುವುದೂ ಇದೇ ಉದ್ದೇಶದ ಕಾರ್ಯವ್ಯಾಪ್ತಿಯಲ್ಲಿ ಸೇರುವಂತಹದು. ಕರ್ನಾಟಕದ ಇತಿಹಾಸ ಹಾಗೂ ಸಂಸ್ಕೃತಿ ಪರಂಪರೆಗಳ ಅರಿವನ್ನು ವ್ಯಾಪಕವಾಗಿ ಬಿಂಬಿಸುವ ಲೇಖನಗಳನ್ನು ಪ್ರಕಟಿಸುವುದು. ಆ ಮೂಲಕ ಕರ್ನಾಟಕದ ಏಕೀಕರಣದ ಒಲವುಗಳನ್ನೂ ಜನರಲ್ಲಿ ಮೂಡಿಸುವುದು, ಕನ್ನಡದ ಹಿತಾಸಕ್ತಿಗಳಿಗೆ ಕನ್ನಡಿಗರೇ ವಿರುದ್ಧವಾಗಿರುವುದನ್ನು ನಿಷ್ಠುರವಾಗಿ ಖಂಡಿಸಿ ರಾಜಕೀಯ ಅಧಿಕಾರಸ್ಥರಲ್ಲೂ ಆ ಕುರಿತು ಜಾಗೃತಿ ಮೂಡಿಸುವುದು, ಹೀಗೆ ಕನ್ನಡದ ಸಮಗ್ರ ಬೆಳವಣಿಗೆಗೆ ಪೂರಕವಾದ ಜೀವಂತ ಸಂಗತಿಗಳನ್ನು ಒಳಗೊಳ್ಳಲು

'ಜಯಂತಿ' ವೇದಿಕೆಯಾಗಬೇಕೆಂಬುದು ಬೆಟಗೇರಿಯವರ ವಿಶೇಷ ಆಸಕ್ತಿಯಾಗಿತ್ತು.

'ಕರ್ನಾಟಕದ ಬಗೆಗಿನ ಸ್ವಾಭಿಮಾನವು ರಾಷ್ಟ್ರೀಯತೆಗೆ ಮಾರಕವಲ್ಲ' ಎಂಬುದು ಆನಂದಕಂದರ ಜವಾಬ್ದಾರಿಯುತವಾದ ನಿಲುವಾಗಿತ್ತು. ಕರ್ನಾಟಕ ಏಕೀಕರಣದಷ್ಟೇ ಅಥವಾ ಅದಕ್ಕಿಂತ ಮಿಗಿಲಾಗಿ ಆನಂದಕಂದರು ರಾಷ್ಟ್ರೀಯತೆಯ, ರಾಷ್ಟ್ರ ಸ್ವಾತಂತ್ರ್ಯದ ಪ್ರತಿಪಾದಕರಾಗಿದ್ದರು. 'ನಾಲ್ಕೂ ನಿಟ್ಟಿನ ನೋಟ'ವೆಂಬ ಸ್ಥಿರ ಶೀರ್ಷಿಕೆ ಅಖಿಲ ಭಾರತ ಮಟ್ಟದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಬೆಂಬಲಕ್ಕೆ ಮೀಸಲಾಗಿತ್ತು. ಮಂಗನ ಮಲ್ಲಿನಾಥದ ಲೇಖನಗಳು ದೇಶದ ಹಿರಿಯ ದುರೀಣರ ಮಾರಕ ಧೋರಣೆಗಳ ವಿಡಂಬನೆಗೆ ಮೀಸಲಾಗಿತ್ತು. "ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆದ ದೇಶದ ಆಂದೋಲನದ ವಿವರಗಳನ್ನು ಕನ್ನಡದಲ್ಲಿ ಪ್ರಥಮ ಬಾರಿಗೆ ಪ್ರಕಟಿಸುವ ಎದೆಗಾರಿಕೆ ತೋರಿದವರು ಶ್ರೀ ಬೆಟಗೇರಿ ಅವರೇ."[೩೯]

ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳ ಅತ್ಯುತ್ತಮ ಬರಹಗಳನ್ನು, ಆ ಕುರಿತು ವಿಮರ್ಶೆಗಳನ್ನು ಪ್ರಕಟಿಸುವುದು ಪತ್ರಿಕೆಯ ಮಹತ್ವದ ಗುರಿಯಾಗಿತ್ತು. ವೈಚಾರಿಕ ಲೇಖನಗಳೂ ಪ್ರಗತಿಪರ ಚಿಂತನೆಗಳಿಗೆ ಅವಕಾಶ ಕೊಡುತ್ತಿದ್ದ ಬೆಟಗೇರಿಯವರು. ಸಂಶೋಧನೆ ಹಾಗೂ ಜನಪದ ಸಾಹಿತ್ಯದ ಅಧ್ಯಯನಗಳಿಗೂ ಅವಕಾಶವನ್ನು ಕಲ್ಪಿಸುವುದು ಪತ್ರಿಕೆಯ ಮೂಲ ಉದ್ದೇಶವೆಂದೇ ಭಾವಿಸಿದ್ದರು. ಉದಯೋನ್ಮುಖರ ಲೇಖನಗಳನ್ನು ಅವರ ಫೋಟೋ ಸಮೇತ ಪ್ರಕಟಿಸಿ ಅವರಿಗೆ ಪ್ರೋತ್ಸಾಹ ನೀಡುವುದರ ಹಿಂದೆ ಬೆಟಗೇರಿಯವರ ವಿಶೇಷ ಕಾಳಜಿ ಇತ್ತು. ಸೌ.ಎಸ್.ಆರ್. ಜಯಲಕ್ಷ್ಮೀ (ಬೆಂಗಳೂರು) ಹಾಗೂ ಸೌ.ಟಿ.ವಿ.ಎಂ.ಸರ್ವಾ (ಬಳ್ಳಾರಿ)ಯವರ ಪರಿಚಯ ಮಾಡಿಕೊಟ್ಟು ಮೊದಲ ವರ್ಷದಲ್ಲಿಯೇ ಮಹಿಳಾ ಬರಹಗಾರರಿಗೆ ಪ್ರಾಶಸ್ತ್ಯ ನೀಡುವುದು ಕೂಡ ಪತ್ರಿಕೆಯ ಮಹತ್ವದ ಗುರಿ ಎಂಬುದಕ್ಕೆ ಒತ್ತು ನೀಡಿತು.

ಶೈಕ್ಷಣಿಕ ವಿಷಯಗಳನ್ನು ಕುರಿತು ಪ್ರಚಾರ ಮಾಡಿ ಆ ವಿಷಯದಲ್ಲಿ ಹೊಸ ಜಾಗೃತಿ ಮೂಡಿಸುವುದು ಬೆಟಗೇರಿಯವರ ಗುರಿಯಾಗಿತ್ತು. ಆ ಕುರಿತು ವಿಶೇಷ ಲೇಖನಗಳನ್ನು ಪ್ರಕಟಿಸುವ ಮೂಲಕ ತಮ್ಮ ಕಾಳಜಿಯನ್ನು ತೋರಿದ್ದಾರೆ. ಅಶನಕ್ಕಾಗಿ ಅಕ್ಷರ ಶಿಕ್ಷಣ, ಅಶನವಲ್ಲದೆ ಅಕ್ಷರ ವಿದ್ಯೆಯೇ ಎಂಬ ಲೇಖನಗಳನ್ನು ಕ್ರಮವಾಗಿ ಹಳಪೇಟೆ ಚಿಂತಾಮಣಿಯವರು ಹಾಗೂ ವಿಶ್ವನಾಥ ಹೆಗಡೆಯವರು ಬರೆದದ್ದು ವಿಶೇಷ. ವೈಜ್ಞಾನಿಕ ಲೇಖನಗಳಿಗೆ, ಚಲನಚಿತ್ರ ಕುರಿತಾದ ವಿಮರ್ಶಾತ್ಮಕ

---

೩೯. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೧೨೩

ಲೇಖನಗಳಿಗೆ ಅವಕಾಶ ಕೊಡುವುದೂ ಪತ್ರಿಕೆಯ ಗುರಿಯಾಗಿತ್ತು. ಮಹತ್ವದ ಸಾಧಕರ ವ್ಯಕ್ತಿ ಪರಿಚಯಗಳು ಪತ್ರಿಕೆಯ ಇನ್ನೊಂದು ಮುಖ. ಕನ್ನಡ ನಾಡಿನ ಹಾಗೂ ಭಾರತದ ಪ್ರವಾಸಯೋಗ್ಯ ಸ್ಥಳಗಳ ಕುರಿತು ಲೇಖನಗಳಿಗೂ ಅವಕಾಶವಿತ್ತು.

ಹೊಸಗನ್ನಡದ ಕವಿತೆ, ಕಥೆಗಳ ಜತೆಗೆ ಜನಪದ ಹಾಡು, ಕಥೆಗಳು ಪ್ರಕಟವಾಗುವಂತೆ ನೋಡಿಕೊಂಡದ್ದು ಜಾನಪದ ಸಂಗ್ರಹ ಹಾಗೂ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ್ದಾಗಿತ್ತು. ಸಾಮಾಜಿಕನ ಸಂವಚನಗಳು ವಚನದ ಪ್ರಕಾರವನ್ನು ಪ್ರಯೋಗಿಸುವವರಿಗೆ ಮಾದರಿಯನ್ನೊದಗಿಸುವಂತಿದೆ. ಹಳಗನ್ನಡ ಕಾವ್ಯ ಕೃತಿಗಳಿಗೆ ಕವಿಗಳಿಗೆ ಸಂಬಂಧಪಟ್ಟ ಸಂಶೋಧನೆಗಳಿಗೂ ಅವಕಾಶವಿತ್ತು. ಭಾರತದ ಸೋದರ ಭಾಷೆಗಳ ಹಾಗೂ ಅಂತರರಾಷ್ಟ್ರೀಯ ಮಟ್ಟದ ಪತ್ರಿಕೋದ್ಯಮದ ಕುರಿತು ಲೇಖನಗಳನ್ನು ಪ್ರಕಟಿಸಿದ್ದು ವಿಶೇಷ.

ಸಣ್ಣ ಕಥೆಗಳ ಸ್ಪರ್ಧೆ ವಿರ್ಪಡಿಸಿ ಮಹತ್ವದ ಕಥೆಗಾರರನ್ನು ಬೆಳಕಿಗೆ ತರುವಲ್ಲಿ 'ಜಯಂತಿ'ಯ ಪಾತ್ರ ಮಹತ್ವದ್ದು. ಮೊದಲ ಸಲದ ಸ್ಪರ್ಧೆ ೧೯೪೧ರಲ್ಲಿ ನಡೆದಿದ್ದು ಹದಿನೈದು ವರ್ಷದ ಯುವತಿ ದೇವಾಂಗನಾ ಶಾಸ್ತ್ರೀಯವರ 'ವೇಣಿ ಸಂಹಾರ' ಕಥೆ ಮೊದಲ ಬಹುಮಾನ ಪಡೆದದ್ದು ಗಮನಾರ್ಹ ಸಂಗತಿ. ಮಿರ್ಜಿ ಅಣ್ಣಾರಾಯರು, ಬೀಚಿಯವರು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ವಿಶೇಷ ಸಂಗತಿಯಾಗಿದ್ದು, ಮೆಚ್ಚುಗೆ ಪಡೆದ ಕಥೆಗಳಾಗಿ ಅವು ಜಯಂತಿಯಲ್ಲಿ ಪ್ರಕಟವಾದವು. ಭಾರತಿಸುತ. ಬೇಂದ್ರೆ, ಕೃಷ್ಣರಾಯರು ಭಾಗವಹಿಸಿ ಬಹುಮಾನ ಪಡೆದಿದ್ದರು. 'ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ' ಎಂಬುದು ಸಾಹಿತ್ಯದ ಯಾವುದಾದರೂ ಪ್ರಕಾರ ಕುರಿತು ವಿಮರ್ಶೆ ಬರೆಯುವ ಸ್ಪರ್ಧಾತ್ಮಕ ಸ್ಥಿರ ಶೀರ್ಷಿಕೆಯನ್ನು ಆರಂಭಿಸಿ ಆಯ್ಕೆಯಾದವುಗಳನ್ನು ಅದರಲ್ಲಿ ಪ್ರಕಟಿಸುತ್ತ ಬಂದರು. ಇದು ವಾಸ್ತವವಾದಿ ವಿಮರ್ಶೆಯ ನೆಲೆಗಳನ್ನು ಭದ್ರಗೊಳಿಸಲು ಸಹಕಾರಿಯಾಯಿತು.

ಇಪ್ಪತ್ಮೂರು ವರ್ಷಗಳಲ್ಲಿ 'ಜಯಂತಿ' ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖಕರ ಬಳಗ ಬಹಳ ದೊಡ್ಡದು. ಆಧುನಿಕ ಕನ್ನಡ ಸಾಹಿತ್ಯದ ಭಿನ್ನ ತಲೆಮಾರುಗಳ ಪ್ರಮುಖ ಲೇಖಕರು ಇದರಲ್ಲಿ ಭಾಗಿಗಳಾಗಿದ್ದಾರೆ. ಈ ಶತಮಾನದ ಕನ್ನಡ ಸಾಹಿತ್ಯದ ಒಂದು ಕಾಲಘಟ್ಟದ ಚರಿತ್ರೆಯ ಹೆಜ್ಜೆ ಗುರುತುಗಳು ಮಾತ್ರವಲ್ಲ ಕನ್ನಡದ ಮೂಲಕ ರೂಪು ತಳೆದ ನಾಡಿನ ದೇಶದ ಜನಜೀವನದ ಚರಿತ್ರೆಯ ಮಹತ್ವದ ದಾಖಲೆಯಾಗಿಯೂ ಜಯಂತಿಯ ಪಾತ್ರ ಮಹತ್ವದ್ದು. ಮುಂದಿನ ಕಾಲಘಟ್ಟದ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮಹತ್ವದ ತಳಹದಿಯನ್ನು ಒದಗಿಸಿದ ಕೀರ್ತಿಗೂ 'ಜಯಂತಿ' ಭಾಜನ. 'ಜಯಂತಿ'ಯ ಬರಹಗಾರರ ಬಳಗವನ್ನು ನೋಡಿದರೆ ಈ ಸಂಗತಿ ಮನದಟ್ಟಾಗಬಲ್ಲದು. ಈ ಶತಮಾನದಲ್ಲಿ ಶಿಖರ

ಪ್ರಾಯವೆನಿಸಿದ ಲೇಖಕರಲ್ಲಿ ಕೆಲವರನ್ನಿಲ್ಲಿ ನಮೂದಿಸಲಾಗಿದೆ. ಕೊಡಗಿನ ಗೌರಮ್ಮ, ಶ್ರೀರಂಗ, ಅನಕೃ, ದ.ರಾ.ಬೇಂದ್ರೆ, ಪಂಡಿತ ತಾರಾನಾಥ, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ವಿ.ಕೃ.ಗೋಕಾಕ, ದಿನಕರ ದೇಸಾಯಿ, ವ್ಹಿ.ಎಂ.ಇನಾಮದಾರ, ಶಿವರಾಮ ಕಾರಂತ, ಶಂಬಾ ಜೋಶಿ, ಗೋಪಾಲಕೃಷ್ಣ ಅಡಿಗ, ಎಸ್.ಆರ್.ಮಳಗಿ, ದೊರೆಸ್ವಾಮಿ ಅಯ್ಯಂಗಾರ, ಎಂ.ವಿ.ಸೀ., ಶೀನಂಶ್ರೀ, ಸಾಶಿನ, ರಂ.ಶ್ರೀ ಮುಗಳಿ, ಬಸವರಾಜ ಕಟ್ಟೀಮನಿ, ಮುಳಿಯ ತಿಮ್ಮಪ್ಪಯ್ಯ, ಸರೋಜಿನಿ ಮಹಿಷಿ, ಎಂ.ಕೆ.ಜಯಲಕ್ಷ್ಮಿ, ಮಾಸ್ತಿ, ಕೃಷ್ಣಮೂರ್ತಿ ಪುರಾಣಿಕ, ಎಸ್.ಕೆ.ಕುಲಕರ್ಣಿ, ಆರ್.ಸಿ.ಹಿರೇಮಠ ಹೀಗೆ ಈ ಪಟ್ಟಿ ಇನ್ನೂ ವಿಸ್ತಾರವಾಗಿದ್ದು ಎಲ್ಲರನ್ನೂ ಹೆಸರಿಸುವುದು ಸಾಧ್ಯವಾಗದು.

ಬೆಟಗೇರಿಯವರ ಸಂಪಾದಕೀಯ ಬರಹಗಳು ಪತ್ರಿಕೆಯ ಘನತೆಯನ್ನು ಹೆಚ್ಚಿಸಿರುವುದು ಅಲ್ಲದೆ ಅವರ ಚಿಂತನೆಗಳ ಆಳ-ವಿಸ್ತಾರಗಳನ್ನು ಹೇಳುವಂತಿವೆ. ಆ ಕುರಿತು ಈ ಉಲ್ಲೇಖ ಗಮನಾರ್ಹ. "ಜಯಂತಿಯ ಉದಯ ಕಾಲದಿಂದ ಅವರ ಅಂತ್ಯದವರೆಗಿನ ಇಪ್ಪತ್ತೆಂಟು ವರ್ಷಗಳ ಕಾಲಾವಧಿ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಾಗೂ ನಾಡಿನ ಇತಿಹಾಸದಲ್ಲಿ ಮಹತ್ವಪೂರ್ಣದ್ದಾಗಿದೆ. ರಾಜಕೀಯ ಸ್ವಾತಂತ್ರ್ಯಾಂದೋಲನ, ಜಾಗತಿಕ ದ್ವಿತೀಯ ಮಹಾಯುದ್ಧ, ದೇಶದ ಸ್ವಾತಂತ್ರ್ಯ ಸಾಧನೆ, ಭಾಷಾನುಗುಣ ಪ್ರಾಂತ ರಚನೆ, ನಾಡಿನ ಹಿರಿಯ ಧುರೀಣರಾದ ಗಾಂಧೀಜಿ, ವಲ್ಲಭಭಾಯಿ ಪಟೇಲ ಮುಂತಾದವರ ವಿಯೋಗ ಈ ಎಲ್ಲ ಘಟನೆಗಳು ಹಾಗೂ ದೇಶವಿಭಜನೆ, ಸಂಸ್ಥಾನಗಳ ವಿಲಿನೀಕರಣದಂತಹ ಸಮಸ್ಯೆಗಳು ಈ ಕಾಲಾವಧಿಯಲ್ಲಿಯೇ ನಡೆದು ಹೋದವು. ದೇಶದ ಜನತೆಯ ಬದುಕಿನ ಮೇಲೆ ಹಾಗೂ ಆ ಬದುಕಿಗೆ ಸಂಬಂಧವುಳ್ಳ ಸಾಹಿತ್ಯ ಪ್ರಪಂಚದ ಮೇಲೆ ಈ ಎಲ್ಲ ಘಟನೆಗಳು ಪ್ರಭಾವ ಬೀರಿರುವುದು ಸಹಜ. ಕನ್ನಡದ ಮಣ್ಣಿನ ಮಗನಾಗಿ ಶ್ರೀ ಬೆಟಗೇರಿ ಅವರು ಈ ಹೊಸ ಕಾಲದ ಕ್ರಾಂತಿಕಾರಕ ಘಟನೆಗಳಲ್ಲಿ ಭಾಗವಹಿಸಿ ಜಯಂತಿಯಲ್ಲಿ ಸಂಪಾದಕೀಯ ಲೇಖನಗಳನ್ನು ನಿರ್ಭೀತರಾಗಿ, ಯಾವ ಆಮಿಷಕ್ಕೆ ಒಳಗಾಗದೆ ಬರೆದಿರುವುದರಿಂದ ಅವರು ಬರೆದ ಎಲ್ಲ ಸಂಪಾದಕೀಯ ಲೇಖನಗಳಿಗೆ ಚಾರಿತ್ರಿಕ ಮಹತ್ವವಿದೆ ಎಂಬುದು ನಿರ್ವಿವಾದವಾದದ್ದು. ಅವರ ಸಂಪಾದಕೀಯ ಬರವಣಿಗೆಗಳಲ್ಲಿ ಸಮಕಾಲೀನ ಎಲ್ಲ ಘಟನೆಗಳಿಗೆ ಕನ್ನಡದ ಪ್ರತಿಕ್ರಿಯೆ ಏನೆಂಬುದು ಕಂಡುಬರುತ್ತದೆ. ಅವರ ಎಲ್ಲ ಸಂಪಾದಕೀಯ ಬರಹಗಳನ್ನು ಒಂದೆಡೆ ಸಂಕಲಿಸಿ ಪ್ರಕಟಿಸಿದರೆ ಕನ್ನಡಿಗರಿಗೆ ಅದೊಂದು ಅಮೂಲ್ಯ ಸಾಂದರ್ಭಿಕ ಚಾರಿತ್ರಿಕ ದಾಖಲೆಯ ಗ್ರಂಥವಾಗುವುದೆಂಬುದು ಸಂದೇಹವಿಲ್ಲದ ಮಾತು."[೪೦]

೪೦. ಆನಂದಕಂದ- ಕವಿ, ಕಾವ್ಯ ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು. ೯೧

“ಕನ್ನಡ ಸಾಹಿತ್ಯವನ್ನು ಸಿರಿವಂತವಾಗಿಸಿದ ನಾಡು–ನುಡಿಯ ರಕ್ಷಣೆಗೈದ ‘ಜಯಂತಿಯ’ನ್ನು ‘ಕನ್ನಡ ಮಾಸಪತ್ರಿಕೆಗಳ ಮುಕುಟಮಣಿಯೆಂದು ಭಾವಿಸಿ ಅತ್ಯಂತ ಪ್ರೇಮಾದರಗಳಿಂದ ಬಿಡದಲೆ... ಅದರ ಅಭಿಮಾನಿ ಓದುಗರು ಓದುತ್ತಿದ್ದರು. ಜಯ ಕರ್ನಾಟಕದ ಮಟ್ಟಕ್ಕೆ ಬಂದ ಕನ್ನಡ ಮಾಸಪತ್ರಿಕೆಗಳ ಆದರ್ಶ ಇದೀಗ ಮತ್ತು ಮುಂದುವರಿದು ‘ಜಯಂತಿ’ಯ ರೂಪಕ್ಕೆ ಬಂದಿದೆ. ಸಂದರ್ಭೋಚಿತವಾದ ಭಾವಚಿತ್ರ, ವ್ಯಂಗ್ಯಚಿತ್ರಗಳನ್ನು ಕನ್ನಡಿಗರಿಂದಲೇ ಬರೆಯಿಸಿ ಪ್ರಕಟಿಸುವುದು ದೊಡ್ಡ ಸಾಹಸವೇ ಆಗಿದ್ದು, ಕನ್ನಡಿಗರಲ್ಲಿ ಸುಪ್ತವಾಗಿದ್ದ ಶಿಲ್ಪಕಲೆ, ಚಿತ್ರಕಲೆಗಳನ್ನೂ ಬೆಳಕಿಗೆ ತರುವ ಈ ಯೋಜನೆ ಪ್ರಸಂಶನೀಯವೂ ಆಗಿದೆ. ಒಟ್ಟಿನಲ್ಲಿ ಸಾಹಿತ್ಯ ಪ್ರಿಯರಾದ ರಸಿಕರಿಗೂ, ಚರ್ಚಾಪ್ರಿಯರಾದ ವಿಮರ್ಶಕರಿಗೂ ರಾಜಕಾರಣಪ್ರಿಯ ರಾಷ್ಟ್ರೀಯರಿಗೂ ಸಮನಾಗಿಯೇ ಈ ಪತ್ರಿಕೆ ವಾಚನೀಯವಾಗಿದೆ ಎಂದು ಸಹ ಪತ್ರಿಕೆಗಳು ‘ಜಯಂತಿ’ಯನ್ನು ಕೊಂಡಾಡಿದವು. ‘ಜಯಂತಿ’ ತಿಂಗಳು ತಿಂಗಳಿಗೂ ಚೆನ್ನಾಗುತ್ತಿದೆ. ಆಗದೆ ಏನು? ತಮ್ಮಂತಹ ಕರ್ತೃತ್ವಶಾಲಿಗಳೂ ನುರಿತ ಬರಹಗಾರರೂ, ಜನರ ಉತ್ಸಾಹ ಶ್ರದ್ಧೆಗಳೂ ಇರುವಾಗ ಚೆನ್ನಾಗದೆ ಏನು? ಎಂದು ಶ್ರೀ ವಿ.ಸೀತಾರಾಮಯ್ಯನವರಂತಹ ಪ್ರತಿಭಾನ್ವಿತ ವಿದ್ವಾಂಸರು ಹಾಡಿ ಹರಿಸಿದರು. ಇಷ್ಟೆಲ್ಲ ಅಗ್ಗಳಿಕೆಯುಳ್ಳ ಈ ಪತ್ರಿಕೆ ಮತ್ತು ಅದರ ಸಂಪಾದಕರ ಆರ್ಥಿಕ ಸಂಕಷ್ಟಗಳ ಬಗೆಗೆ ಕನ್ನಡಿಗರು ಚಿಂತಿಸದೆ ಉಳಿದುದು ಕನ್ನಡ ನಾಡಿಗೇ ನಷ್ಟವನ್ನು ತಂದಿತೆಂದರೆ ತಪ್ಪಾಗಲಿಕ್ಕಿಲ್ಲ. ಪ್ರತಿವರ್ಷವೂ ಅದರ ಸಂಪಾದಕರು ‘ಜಯಂತಿ’ಯ ಆರ್ಥಿಕ ಋಣವನ್ನು ಹೊತ್ತು ನಡೆದರು.”[೪೧] ಯಾವುದೇ ಸಾರ್ವಜನಿಕ ನಿಧಿಯ ಸಹಕಾರವಾಗಲಿ, ಸ್ಥಿತಿವಂತರ ಸಹಾಯವಾಗಲಿ ಒದಗದೆ ಹೆಂಡತಿಯ ಆಭರಣಗಳನ್ನು ಮಾರಿ ಪತ್ರಿಕೆ ಬದುಕಿಸಲು ಹೆಣಗಿದ್ದು ಅವರ ತತ್ವ–ಆದರ್ಶಗಳ ನಿಷ್ಠೆ ಬದ್ಧತೆಯ ಸಂಕೇತವೆನ್ನಬಹುದು. ಈ ಬದ್ಧತೆ ಕುಟುಂಬ ನಿರ್ವಹಣೆಗೂ ಸಾಲದ ಆರ್ಥಿಕ ಸ್ಥಿತಿಯಲ್ಲಿ ಹೆಂಡತಿಯ ಮಾರಣಾಂತಿಕ ಕಾಯಿಲೆಯ ದುರವಸ್ಥೆಯ ಸಂದರ್ಭದಲ್ಲಿ ಪಾಲಿಸಿಕೊಂಡು ಬಂದದ್ದು ಎಂಬುದು ಆನಂದಕಂದರ ವೀರತ್ವವನ್ನು ತೋರುತ್ತದೆ. ಹದಿನಾಲ್ಕು ಸಾವಿರಕ್ಕೂ ಹೆಚ್ಚಿನ ಸಾಲದ ಹೊರೆಯನ್ನು ಹೊತ್ತುಕೊಂಡು ಅತ್ಯಂತ ನೋವಿನಿಂದ ಈ ಪತ್ರಿಕೆಯನ್ನು ನಿಲ್ಲಿಸುವ ಯೋಚನೆ ಮಾಡುತ್ತಾರೆ ಆನಂದಕಂದರು. ಜನಕ್ಕೆ ಇದರ ಅವಶ್ಯಕತೆ ಇಲ್ಲ ಹಾಗೂ ದೈನ್ಯದಿಂದ ಬೇಡುವ ಯಾಚಕ ವೃತ್ತಿ ತಮ್ಮ ಸ್ವಭಾವಕ್ಕೆ ಒಗ್ಗುವಂತಹದಲ್ಲ ಎಂಬ ನಿಲುವಿನೊಂದಿಗೆ ಆನಂದಕಂದರು ಪತ್ರಿಕೆಯನ್ನು ನಿಲ್ಲಿಸಬೇಕೆಂದಿರುವಾಗ ಶ್ರೀ ಮೊಹರೆ

---

೪೧. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೧೫

ಹನುಮಂತರಾಯರು ಉದಾರವಾಗಿ ಪುಕ್ಕಟ್ಟೆಯಾಗಿ ಕಾಗದ ಒದಗಿಸಿದ್ದರಿಂದ ಜಯಂತಿ ಎರಡು ವರ್ಷ ಮುಂದಕ್ಕೆ ಸಾಗಿತು. ೧೯೬೦ರಲ್ಲಿ ಪತ್ರಿಕೆ ಅನಿವಾರ್ಯವಾಗಿ ನಿಲ್ಲಬೇಕಾಯಿತು.

ಇಪ್ಪತ್ತೆರಡು ವರುಷ ನಡೆದ ಈ ಪತ್ರಿಕೆಯ ಸಂಪಾದಕರಾಗಿ ಆನಂದಕಂದರು ಪತ್ರಿಕೆಯ ಅನೇಕ ಶೀರ್ಷಿಕೆಗಳನ್ನು ಸಂದರ್ಭ ಬಂದಾಗ ತಾವೇ ತುಂಬಿಸುತ್ತಿದ್ದರು. ಅಗಲ್ಲಿ ಅವರು ಬೇರೆ ಬೇರೆ ಲೇಖನಿಯ ಹೆಸರುಗಳನ್ನು ಬಳಸಿಕೊಂಡು ಆ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಚಾಡಿಯ ಚಾಣಕ್ಯ, ಜಯಂತಿಯ ಜೇನ್ನೊಣ, ಸೊಂತದ ಸುದ್ದೆಪ್ಪ, ಸಾಹಿತ್ಯ ಸಂಜಯ, ಕುಂಜ ವಿಹಾರಿ, ವಿಹಾರಿ, ಗುಡದಪ್ಪ, ರಾಯರ ಅಪ್ಪಾಜಿ, ಸ್ನೇಹ ಗಂಭೀರು, ಗುಡದೂರಿನ ಶಾಖಾಮೃಗೇಂದ್ರ, ನಕಲಿಯ ನಾರಾಯಣಾಚಾರ್ಯ, ಬಿ.ಪಿ.ಎಸ್.ರಾವ, ಬೆಟಗೇರಿ ಪಾರ್ಥಸಾರಥಿರಾವ್, ಕೃಷ್ಣ ಕಿಂಕರ, ವಿಹಂಗಮ, ಬೆ.ಕೃ.ಶ, ಸಾಮಾಜಿಕ, ನಿರೀಕ್ಷಕ, ಶ್ರೀ ಮಲ್ಲಿನಾಥ, ಹೀಗೆ ಭಿನ್ನ ವಿಷಯಗಳಿಗೆ ತಕ್ಕಂತೆ ಸೂಕ್ತ ಹೆಸರುಗಳನ್ನು ಬಳಸಿ ತಮ್ಮ ಅನುಭವದ ವಿವಿಧ ಮುಖಗಳನ್ನು ತೋರಿರುವ ಆನಂದಕಂದರು ಪರಿಪಕ್ವ ಅನುಭವಗಳ ಮೂಲಕ ಇನ್ನು ಜಯಂತಿಯನ್ನು ನಡೆಸುವಂತಾಗಿದ್ದರೆ ಅದರ ಲಾಭ ಕನ್ನಡ ನಾಡಿಗೆ ಅನೇಕ ವಿಧದಲ್ಲಿ ತಟ್ಟುತ್ತಿತ್ತು. ಅಂದ ಮಾತ್ರಕ್ಕೆ ಅಲ್ಲಿಯವರೆಗೆ ಮಾಡಿದ ಅವರ ಸಾಧನೆ ಯಾವ ವಿಧದಲ್ಲೂ ಕಡಿಮೆಯದೆಂದಲ್ಲ.

ಇಂಥದೇ ತ್ಯಾಗಪೂರ್ಣ ಬದುಕನ್ನು ಬದುಕಿ ಗುಣ ಪ್ರಮಾಣಗಳೆರಡರಲ್ಲೂ ಅದ್ಭುತ ಸಾಧನೆ ಮಾಡಿರುವ ಕನ್ನಡಿಗರ ದಿವ್ಯ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಇನ್ನೊಬ್ಬ ಗಣ್ಯ ಸಾಹಿತಿ ಮಿರ್ಜಿ ಅಣ್ಣಾರಾಯರು ಬೆಟಗೇರಿಯವರನ್ನು ಕುರಿತು ಹೇಳಿರುವ ಮಾತುಗಳು ಕನ್ನಡದ ಬಗೆಗೆ ಅಭಿಮಾನ ಇರುವ ಯಾರಿಗಾದರೂ ಮೆಚ್ಚುಗೆಯಾಗುವಂತಿವೆ. "ಹೊಸಗನ್ನಡ ಸಾಹಿತ್ಯದ ಇತಿಹಾಸದಲ್ಲಿ ಶ್ರೀ ಆನಂದಕಂದರಿಗೆ ಒಂದು ಗೌರವದ ಸ್ಥಾನವಿದೆ. ಅದು ಹಲವು ಜನ ಲೇಖಕರಿಗೆ ಸ್ವಾಭಾವಿಕವಾಗಿ ಲಭಿಸುವ ಗಣ್ಯಸ್ಥಾನದಂತಹದಲ್ಲ. ಬಹುಜನರಿಗೆ ಇರದಂಥ ಕನ್ನಡ ನಾಡಿನಲ್ಲಿ ಒಂದಿಬ್ಬರು ಮಾತ್ರ ಸಂಪಾದಿಸಿದಂಥ ವಿಶಿಷ್ಟವಾದ ಗೌರವದ ಸ್ಥಾನವಿದೆ. ಮೈಸೂರಿನ ಕಡೆಗೆ ಹೊಸಗನ್ನಡದ ಶ್ರೀಕಾರವನ್ನು ಹಾಕಿದ 'ಶ್ರೀ'ಯವರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವೃತ್ತಿಯಲ್ಲಿದ್ದು, ಹಲವು ಜನ ಕನ್ನಡ ಲೇಖಕರನ್ನು ರೂಪಿಸಿದರು. ಅವರ ವೃತ್ತಿಯು ಅವರಿಗೆ ಬೆಂಬಲವಾಗಿ ನಿಂತಿತು. ಇಂಥ ಯಾವ ಸ್ಥಾನಬಲ, ವಿದ್ಯಾಲಯದ ಬೆಂಬಲಗಳಿಲ್ಲದೆಯೂ ಸಹ ಹಲವು ಜನ ಲೇಖಕರಿಗೆ ಗುರುಗಳಾಗಿ ಬಾಳಿದರು ಆನಂದಕಂದರು. ತಮ್ಮ ಜಯಂತಿ ಮಾಸ ಪತ್ರಿಕೆಯ ಮುಖಾಂತರ ಹಲವು ಜನ ಕನ್ನಡ ಯುವಕರ ಲೇಖನ ಕಲೆಯನ್ನು

ಕುದುರಿಸಿದರು; ಅನೇಕರನ್ನು ಬೆಳಕಿಗೆ ತಂದರು. ಈ ಸೇವೆಯಿಂದ ಕನ್ನಡ ಸಾಹಿತ್ಯೇತಿಹಾಸದಲ್ಲಿ ಆನಂದಕಂದರಿಗೆ ಒಂದು ಅಪೂರ್ವವಾದ ಸ್ಥಾನವಿದೆ."[೪೨] 'ಕನ್ನಡಪ್ರಭ' ದಿನಪತ್ರಿಕೆಯ 'ಸಾಹಿತ್ಯ ಸಲ್ಲಾಪ' ವಿಭಾಗದಲ್ಲಿ ಡಾ.ಹಾ.ಮಾ.ನಾಯಕ ಅವರು ಬರೆದ ಈ ಮಾತುಗಳು 'ಜಯಂತಿ' ಹಾಗೂ ಬೆಟಗೇರಿಯವರ ಮಹತ್ವ ಹಿರಿಮೆಗಳನ್ನು ವಸ್ತುನಿಷ್ಠವಾಗಿ ದಾಖಲಿಸುವಂತಿವೆ. "ಬಣ್ಣ ಬಣ್ಣದ ಪತ್ರಿಕೆಗಳು ಇಂದು ಬೇಕಾದಷ್ಟಿರಬಹುದು. ಆದರೆ ಜಯಂತಿಯ ಮಟ್ಟಕ್ಕೆ ಬರುವಂಥ ಪತ್ರಿಕೆಯೊಂದೂ ಇಲ್ಲದಿರುವುದು ಇಂದಿನ ಕನ್ನಡ ಪತ್ರಿಕೋದ್ಯಮದ ಬಡತನವನ್ನೂ ಶ್ರೀ ಬೇಟಗೇರಿ ಅವರ ಹಿರಿಮೆಯನ್ನೂ ಸೂಚಿಸುತ್ತದೆ."

ಕನ್ನಡ ಸಾಹಿತ್ಯ--ಸಂಸ್ಕೃತಿ ನಾಡು – ನುಡಿಗಳ ಅಭಿಮಾನ ಇವೇ ಮೊದಲಾದ ವಿಷಯಗಳಲ್ಲಿ ಸಂಪೂರ್ಣ  ನಿಷ್ಠೆಯಿಂದ ದುಡಿದು ಕನ್ನಡ ಕಟ್ಟುವ ಆ ಮೂಲಕ ರಾಷ್ಟ್ರೀಯತೆ ಹಾಗೂ ಮಾನವೀಯತೆಗಳ ಪರಮಗುರಿಯ ಕಡೆಗೆ ಸಾಗಿದ ಜಯಂತಿಯ ಈ ಸಾಹಸಯಾತ್ರೆಯ ಹಿಂದಿನ ಆನಂದಕಂದರ ತಾತ್ತ್ವಿಕ ಭೂಮಿಕೆಯ ಮಾತುಗಳೊಂದಿಗೆ ಈ ಅಧ್ಯಾಯವನ್ನು ಮುಗಿಸಬಹುದು. ಪತ್ರಿಕಾ ಸಂಪಾದಕನ ವ್ಯವಸಾಯವೆಂದರೆ ಅದೊಂದು ಸಾಮಾಜಿಕ ಸಂಸ್ಕೃತಿಯ ಶಿಕ್ಷಣದ ವ್ಯವಸಾಯ. ಸಮಾಜದ ಘಟಕಗಳಾದ ವ್ಯಕ್ತಿವ್ಯಕ್ತಿಗಳಿಗೆಲ್ಲ ನಿಜವಾದ ಜ್ಞಾನ ವಿಜ್ಞಾನದ ಪರಿಚಯ ಮಾಡಿಕೊಟ್ಟು ಅವರ ಮನಸ್ಸು, ಹೃದಯಗಳನ್ನು ಆದರ್ಶದತ್ತ ತಿರುಗಿಸುವುದು ಆತನ ಕರ್ತವ್ಯ. ತ್ಯಾಗ, ತಪಸ್ಸು, ತಿಳುವಳಿಕೆಗಳೇ ವ್ಯಕ್ತಿಯ ಆದರ್ಶದ ಸಾಧನಗಳೆಂಬುದನ್ನು ಉತ್ಕಟ ಭಾವನೆಯಿಂದ ಪ್ರಚಾರ ಮಾಡುವವನೇ ನಿಜವಾದ ಸಂಪಾದಕ.

## ೪. ದೇಶ ಸೇವೆ–ರಾಷ್ಟ್ರೀಯತೆಯ ವಿಶಾಲ ಭೂಮಿಕೆ :

ಇಪ್ಪತ್ತನೆಯ ಶತಮಾನದ ಪೂರ್ವಾರ್ಧ ಎರಡು ಮಹಾಯುದ್ಧಗಳನ್ನು ಕಂಡಿದೆ. ಅದೇ ಅವಧಿಯಲ್ಲಿ ರಾಷ್ಟ್ರೀಯತೆ ಇನ್ನಷ್ಟು ಪ್ರಖರ ನೆಲೆಯಾಗಿ ಆಕಾರ ತಳೆಯಿತು. ಭಾರತದಲ್ಲಿ ಕೂಡ ಅನೇಕ ಜನ ರಾಷ್ಟ್ರೀಯ ನಾಯಕರು ರೂಪುಗೊಂಡು ಭಾರತದ ಸ್ವಾತಂತ್ರ್ಯಕ್ಕಾಗಿ ಸಂಘಟಿತ ಹೋರಾಟ ಆರಂಭವಾಯಿತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು ಉಗಮಗೊಂಡು ರಾಷ್ಟ್ರೀಯ ಜಾಗೃತಿಯ ಹೊಸ ಗಾಳಿ ಮೂಲೆ ಮೂಲೆಯಲ್ಲಿ ಬೀಸತೊಡಗಿತು. ಬದುಕಿನ ಎಲ್ಲ ಆಯಾಮಗಳಿಗೂ ವ್ಯಾಪಿಸಿಕೊಂಡ ಈ ಹೋರಾಟದ ನೇತೃತ್ವವನ್ನು ಆರಂಭದಲ್ಲಿ ಲಾಲ ಬಾಲ

---

೪೨. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೫೨–೫೩

ಪಾಲರೆಂದು ಪ್ರಖ್ಯಾತರಾಗಿದ್ದ ಲಾಲಾ ಲಜಪತರಾಯ, ಬಾಲಗಂಗಾಧರ ತಿಲಕ, ಬಿ.ಸಿ.ಪಾಲ ಮೊದಲಾದ ಗಣ್ಯರು ವಹಿಸಿಕೊಂಡಿದ್ದರು. ಬ್ರಿಟೀಷರನ್ನು ಭಾರತದಿಂದ ಓಡಿಸಲು ಸಶಸ್ತ್ರ ಹೋರಾಟವನ್ನು ಸಂಘಟಿಸಬೇಕೆಂಬ ಉಗ್ರ ನಿಲುವು ಇವರದಾಗಿತ್ತು. ಗೋಪಾಲಕೃಷ್ಣ ಗೋಖಲೆಯವರ ಅನುಯಾಯಿಗಳು ಶಾಂತಿಯುತ ಹೋರಾಟದ ಮಾರ್ಗವನ್ನು ಅನುಸರಿಸುವ ನಿಲುವಿನವರಾಗಿದ್ದರು. ಬಾಲಗಂಗಾಧರ ತಿಲಕ ಹಾಗೂ ಲಜಪತರಾಯರ ನಂತರದಲ್ಲಿ ಅದೇ ಸಂದರ್ಭದಲ್ಲಿ ಭಾರತದ ರಾಜಕಾರಣಕ್ಕೆ ಪ್ರವೇಶಿಸಿದ ಗಾಂಧಿಯವರ ಪ್ರಭಾವದಿಂದಾಗಿ ಅಹಿಂಸಾತ್ಮಕ ಹೋರಾಟದ ದೀಕ್ಷೆಯನ್ನು ಕಾಂಗ್ರೆಸ್ಸು ತೊಟ್ಟಂತಾಯಿತು. ಆದರೂ ಸುಭಾಸಚಂದ್ರ ಭೋಸ, ಅರವಿಂದ ಘೋಷ, ಭಗತ್‌ಸಿಂಗ್ ಮೊದಲಾದ ಅನೇಕರು ಉಗ್ರ ಹೋರಾಟದ ಸಂಘಟನೆಗೆ ಸಶಸ್ತ್ರ ಬಂಡಾಯ ಹಾಗೂ ಭೂಗತ ಚಟುವಟಿಕೆಗಳಿಗೆ ಸ್ಫೂರ್ತಿಯಾಗಿ ನಿಂತಿದ್ದರು. ವಸಾಹತು ದಬ್ಬಾಳಿಕೆಯ ವಿರುದ್ಧ ದೇಶೀಯ ಸಾಂಸ್ಕೃತಿಕ ಪುನರುತ್ಥಾನದ ಹೊಸಯುಗ ಭಾರತದುದ್ದಕ್ಕೂ ವ್ಯಾಪಿಸಿದ ಕಾಲವದು. ಆಧುನಿಕತೆ ಮತ್ತು ದೇಶೀ ಪರಂಪರೆಗಳ ಅನುಸಂಧಾನದೊಂದಿಗೆ ರಾಷ್ಟ್ರೀಯ ಚಳುವಳಿ ಹೊಸ ಜಾಗೃತಿಯನ್ನು ಮೂಡಿಸುತ್ತಿದ್ದ ಈ ಸಂದರ್ಭದಲ್ಲಿ ಕರ್ನಾಟಕ ಎಲ್ಲ ಪಲ್ಲಟಗಳಿಗೂ ತನ್ನನ್ನು ಮುಕ್ತವಾಗಿ ಒಡ್ಡಿಕೊಂಡಿತು. ಕನ್ನಡ ಸಾಹಿತ್ಯ ಎಲ್ಲ ಬಗೆಯ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಭಾವಗಳಿಗೆ ತೆರೆದುಕೊಂಡು ಸೃಷ್ಟಿಶೀಲತೆಯ ಹೊಸ ಎತ್ತರ ಬಿತ್ತರಗಳನ್ನು ನಿಲುಕತೊಡಗಿತು. ಇದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವೋದಯ ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿತು. ಈ ಎಲ್ಲ ಬಗೆಯ ರಾಷ್ಟ್ರೀಯ ಜಾಗೃತಿ ಹಾಗೂ ಕನ್ನಡದ ಸಾಂಸ್ಕೃತಿಕ ಪುನರುತ್ಥಾನದ ಪ್ರಕ್ರಿಯೆಗಳು ಸಂಭವಿಸಲು ಆರಂಭಿಸಿದಾಗ ಬೆಟಗೇರಿ ಕೃಷ್ಣಶರ್ಮರು ಕನ್ನಡದ ಮೂಲಕ ಆ ಸಂದರ್ಭದ ಎಲ್ಲ ಜೀವಂತ ಮೌಲ್ಯಗಳನ್ನು ಮೈಗೂಡಿಸಿಕೊಂಡು ಅವುಗಳನ್ನು ಕನ್ನಡಿಗರ ಜನಮಾನಸದಲ್ಲಿ ಬಿತ್ತುವ, ಬೆಳೆಸುವ ನಿಷ್ಠಾವಂತ ಕಾಯಕದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು.

ಆನಂದಕಂದರ ಜೀವನ ಹಾಗೂ ಕೃತಿಗಳ ಕುರಿತು ಸಂಶೋಧನೆ ನಡೆಸಿರುವ ಡಾ.ಎ.ಕೆ. ಕುಲಕರ್ಣಿಯವರು ಆನಂದಕಂದರ ಆಗಿನ ಹೋರಾಟದ ಸ್ವರೂಪವನ್ನು ಕುರಿತು ಹೀಗೆ ಹೇಳಿದ್ದಾರೆ. "ತನ್ನ ನಾಡಿನ ಹೀನ ಸ್ಥಿತಿಯನ್ನು ಕಂಡು ಅವರ ಕವಿ ಹೃದಯ ಕಳವಳಗೊಂಡಿತು. ವಂಶಪರಂಪರೆಯಾಗಿ ರಕ್ತಗತವಾಗಿ ಬಂದ ಸ್ವಾಭಿಮಾನ, ಸ್ವಾತಂತ್ರ್ಯಪ್ರಿಯತೆ ಹಾಗೂ ದೇಶಪ್ರೇಮ ಗುಣಗಳ ಮೂರ್ತಿಯಾಗಿದ್ದ ಕೃಷ್ಣಶರ್ಮರಿಗೆ ತನ್ನ ಮಾತೃಭೂಮಿಯ ದಾಸ್ಯ ಶೃಂಖಲೆಗಳನ್ನು ಕಿತ್ತೊಗೆಯುವ ಹಾಗೂ ನಾಡಿನ ಜನತೆಯಲ್ಲಿ ಸಾಕ್ಷರತೆಯ ಪ್ರಸಾರಗಳ ಕರ್ತವ್ಯದ ಹಂಬಲವು ಜಾಗೃತವಾಯಿತು. ನಾಡಲ್ಲಿ ಜ್ಞಾನದ ದೀಪ ಹೊತ್ತಿಸದೆ ಪಾರತಂತ್ರ್ಯದ ಕತ್ತಲೆಯನ್ನು

ದೂರಮಾಡುವುದು ಸಾಧ್ಯವಿಲ್ಲವೆಂಬ ಅರಿವು ಅವರಿಗಾಗಿತ್ತು. ಅಂತೆಯೇ ಅವರು ಕೈಕೊಂಡ ಮೊದಲ ಕೆಲಸ ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿ ಜ್ಞಾನ ಸಂಸ್ಕೃತಿ ಪ್ರಸಾರ ಮಾಡುವುದು ಹಾಗೂ ಅಂದಿನ ವಿದ್ಯಾರ್ಥಿಗಳಲ್ಲಿ ನಾಡು ನುಡಿಯ ಅಭಿಮಾನ ಜಾಗೃತವಾಗುವಂತೆ ಮಾಡಿದವು. ಬೆಟಗೇರಿ ಕೃಷ್ಣಶರ್ಮರ ಜೀವನದ ಪ್ರತಿದಿನವು ದೇಶ ಸೇವೆಗೆ ಮೀಸಲಾಗಿ ಸಂದಿದೆ. ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾಗಿ ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಭಾಗವಹಿಸಿದ ಅವರು ನಿಜವಾದ ರಾಷ್ಟ್ರಕವಿ, ರಾಷ್ಟ್ರೀಯ ಕವಿ ಎಂದರೂ ಸಲ್ಲುವುದು. ಕನ್ನಡ ತಾಯಿಯ. ಭಾರತಮಾತೆಯ ಸೇವೆಯನ್ನು ಮನಮುಟ್ಟಿ ಅವರು ಮಾಡಿದ್ದಾರೆ. ಅಂದಿನ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಸೇವೆ ಎರಡು ವಿಧವಾಗಿ ಸಂದಿದೆ. ೧) ಪ್ರತ್ಯಕ್ಷ ೨) ಅಪ್ರತ್ಯಕ್ಷ. ಇದರಲ್ಲಿ ಎರಡನೆಯ ಭಾಗವೇ ಮಹತ್ವಪೂರ್ಣವೂ ಹಿರಿದಾದದ್ದೂ ಆಗಿದೆ."[೪೩]

"ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಇಂತಹ ರಾಷ್ಟ್ರವ್ಯಾಪಿ ಹೋರಾಟದತ್ತ ದೇಶದ ಎಲ್ಲ ಕವಿಗಳೂ, ಸುಶಿಕ್ಷಿತರೂ ಆಕರ್ಷಿತರಾಗಿ ಹೋರಾಟದ ನೇತೃತ್ವದ ಚುಕ್ಕಾಣಿಗಳನ್ನು ಹಿಡಿದುಕೊಳ್ಳಲು ಸನ್ನದ್ಧರಾದರು. ಈ ಹೋರಾಟವು ಮೂರು ಕಾಲಖಂಡಗಳಲ್ಲಿ ಹೊಸತಿರುವನ್ನು ಪಡೆದಿರುವುದು. ೧) ಕ್ರಿ.ಶ. ೧೯೨೦-೨೧ ೨) ೧೯೩೦-೩೧, ೩) ೧೯೪೧ರ ನಂತರ. ಇದರಲ್ಲಿ ಆನಂದಕಂದರ ಪಾತ್ರ ಅಪೂರ್ವವಾಗಿದೆ. ಕರ್ನಾಟಕದಲ್ಲಿ ನಡೆದ ಚಳುವಳಿಯ ಸ್ವಾತಂತ್ರ್ಯ ಸಮರದಲ್ಲಿ ಬೆಳಗಾವಿ ಜಿಲ್ಲೆಯ 'ಕುಂದರನಾಡು' ವಹಿಸಿದ ಪಾತ್ರ ಅಗ್ರಗಣ್ಯವಾಗಿದೆ. ಕೃಷ್ಣಶರ್ಮರು ಜನಿಸಿದ ಗೋಕಾಕ ತಾಲೂಕಿನ ಬಹುಭಾಗ ಈ ಕುಂದರನಾಡಿನಲ್ಲಿಯೇ ಬರುತ್ತದೆ."[೪೪]

ಸಮಗ್ರ ಕರ್ನಾಟಕದ ಕಲ್ಪನೆ ಹಗೂ ಏಕೀಕರಣದ ಜಾಗೃತಿ ಮೂಡಿಸುತ್ತಿದ್ದ ಈ ಕಾಲಖಂಡದಲ್ಲಿ ಮುಂಬೈ ಕರ್ನಾಟಕ, ಹೈದರಾಬಾದ ಕರ್ನಾಟಕ, ಮದ್ರಾಸ ಕರ್ನಾಟಕ ಹಾಗೂ ಮೈಸೂರು ಪ್ರಾಂತಗಳಾಗಿ ವಿಂಗಡಿಸಲ್ಪಟ್ಟಿದ್ದ ಕರ್ನಾಟಕದ ಎಲ್ಲ ಪ್ರದೇಶಗಳಿಂದಲೂ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕರು ಮೂಡಿಬಂದಿದ್ದಾರೆ. ಈ ನಾಯಕರುಗಳು ಬೇರೆ ಬೇರೆ ಭಾಗಗಳಲ್ಲಿ ಕಾರ್ಯಪ್ರವೃತ್ತರಾಗಿದ್ದರೂ ಕನ್ನಡಿಗರು ಹಾಗೂ ಕರ್ನಾಟಕದವರು ಎಂಬ ಪ್ರಜ್ಞೆ ಅವರಲ್ಲಿದ್ದದ್ದು ಹಾಗೂ ಕರ್ನಾಟಕದ ಏಕೀಕರಣ ಪ್ರಯತ್ನದಲ್ಲೂ ಇವರಲ್ಲಿ ಹಲವರ

---

೪೩. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ-ಮುನ್ನುಡಿ

೪೪. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೬೯ - ೭೦

ಪಾತ್ರವಿರುವುದು ಗಮನಾರ್ಹ ಸಂಗತಿಯಾಗಿದೆ. ಇಲ್ಲಿ ನಮೂದಿಸಲಾಗಿರುವ ಹೆಸರುಗಳನ್ನು ಗಮನಿಸಿದರೆ ಈ ವಿಷಯ ಮನದಟ್ಟಾಗಬಲ್ಲದು. "ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಪ್ರಾರಂಭವಾಗಿದ್ದು ಶ್ರೀ ಗಂಗಾಧರರಾವ ದೇಶಪಾಂಡೆ, ಗೋವಿಂದರಾವ ಯಾಳಗಿ ಇವರಿಂದ. ಶ್ರೀನಿವಾಸರಾವ ಕೌಜಲಗಿ, ರಂಗನಾಥ ದಿವಾಕರ, ಡಾ. ನಾ.ಸು.ಹರ್ಡೀಕರ, ಶ್ರೀ ಹುಕ್ಕೇರಿಕರ, ಶ್ರೀ ಕಬ್ಬೂರ ಬಂಧುಗಳು, ಕಾರ್ನಾಡ ಸದಾಶಿವರಾಯರು, ತಿಮ್ಮಪ್ಪನಾಯಕ, ಹೊದಿಕೆ ಮಾಸ್ತರ, ಶ್ರೀಮತಿ ಉಮಾಬಾಯಿ ಕುಂದಾಪೂರ, ಕೃಷ್ಣಾಬಾಯಿ ಪಣಜೀಕರ, ನಾರಾಯಣರಾವ ಜೋಶಿ, ದತ್ತೋಪಂತ ಮಜಲಿ, ಕರಗುಪ್ಪಿ ಕೃಷ್ಣರಾಯರು, ಶ್ರೀ ಯಾಳಗಿ ಬಂಧುಗಳು, ಟೇಕೂರ ಸುಬ್ರಹ್ಮಣ್ಯಂ, ವಸುವಾಲಪ್ಪ ಇಜಾರಿ ಇವರೆಲ್ಲ ಕರ್ನಾಟಕದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ವೃಕ್ಷ ಬೆಳೆಯಲು ತಮ್ಮ ಬೆವರು ಸುರಿಸಿದ್ದಾರೆ."[೭೩]

ಕುಮರಿಯ ಆಶ್ರಮ, ಬೆಳಗಾವಿ, ಹುದಲಿ, ಪಾಚ್ಚಾಪೂರ, ನಿಪ್ಪಾಣಿ, ಯಮಕನಮರಡಿ, ನಂದಗಡಗಳಲ್ಲಿ ಹಾಗೂ ಧಾರವಾಡ ಮತ್ತು ಕರ್ನಾಟಕದ ತುಂಬೆಲ್ಲ ನಡೆದ ರಾಷ್ಟ್ರೀಯ ಶಾಲೆಗಳು ಈ ಸ್ವಾತಂತ್ರ್ಯ ಸಮರದ ಕೇಂದ್ರಗಳಾಗಿದ್ದುವಲ್ಲದೆ ದೇಶಸೇವೆಗೆ ನಿಷ್ಠ ಕಾರ್ಯಕರ್ತರನ್ನು ಒದಗಿಸಿದವು. ಇವುಗಳಲ್ಲಿ ಬೆಳಗಾವಿ, ಯಮಕನಮರಡಿ, ಹುದಲಿ, ಧಾರವಾಡಗಳ ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿ ಶ್ರೀ ಬೆಟಗೇರಿ ಕೃಷ್ಣಶರ್ಮರು ದೇಶಸೇವೆಯ ಯಜ್ಞದಲ್ಲಿ ಧುಮುಕಿದುದು ನೆನಪಿಡುವ ಸಂಗತಿಯಾಗಿದೆ. ಆನಂದಕಂದರ ವಂಶದ ಹಿರಿಯರಲ್ಲಿ ಗೋವಿಂದರಾಯರು ಬ್ರಿಟೀಷರ ವಿರುದ್ಧ ಬಿಚ್ಚುಗತ್ತಿ ಹಿಡಿದು ಹೋರಾಡಿದ, ಭೂಗತರಾಗಿ ಹೋರಾಡಿದ ಹಿನ್ನೆಲೆಯಿದ್ದು, ಸ್ವಾತಂತ್ರ್ಯ ಹೋರಾಟಗಾರರಿಗೆ ಮನೆಯಲ್ಲಿ ಆಶ್ರಯ ನೀಡಿದ ಆರೋಪಕ್ಕೆ ಗುರಿಯಾಗಿ ಬಡ್ತಿ ಇತ್ಯಾದಿಗಳನ್ನು ಬ್ರಿಟೀಷ್ ಸರಕಾರದಿಂದ ಕಳಕೊಂಡ ಪ್ರಸಂಗಗಳೂ ಇವೆ.

೧೯೨೧ರ ರಾಷ್ಟ್ರೀಯ ಚಳುವಳಿಯ ಮುಖ್ಯ ಕಾರ್ಯಕ್ರಮಗಳೆಂದರೆ ಎರಡು: ೧) ಲೋಕಮಾನ್ಯ ಬಾಲಗಂಗಾಧರ ತಿಲಕರ ಪುಣ್ಯಸ್ಮರಣಾರ್ಥ ಒಂದು ಕೋಟಿ ರೂಪಾಯಿಯ ತಿಲಕ ಸ್ವರಾಜ್ಯ ನಿಧಿ ಕೂಡಿಸುವದು. ೨) ಒಂದು ಕೋಟಿ ಕಾಂಗ್ರೆಸ್ ಸದಸ್ಯರನ್ನು ಮಾಡುವುದು. ಇದೇ ಸಂದರ್ಭದಲ್ಲಿ ಆರಂಭವಾದ ಅಸಹಕಾರ ಚಳುವಳಿಯ ಅಂಗವಾಗಿ ೧೩ ಅಂಶಗಳ ಯೋಜನೆ ರೂಪಿತವಾಗಿ ಖಾದಿ ಹುಟ್ಟುವಳಿ, ಪ್ರಚಾರ, ಸೆರೆ–ಸಿಂದಿ ಬಹಿಷ್ಕಾರ, ಸರಕಾರಿ ವೃತ್ತಿಗಳನ್ನು ಬಿಡುವುದು,

---

೭೩. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ. ಕುಲಕರ್ಣಿ, ಪು. ೭೭

ಕೋರ್ಟು ಕಚೇರಿ ಬಹಿಷ್ಕಾರ, ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸ್ಲಿಂ ಐಕ್ಯ, ಪರದೇಶಿ ಬಟ್ಟೆಗಳ ದಹನ, ಕರನಿರಾಕರಣೆ ಇವೇ ಮೊದಲಾದ ಕಾರ್ಯಯೋಜನೆಗಳು ರೂಪಿತಗೊಂಡು ಕಾರ್ಯಗತಗೊಂಡವು. ಈ ಹೋರಾಟಗಳಲ್ಲೆಲ್ಲ ಆನಂದಕಂದರು ಪ್ರತ್ಯಕ್ಷ ಹೋರಾಟಗಾರರಾಗಿ ಪಾಲ್ಗೊಂಡರು. ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿ ಸ್ವರಾಜ್ಯಾಶ್ರಮದಲ್ಲಿಯೇ ವಾಸವಾಗಿದ್ದ ಬೆಟಗೇರಿಯವರು ಬೆಳಗಾವಿಯಲ್ಲಿದ್ದುಕೊಂಡು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಗಳಾಗಿದ್ದ ಮುಂಚೂಣಿ ನಾಯಕರುಗಳ ಸಂಪರ್ಕಕ್ಕೆ ಬಂದರು. ಪ್ರತ್ಯಕ್ಷ ಕಾರ್ಯಕರ್ತರಾಗಿ ಅವರೊಂದಿಗೆ ಭಾಗವಹಿಸಿದರು. ಇಂಥ ಪ್ರತ್ಯಕ್ಷ ಹೋರಾಟಗಳಲ್ಲಿ ಭಾಗವಹಿಸಿ ಜೇಲು ಸೇರಬೇಕಾದ ಎರಡು ಪ್ರಸಂಗಗಳಲ್ಲಿ ಅದು ತಪ್ಪುವಂತಾಗಿ ಪಾರಾದದ್ದೂ ಇದೆ. ಒಂದು ಸಲ ಬೆಟಗೇರಿಯಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಸಭೆಯ ಅಧ್ಯಕ್ಷತೆಯನ್ನು ಬೆಟಗೇರಿ ಅವರು ವಹಿಸಿದ್ದರು. ಶ್ರೀ ರಾಮಚಂದ್ರ ವಡವಿ ಮೊದಲಾದ ಮೂವತ್ತು ಜನ ತರುಣ ಕಾರ್ಯಕರ್ತರು ಆಯೋಜಿಸಿದ್ದ ಈ ಸಭೆಯ ಅಧ್ಯಕ್ಷಸ್ಥಾನದಿಂದ ಸ್ಫೂರ್ತಿಯುತ ಭಾಷಣ ಮಾಡಿದರು. ಅನೇಕ ಜನ ತರುಣರು ಇವರ ಭಾಷಣದಿಂದ ಪ್ರಭಾವಿತರಾಗಿ ಉಪ್ಪಿನ ಚೀಟಿಗಳನ್ನು ಮಾರಿದರು. ಇದರ ವರದಿಯನ್ನು ಸರಕಾರಕ್ಕೆ ಕಳಿಸಬೇಕಾದವರು ಇವರ ಮನೆತನದ ಗೌಡರೇ ಆಗಿದ್ದರಿಂದ ದೇಶಸೇವೆಯ ಈ ಸಂದರ್ಭ ಸರಕಾರಕ್ಕೆ ವರದಿಯಾಗದೆ ಅನಾರೋಗ್ಯದಿಂದ ಬಳಲುವ ಸೂಕ್ಷ್ಮ ಪ್ರಕೃತಿಯ ಆನಂದಕಂದರು ಜೇಲಿಗೆ ಹೋಗುವ ಪ್ರಸಂಗ ತಪ್ಪಿದಂತಾಯಿತು. ಇನ್ನೊಮ್ಮೆ ಬೆಟಗೇರಿಯ ಜಾತ್ರೆಯ ಸಂದರ್ಭದಲ್ಲಿ ಬ್ರಿಟಿಷ ಅಧಿಕಾರಿಗಳ ಮೇಲೆ ಯಾರೋ ಸೆಗಣಿ ಎರಚಿದ ಪ್ರಸಂಗದಲ್ಲಿ ಬೆಟಗೇರಿಯವರು ಕೋರ್ಟು ಮೆಟ್ಟಿಲು ಹತ್ತಬೇಕಾಯಿತು. ಸುದೈವದಿಂದ ಈ ಕೇಸು ಹಿಂತೆಗೆಯಲ್ಪಟ್ಟು ಬೆಟಗೇರಿಯವರು ಜೇಲಿಗೆ ಹೋಗುವ ಪ್ರಸಂಗ ತಪ್ಪಿದಂತಾಯಿತು. ಈ ಎರಡು ಘಟನೆಗಳ ನಂತರ ಅನೇಕ ಜನ ವಿಧಾಯಕ ಕಾರ್ಯಕರ್ತರು ಬೆಟಗೇರಿಯವರ ಆರೋಗ್ಯದ ಕಾರಣದಿಂದ ಪ್ರತ್ಯಕ್ಷ ಹೋರಾಟದ ಮಾರ್ಗವನ್ನು ಬಿಟ್ಟು ಅಪ್ರತ್ಯಕ್ಷ ಹೋರಾಟದ ಸಾಹಿತ್ಯಿಕ ಶೈಕ್ಷಣಿಕ ಜಾಗೃತಿಯ ಮೂಲಕ ಹೋರಾಟವನ್ನು ಮುಂದುವರೆಸಲು ಸಲಹೆ ನೀಡಿದರು. ೧೯೪೨ ರಲ್ಲಿ ಗಾಂಧೀಜಿ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆಯೊಂದಿಗೆ ಬ್ರಿಟೀಷರೇ ಭಾರತಬಿಟ್ಟು ತೊಲಗಿ ಎಂದು ಸಾರಿ ವೈಯಕ್ತಿಕ ಹೋರಾಟ ಆರಂಭಿಸಿದಾಗ ದೇಶಾದ್ಯಂತ ಅನೇಕ ವಿಧದ ಭೂಗತ ಹೋರಾಟಗಳು ನಡೆದವು. ಬೆಟಗೇರಿಯವರು ಅದರಲ್ಲಿ ಭಾಗವಹಿಸಿದವರಿಗೆ ಊಟ, ವಸತಿ, ರಕ್ಷಣೆ ಕೊಡುವಂತಹ ಕಾರ್ಯಗಳಲ್ಲಿ ತೊಡಗಿ ತಮ್ಮ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳನ್ನು ಮುಂದುವರೆಸಿದರು. ರಾಮಚಂದ್ರ ವಡವಿಯವರನ್ನು ಹಿಡಿದುಕೊಟ್ಟವರಿಗೆ ಸರಕಾರ ರೂ. ೫೦೦೦ ಬಹುಮಾನ ಘೋಷಣೆ ಮಾಡಿತ್ತು.

ರಾಮಚಂದ್ರ ವಡವಿಯವರಿಗೆ ಬೆಟಗೇರಿಯವರು ಅನ್ನ, ಆಶ್ರಯ ಕೊಟ್ಟು ರಕ್ಷಣೆ ಒದಗಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಸುದ್ದಿಯನ್ನು ತಲುಪಿಸುವ ಬುಲೆಟಿನ್ ಪ್ರತಿಮಾಡುವ ಸೈಕ್ಲೋಸ್ಟೈಲ್ ಯಂತ್ರ ಬೆಟಗೇರಿಯವರ ಮನೆಯಲ್ಲಿತ್ತು. ಅಲ್ಲಿಂದಲೇ ಸತ್ಯಾಗ್ರಹಿಗಳಿಗೆ ಬುಲೆಟಿನ್ ಗುಪ್ತವಾಗಿ ತಲುಪಿಸಲ್ಪಡುತ್ತಿದ್ದವು. ಸತ್ಯಾಗ್ರಹಿಗಳಿಗೆ ಅನ್ನ, ವಸ್ತ್ರ, ಪೂರೈಸುವ ಅನೇಕ ಪ್ರಸಂಗಗಳೂ ಆಗಾಗ ನಡೆಯುತ್ತಿದ್ದವು. ಹೀಗೆ ಪರೋಕ್ಷ ಹೋರಾಟದಲ್ಲಿ ಆನಂದಕಂದರು ನಿರಂತರವಾಗಿ ಭಾಗಿಯಾಗುತ್ತಲೇ ಬಂದರು.

೫. ರಾಷ್ಟ್ರೀಯ ಕವಿಯಾಗಿ ಆನಂದಕಂದರ ಪಾತ್ರ :

ರಾಷ್ಟ್ರ ಭಕ್ತಿಯನ್ನು ಪ್ರೇರೇಪಿಸುವ ಅನೇಕ ಕವಿತೆ ಹಾಡುಗಳನ್ನು ಆರಂಭದಿಂದಲೇ ಆನಂದಕಂದರು ಬರೆಯುತ್ತ ಬಂದಿದ್ದಾರೆ. ರಾಷ್ಟ್ರೀಯ ಪದ್ಯಾವಲಿ, ರಾಷ್ಟ್ರೀಯ ಪದ್ಯಮಾಲೆ, ಗಾಂಧೀ ಗೀತ ಸಪ್ತಕ, ಮೇಳದ ಪದಗಳು ಇವೆಲ್ಲ ಹೆಸರಿಸಬಹುದಾದ ಇವರ ಪ್ರಮುಖ ಕೃತಿಗಳು. ಅವರು ರಚಿಸಿದ ಹಲವಾರು ಕವಿತೆಗಳನ್ನು ಬ್ರಿಟೀಷ್ ಸರಕಾರ ನಾಶಮಾಡಿದ್ದಿದೆ. ಸ್ವಯಂಸೇವಕರು ಪಥ ಸಂಚಲನ, ಪ್ರಭಾತಫೇರಿ, ಧ್ವಜವಂದನ, ಸಭೆ ಸಮಾರಂಭಗಳಲ್ಲಿ ಕವಿತೆಗಳನ್ನು ಹಾಡಲಾಗುತ್ತಿತ್ತು. ಬೆಳಗಾವಿಯ ರಾಷ್ಟ್ರೀಯ ಶಾಲೆಯಲ್ಲಿದ್ದಾಗ ತಿಲಕ ಸ್ವರಾಜ್ಯ ನಿಧಿ ಸಂಗ್ರಹದ ಗೀತೆಗಳು ಮರಾಠಿಯಲ್ಲಿ ಇದ್ದವು. ಮೊದಲ ಸಲ ಕನ್ನಡದಲ್ಲಿ ಅಂಥ ಗೀತೆಗಳನ್ನು ಬರೆದು ಚಲಾವಣೆಗೆ ತಂದವರು ಬೆಟಗೇರಿಯವರು. ಅರುಣೋದಯ ಸಂಕಲನದ ಕವಿತೆಗಳು ರಾಷ್ಟ್ರಭಕ್ತಿ ಹಾಗೂ ನಾಡಭಕ್ತಿಯ ವಿಷಯಗಳನ್ನು ಒಳಗೊಂಡಿವೆ. ನಾಡಭಕ್ತಿ, ರಾಷ್ಟ್ರ ಭಕ್ತಿಗೆ ವಿರುದ್ಧವಲ್ಲ ಎಂಬುದು ಆನಂದಕಂದರ ಚಿಂತನೆಯಾಗಿತ್ತು. 'ನಾವು ಭಾರತೀಯರು' ಎಂಬ ಅವರ ಗೀತೆಯನ್ನು ಇಂಗ್ಲೀಷಿಗೆ ಡಾ. ವಿ.ಕೃ.ಗೋಕಾಕರು ಅನುವಾದಿಸಿದ್ದು ಕೇಂದ್ರ ಸರಕಾರದಿಂದ ಪ್ರಕಟಗೊಳ್ಳುವ ರಾಷ್ಟ್ರೀಯ ಗೀತ ಸಂಗ್ರಹಗಳಲ್ಲಿ ಸೇರ್ಪಡೆಗಾಗಿ ಅದನ್ನು ಆರಿಸಲಾಗಿತ್ತು. ೧೯೨೪ರ ರಲ್ಲಿ ಗಾಂಧಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸ್ವಾಗತಗೀತೆ ಬೆಟಗೇರಿಯವರಿಂದಲೇ ರಚಿತವಾಗಿತ್ತೆಂಬುದು ಮರೆಯಲಾಗದು.

೬. ಸ್ವಾತಂತ್ರ್ಯ ಹೋರಾಟದಲ್ಲಿ ಜಯಂತಿಯ ಪಾತ್ರ :

"ಶ್ರೀ ಬೆಟಗೇರಿ ಕೃಷ್ಣಶರ್ಮರು ಅಪ್ರತ್ಯಕ್ಷವಾಗಿ ಕನ್ನಡ ನಾಡಿನಲ್ಲಿ ದೇಶದ ಸ್ವಾತಂತ್ರ್ಯಾಂದೋಲನವನ್ನು ಜಾಗೃತಗೊಳಿಸಿದ ಇನ್ನೊಂದು ಮಹತ್ವದ ಹಾಗೂ ಅಪೂರ್ವ ಕಾರ್ಯವೆಂದರೆ 'ಜಯಂತಿ'ಯ ಸಂಪಾದಕರಾಗಿ ಅಂದು ಅಖಿಲ ಕರ್ನಾಟಕದಲ್ಲಿ ಅಖಿಲ ಭಾರತ ಮಟ್ಟದಲ್ಲಿ ನಡೆಯುತ್ತಿದ್ದ ಹೋರಾಟದ ಚಿತ್ರವನ್ನು

ಕನ್ನಡಿಗರಿಗೆ ಅವರ ಭಾಷೆಯಲ್ಲಿಯೇ ನೀಡಿದ್ದಾಗಿದೆ. ಜಯಂತಿಯ ಸಂಪಾದಕೀಯ ವಿಭಾಗದಲ್ಲಿ ಅಂದು ಅವರು ಬರೆದ ಲೇಖನಗಳು ನಾಡಿನ ಜನತೆಯನ್ನು ಎಚ್ಚರಗೊಳಿಸಿದವು. ಸ್ವಾತಂತ್ರ್ಯ ಆಂದೋಲನದ ಸಮಗ್ರ ಚಿತ್ರವನ್ನು ಒಂದೆಡೆಗೆ ಒದಗಿಸಿ ಸಂಘಟನೆ, ಸಂಯೋಜನೆಗಳನ್ನು ಬಲಗೊಳಿಸಿದವು. ಆಂದೋಲನದ ಅಜ್ಞಾತ ಪುಟಗಳನ್ನು ನಾಡಿನ ಜನತೆ ಓದಿ ವೀರ ಸ್ಫೂರ್ತಿಯನ್ನೂ, ಅಭಿಮಾನವನ್ನೂ, ಪಡೆದು ದೇಶದ ಅಂದಿನ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಿಂದಲೂ, ಸುಸಂಘಟಿತರಾಗಿ ಅಂದಿನ ಆಳರಸರ ವಿರುದ್ಧ ಸಿಡಿದೆದ್ದುದರಿಂದಲೂ ಭಾರತದ ಸ್ವಾತಂತ್ರ್ಯ ಸೂರ್ಯನು ಬೇಗ ಮೂಡುವಂತಾಯಿತು. ಕಾಂಗ್ರೆಸ್ಸಿನಲ್ಲಿ ನಡೆಯುತ್ತಿದ್ದ ತಾತ್ವಿಕ ಮತಭೇದವನ್ನು ನಿಷ್ಪಕ್ಷಪಾತವಾಗಿ ನಾಡಿನ ಹಿತದೃಷ್ಟಿಯಿಂದನ್ನ ಕೃಷ್ಣಶರ್ಮರು ಜಯಂತಿಯ 'ನಾಲ್ಕೂ ನಿಟ್ಟಿನ ನೋಟ'ದಲ್ಲಿ ಬಯಲಿಗೆಳೆದದ್ದರಿಂದ ಜನತೆಯು ಆಂದೋಲನದ ಹಾದಿಯಲ್ಲಿ ಬಂದು ಬೀಳುತ್ತಿದ್ದ ಕೊಳೆಮುಳ್ಳುಗಳನ್ನು ಅರಿತುಕೊಂಡಾಗ ಧುರೀಣರೆಲ್ಲ ತಮ್ಮ ತಾತ್ತ್ವಿಕ ಮತಭೇದಗಳನ್ನು ಮರೆತು ನಾಡಸೇವೆಗೆ ಕಂಕಣಬದ್ಧರಾಗಬೇಕಾಯಿತು. ಸುಭಾಷ್‌ಚಂದ್ರಭೋಸರು ಧಾರವಾಡಕ್ಕೆ ಬಂದ ಪ್ರಸಂಗವನ್ನು ಹಾಗೂ ರಾಮದುರ್ಗ ಸಂಸ್ಥಾನದ ಆಂದೋಲನದಲ್ಲಿ ಒಪ್ಪಂದಕ್ಕಾಗಿ ತೆರಳಿದ ನಿಯೋಗದಲ್ಲಿದ್ದ ದೇ.ಭ. ಕರ್ನಾಟಕದ ಸಿಂಹ ಗುಣಧರರಾಯರು ಹಾಗೂ ಶ್ರೀ ದೇವಶಂಕರರಾಯರ ಧೋರಣೆಯನ್ನು 'ಜಯಂತಿ' ಟೀಕಿಸಿದ ಪ್ರಸಂಗವನ್ನು ನೆನೆಯಬಹುದಾಗಿದೆ."[೪೬] ಕನ್ನಡಿಗರು ಹಾಗೂ ಇತರ ಭಾರತೀಯ ಕ್ರಾಂತಿಕಾರಿಗಳು ಬ್ರಿಟೀಷ್ ಸರಕಾರದ ವಿರುದ್ಧ ನಡೆಸುತ್ತಿದ್ದ ಕ್ರಾಂತಿಕಾರಕ ಹೋರಾಟದ ಚಟುವಟಿಕೆ ಕುರಿತು ಲೇಖನ ಪ್ರಕಟಿಸುವುದು ದೇಶದ್ರೋಹ ಎನಿಸಿದ ಸಂದರ್ಭದಲ್ಲಿ ಶ್ರೀ ಮಂಡ್ಯತಿರುಮಲಾಚಾರ್ಯರ ಈ ಕುರಿತಾದ ಲೇಖನ ಪ್ರಕಟಿಸಿದ್ದು ಆನಂದಕಂದರ ದಿಟ್ಟತನಕ್ಕೆ ಉದಾಹರಣೆ. ಹನ್ನೆರಡು ಭಾಷೆಗಳಲ್ಲಿ ಅನುವಾದಗೊಂಡು ಪ್ರಕಟಗೊಂಡ ಈ ಲೇಖನ ಬ್ರಿಟಿಷರ ದಬ್ಬಾಳಿಕೆ ಹಾಗೂ ಭಾರತೀಯರ ಹೀನ ದೆಸೆಯನ್ನು ಕುರಿತು ಅಂತರಾಷ್ಟ್ರೀಯ ಸಮುದಾಯದ ಗಮನ ಸೆಳೆಯುವಂತಹದಾಗಿತ್ತು.

ಹೀಗೆ ಸ್ವಾತಂತ್ರ್ಯಾಂದೋಲನದಲ್ಲಿ ನೇರವಾಗಿ ಭಾಗವಹಿಸುತ್ತ ಅನೇಕ ವಿಧದಲ್ಲಿ ಸ್ಫೂರ್ತಿ ನೀಡುತ್ತ, ಅದರ ಅಜ್ಞಾತ ಮಗ್ಗುಲುಗಳನ್ನು ಬೆಳಕಿಗೆ ತರುತ್ತ ಆನಂದಕಂದರು ನಿರ್ವಹಿಸಿದ ಪಾತ್ರ ಸ್ಮರಣೀಯ. ಸ್ವಾತಂತ್ರ್ಯೋತ್ತರದಲ್ಲಿಯೂ 'ಜಯಂತಿ' ರಾಷ್ಟ್ರೀಯ ಆಸಕ್ತಿಗಳನ್ನು ಘೋಷಿಸಿದೆ.

---

೪೬. ಆನಂದಕಂದ– ಕವಿ, ಕಾವ್ಯ ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು.

## ೭. ಕನ್ನಡ ಕಟ್ಟಿದ ಪ್ರಸಂಗಗಳು ಮತ್ತು ಸಂದರ್ಭಗಳು :

ರಾಜಪ್ರಭುತ್ವ ಹಾಗೂ ಪರಕೀಯ ಪ್ರಭುತ್ವಗಳ ಅಸ್ಥಿರ ಚಾರಿತ್ರಿಕ, ಭೌಗೋಲಿಕ ಒತ್ತಡಗಳಲ್ಲಿ ಭಿನ್ನ ಸ್ಥಿತ್ಯಂತರಗಳಿಗೆ ಗುರಿಯಾಗುತ್ತ ಬಂದ ಭಾರತೀಯ ಪ್ರಾದೇಶಿಕ ಏಕತೆ ನಿರಂತರ ಬಿಕ್ಕಟ್ಟುಗಳಿಗೆ ಗುರಿಯಾಗುತ್ತಲೇ ಬಂದಿದೆ. ಭಾಷೆಯನ್ನಾಧರಿಸಿದ ಸಾಹಿತ್ಯ ಸಂಸ್ಕೃತಿಗಳ ಧ್ರುವೀಕರಣ ಪ್ರಜಾಪ್ರಭುತ್ವವಾದಿ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಅನಿವಾರ್ಯವಾದದ್ದು. ಭಾಷಾವಾರು ಪ್ರಾಂತಗಳ ವಿಂಗಡಣೆ ರಾಜಕೀಯವಾಗಿ ಮಾತ್ರವಲ್ಲ ಸಾಂಸ್ಕೃತಿಕ ಹಿತಾಸಕ್ತಿಗಳ ದೃಷ್ಟಿಯಿಂದಲೂ ಆದರ್ಶಪ್ರಾಯ ರಾಜಕೀಯ ಪರಿಹಾರವಾಗಿ ಕಂಡದ್ದು ಸಹಜವೇ. ಈ ಧ್ರುವೀಕರಣ ಸ್ವಾತಂತ್ರ್ಯ ಪೂರ್ವದಲ್ಲಿಯೇ ನಾಡುಗಳ ಏಕೀಕರಣದ ಭಾಷೆಯನ್ನನುಸರಿಸಿ ಭೌಗೋಳಿಕ ನಕಾಶೆಯನ್ನು ಬದಲಾಯಿಸಿಕೊಳ್ಳುವ ಅತ್ಯಂತ ತೊಡಕಿನ ಪ್ರಕ್ರಿಯೆಯ ರೂಪ ತಳೆಯಿತು. ಸಾವಿರಾರು ವರ್ಷಗಳ ಸಾಹಿತ್ಯ ಹಾಗೂ ಸಂಸ್ಕೃತಿಗಳ ಪರಂಪರೆಯನ್ನು ಅನುಸರಿಸಿ ನಂತರದಲ್ಲಿ ಅನೇಕ ವ್ಯತಾಸಗಳಿಗೆ ಗುರಿಯಾದ ಜನಸಮುದಾಯಗಳನ್ನು ಒಟ್ಟುಗೂಡಿಸುವ ಈ ಬೆಳವಣಿಗೆ ಕಳೆದ ಶತಮಾನದ ಆರಂಭದಲ್ಲಿಯೇ ಅಂದರೆ ಹೆಚ್ಚು ಕಡಿಮೆ ಸ್ವಾತಂತ್ರ್ಯ ಚಳುವಳಿಯ ಜತೆ ಜತೆಗೆ ನಡೆಯುತ್ತ ಬಂದಿದೆ. ಕನ್ನಡ ನಾಡಿನ ಏಕೀಕರಣದ ಚರಿತ್ರೆಯು ಇದಕ್ಕೆ ಹೊರತಲ್ಲ. ಕರ್ನಾಟಕಾಂತರ್ಗತ ಭಾರತ ಹಾಗೂ ಭಾರತಾಂತರ್ಗತ ವಿಶ್ವ ಎಂಬ ಆದರ್ಶವನ್ನಿಟ್ಟುಕೊಂಡೇ ಕರ್ನಾಟಕ ಏಕೀಕರಣ ಚಳುವಳಿಯನ್ನು ಮುನ್ನಡೆಸಿಕೊಂಡು ಬರಲಾಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಮುಖಂಡರು, ಸಾಹಿತ್ಯ ಸಂಸ್ಕೃತಿಗಳ ನಿರ್ಮಾಣದಲ್ಲಿ ತೊಡಗಿದ್ದೂ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು, ಏಕಕಾಲಕ್ಕೆ ಅನೇಕ ವಿಧದಲ್ಲಿ ಈ ಎರಡೂ ಗುರಿಗಳ ಈಡೇರಿಕೆಗಾಗಿ ಹೆಣಗುತ್ತಿದ್ದರು. ಇಂಥ ಹೋರಾಟ ಆರಂಭವಾದ ಮೊದಲ ಕಾಲಘಟ್ಟದಲ್ಲಿಯೇ ಕವಿಯಾಗಿ, ಲೇಖಕರಾಗಿ, ಪತ್ರಿಕಾಕರ್ತರಾಗಿ, ಅಷ್ಟೇ ಅಲ್ಲ ನೇರವಾದ ಕ್ರಿಯಾತ್ಮಕ ಹೋರಾಟಗಾರರಾಗಿ ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಪ್ರಮುಖರಲ್ಲಿ ಬೆಟಗೇರಿ ಕೃಷ್ಣಶರ್ಮ ಅವರ ಹೆಸರು ಚಿರಸ್ಮರಣೀಯ.

“ಹದಿಮೂರು ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿದ್ದ ನೃಪತುಂಗನಾಳಿದ ಕನ್ನಡ ನಾಡನ್ನು ಒಂದೇ ರಾಜಕೀಯ ಆಡಳಿತದಡಿಯಲ್ಲಿ ತರದೆ ಸ್ವಾತಂತ್ರ್ಯದ ಪರಿಪೂರ್ಣ ಫಲವನ್ನು ಕನ್ನಡಿಗರು ಸವಿಯುವುದು ಹಾಗೂ ನಾಡು ನುಡಿಯ ಅಭ್ಯುದಯವನ್ನು ಕಾಣವುದು ಕನಸಿನ ಮಾತೆಂಬ ಕಲ್ಪನೆ ೧೯ ನೆಯ ಶತಮಾನದ ಕೊನೆಗೆ ಕನ್ನಡದ ವಿಚಾರವಂತ ಮುಂದಾಳುಗಳಿಗೆ ಹೊಳೆಯಿತು. ಅಂದಿನ ಹಿರಿಯ ವಿಚಾರವಂತ ಮುಂದಾಳುಗಳೂ, ಕರ್ನಾಟಕದ ಕುಲಪುರೋಹಿತರೆ

ನಿಸಿದವರೂ ಆದ ಆಲೂರು ವೆಂಕಟರಾಯರ ಮಾತು ಇದಕ್ಕೆ ನಿದರ್ಶನ."[೪೭] 'ಕರ್ನಾಟಕತ್ವ'ದ ವಿಶಾಲ ಭೂಮಿಕೆಗೆ ಎಲ್ಲ ಬಗೆಯ ನೈತಿಕ ಆಯಾಮಗಳನ್ನು ಒದಗಿಸಿದ ಅವರ ಚಿಂತನೆಗಳು ಅಂದು ಏಕೀಕರಣದ ಬೆಳಕಿನಲ್ಲಿ ಕನ್ನಡಿಗರನ್ನು ಎಚ್ಚರಿಸುವ ಮಹತ್ವದ ಗುರಿಗೆ ಪ್ರೇರಕವಾಗಿದ್ದವು. ಆನಂದಕಂದರು ಜನ್ಮವೆತ್ತಿದ ಹಾಗೂ ಬಾಲ್ಯವನ್ನು ಕಳೆಯುತ್ತಿದ್ದ ೧೯ ನೆಯ ಶತಮಾನದ ಆರಂಭದ ಕಾಲವನ್ನು ಆಲೂರರು 'ಅರುಣೋದಯ' ಕಾಲವೆಂದು ಕರೆದರು. ಇಷ್ಟೊತ್ತಿಗಾಗಲೇ ಡೆಪ್ಯೂಟಿ ಚೆನ್ನಬಸಪ್ಪನವರು ಧಾರವಾಡದಲ್ಲಿ ಶೈಕ್ಷಣಿಕ ರಂಗದಲ್ಲಿ ಜಾಗೃತಿ ಮೂಡಿಸಿ ಏಕೀಕರಣಕ್ಕೆ ಸ್ಪಷ್ಟ ಕಲ್ಪನೆ ನೀಡಿದರು. ಬೆನಗಲ್ ರಾಮರಾಯರಂಥ ಅನೇಕ ಮುಖಂಡರು ತಮ್ಮ ಉಜ್ವಲ ಭಾಷಣಗಳ ಮೂಲಕ ಜನರಲ್ಲಿ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿದ್ದರು. ಈ ಉದ್ದೇಶಕ್ಕಾಗಿ ಅವರು ಕರ್ನಾಟಕಾದ್ಯಂತ ಅನೇಕ ಸಂಘ ಸಂಸ್ಥೆಗಳು ರೂಪುಗೊಂಡು ಕಾರ್ಯನಿರತವಾಗಿದ್ದವು. ಅವುಗಳಲ್ಲಿ ಮಹತ್ವದವು ಕೆಳಗಿನಂತಿವೆ.

೧. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ

೨. ಕರ್ನಾಟಕ ಸಾಹಿತ್ಯ ಪರಿಷತ್ತು

೩. ಕರ್ನಾಟಕ ವಿದ್ಯಾವರ್ಧಕ ಸಂಘ

೪. ಕರ್ನಾಟಕ ಇತಿಹಾಸ ಮಂಡಳಿ

೫. ಕರ್ನಾಟಕ ವ್ಯಾಪಾರಿ ಮಂಡಳ (ವಣಿಕ ಸಂಘ)

೬. ಕರ್ನಾಟಕ ಸಭೆ

೭. ಕರ್ನಾಟಕ ಏಕೀಕರಣ ಸಂಘ

೮. ಕನ್ನಡಿಗರ ಸಂಘ

ಈ ಎಲ್ಲ ಸಂಸ್ಥೆಗಳು ಕ್ರಿಯಾಶೀಲವಾಗಿದ್ದರೂ ಜಾಗೃತಿಯ ಪ್ರಮಾಣ ಹಿಂದುಳಿದೇ ಇತ್ತು. "ಹೀಗೆ ಕನ್ನಡದ ಪ್ರಗತಿ ಹಿಂದುಳಿದಾಗ ಆನಂದಕಂದರು ಯುವಕರಾಗಿದ್ದರು. ಅವರು ಕನ್ನಡ ಯುವ ಜನಾಂಗದ ಧ್ವನಿಯಾಗಿ ಕಾರ್ಯ ಮಾಡಿರುವುದು ಜಯಂತಿಯ ಪುಟಪುಟಗಳಿಂದ ಸಿದ್ಧವಾಗುವುದು. ಕರ್ನಾಟಕದ ಚಳುವಳಿಯನ್ನು ಸಂಘಟಿಸುತ್ತಿದ್ದ ಮೇಲೆ ವಿವರಿಸಿದ ಎಲ್ಲ ಸಂಸ್ಥೆಗಳ ಜತೆಗೆ ಶ್ರೀ

---

೪೭. ಜಯಂತಿ, ಪು. ೪೨

ಬೆಟಗೇರಿ ಕೃಷ್ಣಶರ್ಮರು ಕ್ರಿಯಾಶೀಲ ಸಂಬಂಧವನ್ನು ಹೊಂದಿ ಆಗಾಗ ತಲೆದೋರುತ್ತಿದ್ದ ಆಲಸ್ಯ, ವಿದ್ರೋಹಗಳನ್ನು ಜಯಂತಿಯಲ್ಲಿ ಸಂಪಾದಕೀಯ ಮೂಲಕ ಬಯಲಿಗೆಳೆದು ಖಂಡಿಸಿ ಕನ್ನಡ ಚಳುವಳಿಯ ಗತಿಪ್ರವಾಹವು ಹರಿಗಡಿಯದಂತೆ ವಹಿಸಿದ ಎಚ್ಚರವು ಕನ್ನಡ ಚಳುವಳಿಯಲ್ಲಿ ಅವರು ನಿರ್ವಹಿಸಿದ ಹೊಣೆಯ ಅರಿವನ್ನುಂಟುಮಾಡುವುದು. ಅಂದಿನ ಕನ್ನಡದ ಹಿರಿಯ ಮುಂದಾಳುಗಳಿಂದ ಬರೆಯಿಸಿದ ಉಜ್ವಲ ಕನ್ನಡ ಭಕ್ತಿಯ ಲೇಖನಗಳನ್ನು ಪ್ರಕಟಣೆ, ಜನಜಾಗೃತಿಯನ್ನು ಕಾಯ್ದುಕೊಂಡು ಬರುವಲ್ಲಿ ಹಾಗೂ ಸುಶಿಕ್ಷಿತ ಕನ್ನಡ ತರುಣರಲ್ಲಿ ನಾಡುನುಡಿಯ ಅಭಿಮಾನವನ್ನು ಮೂಡಿಸಿ ಅಂತಹ ತರುಣ ಲೇಖಕರ ಬಳಗವನ್ನೇ ನಿರ್ಮಿಸಿ ಏಕೀಕರಣದ ಕನಸು ನನಸಾಗುವವರೆಗೂ ಚಳುವಳಿಯ ಕಾವು ಆರಿಹೋಗದಂತೆ ಜಾಗೃತವಾಗಿ ಇರಿಸಿದ ಶ್ರೇಯಸ್ಸು ಜಯಂತಿಯ ಸಂಪಾದಕರಾಗಿ ಏಕಾಂಗಿಯಾಗಿ ಹೋರಾಡಿದ ಶ್ರೀ ಬೆಟಗೇರಿ ಯವರಿಗೆ ಸಲ್ಲುತ್ತದೆ."[೪೮] 'ಜಯಂತಿ' ಕನ್ನಡ ಏಕೀಕರಣದ ಮುಖವಾಣಿಯಾಗಿ ದುಡಿಯಿತೆಂಬ ಮಾತು ಬೆಟಗೇರಿಯವರು ಕನ್ನಡ ಕಟ್ಟುವ ಕಾಯಕದಲ್ಲಿ ವಹಿಸಿದ ಪಾತ್ರದ ಮಹತ್ವವನ್ನು ಉನ್ನತಮಟ್ಟದಲ್ಲಿ ಎತ್ತಿ ತೋರುವಂತಹದು.

ಮುಂಬೈ ಪ್ರಾಂತದ ಅಂದಿನ ಕಾಂಗ್ರೆಸ್ ಮುಖ್ಯಮಂತ್ರಿ ಶ್ರೀ ಖೇರ ಅವರು ಬೆಳಗಾವಿಯ ಸಭೆಯಲ್ಲಿ ಕನ್ನಡಿಗರ ಉಗ್ರ ಪ್ರತಿಭಟನೆಯನ್ನು ಲೆಕ್ಕಿಸದೆ ಮರಾಠಿಯಲ್ಲಿ ಭಾಷಣ ಮಾಡಿದ ಸಂದರ್ಭದಲ್ಲಿ ಜಯಂತಿಯಲ್ಲಿ 'ಕನ್ನಡ ಸೈನಿಕ' ಎಂಬ ಲೇಖನ ಪ್ರಕಟಗೊಂಡಿತು. ಅದು ಶ್ರೀ ಎಚ್.ಎಸ್.ಪಾಟೀಲ ಮತ್ತು ಶ್ರೀ ಖೇರರ ಸಂದರ್ಶನ ಜಯಂತಿಗಾಗಿ ಬೆಟಗೇರಿಯವರು ಮಾಡಿಸಿ ಪ್ರಕಟಿಸಿದ್ದಾಗಿದೆ. ಖೇರ ಕನ್ನಡಗಿರ ಅಭಿಮಾನಕ್ಕೆ ತಲೆಬಾಗಿದ ಈ ಪ್ರಸಂಗ ಬೆಟಗೇರಿಯವರ ದಿಟ್ಟತನದಿಂದ ಸಂಭವಿಸಿದ್ದಾಗಿದೆ. ಸೊಂಡೂರಿನಲ್ಲಿ ಕನ್ನಡದ ಕೈಗೆ ಶಂಖ, ಬಿ.ಟಿ.ಕಾಲೇಜೂ ಕನ್ನಡವೂ, ಮೈಸೂರಿನಲ್ಲಿ ಕನ್ನಡಕ್ಕೆ ವನವಾಸ ಮುಂತಾದ ಲೇಖನಗಳನ್ನು ಬೆಟಗೇರಿಯವರು 'ಕನ್ನಡ ಸೈನಿಕ'ನಾಗಿ ಬರೆದು ಕನ್ನಡ ರಕ್ಷಣೆಯ ವೀರನಿಷ್ಠೆ ಪ್ರಕಟಿಸಿದ್ದಾರೆ.

'ಕರ್ನಾಟಕದ ಸಂಕಟ ಸಹಸ್ರ' ಎಂಬ ಸಂಪಾದಕೀಯ ಲೇಖನದಲ್ಲಿ ಅಂದಿನ 'ಏಕೀಕರಣ ಸಭೆಯ' ನಿಷ್ಕ್ರಿಯತೆಯನ್ನು ಹೋಗಲಾಡಿಸಲು ನಿಷ್ಠುರ ಮಾತುಗಳನ್ನು ಬರೆದಿದ್ದಾರೆ. "ಪ್ರಾಂತದ ಸಾಮಾಜಿಕ ಸಂಘಟನೆಯ ಚಳುವಳಿಯನ್ನು ಮಾಡುತ್ತಿದ್ದ

---

೪೮. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು. ೬೯

'ಏಕೀಕರಣ ಸಭೆ' ಕೂಡ ಇಂದು ಕಣ್ಣು ಮುಚ್ಚಿಕೊಂಡು ಬಿದ್ದಿದೆ ಎಂತಲೆ ಪರಪ್ರಾಂತದವರು ನಮ್ಮ ಔದಾಸೀನ್ಯದ ಸಂಧಿ ಸಾಧಿಸಿ ನಮ್ಮ ನಾಡನ್ನು ಹರಿದುಕೊಳ್ಳುವ ಹಂಚಿಕೆಯಲ್ಲಿದ್ದಾರೆ."[೪೯]

ಕನ್ನಡದ ಅಭ್ಯುದಯದ ಬಗ್ಗೆ ನಿರ್ಭೀತ ಹೋರಾಟದ ದನಿಯಾಗಿ ಬೆಟಗೇರಿಯವರ ಅಂದಿನ ಬರಹಗಳು ಮಹತ್ವ ಪಡೆದಿವೆ. ಮದ್ರಾಸ-ಮುಂಬೈ ಪ್ರಾಂತಗಳ ಶಾಸನಸಭೆಗಳಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಜಗೋಪಾಲಾಚಾರಿ ಹಾಗೂ ಶ್ರೀ ಬಿ.ಜಿ.ಖೇರ ಅವರು ಕನ್ನಡದ ಬಗೆಗೆ ತೋರಿದ ಅನಾಸ್ಥೆಯನ್ನು ಪ್ರತಿಭಟಿಸಿ 'ಗೊತ್ತುವಳಿಯೊ-ಗತ್ತುವಳಿಯೊ' ಎಂಬ ಉಗ್ರಲೇಖನ ಬರೆದ ಶ್ರೀ ಬೆಟಗೇರಿಯವರು ಇಂಥ ಉಪೇಕ್ಷೆಗಳನ್ನು 'ಏಕೀಕರಣ ಸಭೆ' ಗಂಭೀರವಾಗಿ ಪರಿಗಣಿಸಬೇಕೆಂದು ಆಗ್ರಹಿಸುತ್ತಾರೆ.

ಇಲ್ಲೊಂದು ವಿಶಿಷ್ಟ ರಾಜಕೀಯ ಸಂಗತಿಯನ್ನು ಗಮನಿಸಬೇಕು. ಕರ್ನಾಟಕದ ಕೆಲವು ಪ್ರಾಂತಗಳು ಮುಂಬೈ ಕರ್ನಾಟಕ ಎಂದು ಪರಿಗಣಿತವಾಗಿ ಮರಾಠಿಗರ ರಾಜಕೀಯ ಪ್ರಭಾವದಲ್ಲಿದ್ದವು. ಮದ್ರಾಸ ಕರ್ನಾಟಕ, ಹೈದರಾಬಾದ ಕರ್ನಾಟಕ ಎಂದು ಕರೆಯಿಸಿಕೊಂಡು ಅಚ್ಚಗನ್ನಡದ ಅನೇಕ ಭಾಗಗಳು ತಮಿಳರ, ತೆಲುಗರ ರಾಜಕೀಯ ಪ್ರಭಾವಕ್ಕೆ ಒಳಗಾಗಿದ್ದವು. ಬ್ರಿಟೀಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ಮಾಡಿಕೊಂಡ ಈ ರಾಜತಾಂತ್ರಿಕ, ಭೌಗೋಳಿಕ ವಿಂಗಡಣೆ ಸ್ವಯಂ ಅಧಿಕಾರ ಕೇಂದ್ರಗಳನ್ನು ಹೊಂದಿದ ಭಾಷಾ ಸಮುದಾಯಗಳಿಗೆ ಹೆಚ್ಚಿನ ಸಮಸ್ಯೆಯಾಗಿರಲಿಲ್ಲ. ಅವರಿಗೆ ಕನ್ನಡದ ಪ್ರದೇಶಗಳು ತಮ್ಮವೆಂದು ಹೇಳಿಕೊಳ್ಳುವ ಅವಕಾಶವಿತ್ತು. ಆದರೆ ಕರ್ನಾಟಕಕ್ಕೆ ಬ್ರಿಟೀಷರ ರಾಜಕೀಯ ಅಧೀನತೆಯ ಜತೆಗೆ ಸೋದರ ಭಾಷೆಗಳವರ ಸಾಂಸ್ಕೃತಿಕ ಅಧೀನತೆಯನ್ನು ಸಹಿಸಿಕೊಂಡು ಹೋಗುವ ಅನಿವಾರ್ಯ ಪರಿಸ್ಥಿತಿ ಉಂಟಾಗಿತ್ತು. ಆಡಳಿತಾನುಕೂಲ ಹೊಂದಿದ ಆಯಾ ಪ್ರಾಂತೀಯ ಭಾಷೆಗಳವರಿಗೆ ಏಕೀಕರಣ ತೀರ ಅನಿವಾರ್ಯ ಸಂಗತಿಯಾಗಿರಲಿಲ್ಲ. ಏಕೆಂದರೆ ಭಾಷಾವಾರು ಪ್ರಾಂತಗಳ ವಿಂಗಡಣೆಯಿಂದ ಅವರು ಅನಿವಾರ್ಯವಾಗಿ ಕೆಲವು ಪ್ರದೇಶಗಳನ್ನು ಬಿಟ್ಟು ಕೊಡಬೇಕಾಗಿತ್ತು. ಆದ್ದರಿಂದ ಕರ್ನಾಟಕದ ಈ ಗಡಿಭಾಗಗಳಲ್ಲಿ ಕರ್ನಾಟಕದ ಏಕೀಕರಣದ ಅಗತ್ಯ ಕನ್ನಡಿಗರಿಗೆ ತೀವ್ರವಾದ ಹಂಬಲವಾಗಿತ್ತು. ಕರ್ನಾಟಕ ಇದರಿಂದ ಪಡೆದುಕೊಳ್ಳುವುದೇ ಹೆಚ್ಚಾಗಿತ್ತು. ಈ ದೃಷ್ಟಿಯಿಂದ ಏಕೀಕರಣವನ್ನು ತೀವ್ರಗತಿಯಲ್ಲಿ ಸಾಧಿಸಬೇಕೆಂದು ಪ್ರತಿಪಾದಿಸುವಲ್ಲಿ ಒಂದು

---

೪೯. ಆನಂದಕಂದ- ಕವಿ, ಕಾವ್ಯ, ವಿಮರ್ಶೆ-ಸಂಶೋಧನ ಮಹಾಪ್ರಬಂಧ, ಡಾ. ಎ.ಕೆ.ಕುಲಕರ್ಣಿ, ಪು. ೯೨

ವಿಶೇಷ ಕಾರಣವಿತ್ತು. ಆನಂದಕಂದರು ಈ ಗಡಿ ಜಿಲ್ಲೆಯವರಾಗಿರುವುದರಿಂದಲೇ ಅವರ ಬರಹಗಳಲ್ಲಿ ಸಹಜವಾಗಿಯೇ ಈ ವಾಸ್ತವದ ಅರಿವು ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗಾಗಿ ಏಕೀಕರಣ ಚಳುವಳಿ ಉತ್ತರ ಕರ್ನಾಟಕದ ಭಾಗಗಳಲ್ಲಿ ಪಡೆದಷ್ಟು ತೀವ್ರತೆಯನ್ನು ಮೈಸೂರು ಪ್ರಾಂತಗಳಲ್ಲಿ ಪಡೆದಿರಲಿಲ್ಲ ಎಂಬುದು ಎದ್ದು ಕಾಣುವ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಬೆಟಗೇರಿಯವರ ಕೆಳಗಿನ ಮಾತುಗಳನ್ನು ಪರಿಭಾವಿಸಬೇಕು.

"…. ನಾವು ದ್ರೌಪದಿಯ ಗಂಡಂದಿರಂತೆ ಐದು ಸರಕಾರಗಳ ಅಧೀನದಲ್ಲಿದ್ದೇವೆ. ಎಲ್ಲ ಗಂಡಂದಿರನ್ನು ಏಕಕಾಲಕ್ಕೆ ಮನವೊಲಿಸಿದೆ ನಮ್ಮ ಕಾರ್ಯವೇ ಸಾಧಿಸುವಂತಿಲ್ಲ." ಇಂಥ ಪರಿಸ್ಥಿತಿಯಲ್ಲಿ ಏಕೀಕರಣದ ಮುಖ್ಯ ವೇದಿಕೆಯಾಗಿ 'ಜಯಂತಿ' ದುಡಿಯಿತು. ಆನಂದಕಂದರ ಸಂಶೋಧನಾ ಗ್ರಂಥದಲ್ಲಿ ಅದರ ಮಹತ್ವವನ್ನು ಹೀಗೆ ನೆನೆಯಲಾಗಿದೆ. "ಏಕೀಕರಣ ಚಳುವಳಿಯ ಮೂಲ ಬೀಜವು ಧಾರವಾಡದಲ್ಲಿಯೆ ಮೊಳಕೆಯೊಡೆದು ಹೆಮ್ಮರವಾಗಿ ಬೆಳೆದು ಕವಿಕಂಡ ಕನಸನ್ನು ನನಸಾಗಿಸಿತು ಎನ್ನಬಹುದು. ಇದಕ್ಕಾಗಿ ದುಡಿದ ಕೈಗಳಲ್ಲಿ ಸಾಹಿತ್ಯಜ್ಞರದೆ ಬಹುಪಾಲು. ಸಾಹಿತ್ಯ ಪರಿಷತ್ತು ಸಂಘಟಿಸುತ್ತಿದ್ದ ವಾರ್ಷಿಕ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯದ ವಿಷಯಕ್ಕಿಂತ ಕರ್ನಾಟಕ ಏಕೀಕರಣದ ಧ್ವನಿಯೆ ತುಂಬಿರುತ್ತಿತ್ತು. ಶಿಕ್ಷಣ ಸಭೆಗಳು ಕಾಂಗ್ರೆಸ್ ಸಭೆಗಳು ಏಕೀಕರಣ ಸಭೆಗಳೇ ಆಗಿದ್ದವು. ಸಾಹಿತಿಗಳು ಬರೆಯುವ ಲೇಖನ, ಕವಿಗಳ ಕವನಗಳ ಧ್ವನಿಯೂ ಏಕೀಕರಣವೇ ಆಗಿತ್ತು. ಇಂತಹ ಸಾರ್ವತ್ರಿಕವಾದ, ಏಕಮುಖವಾದ ಹೋರಾಟದ ಸ್ವರೂಪವು ಏಕೀಕರಣ ಚಳುವಳಿಗೆ ಬರಲು ಜಯಂತಿಯ ಸಂಪಾದಕರಾಗಿ ಶ್ರೀ ಬೆಟಗೇರಿ ಕೃಷ್ಣಶರ್ಮ ಅವರು ನಡೆಸಿದ ನಿರಂತರ ಆಂದೋಲನವೇ ಸೂಕ್ತ ಕಾರಣವೆಂಬುದನ್ನು ಮರೆಯುವಂತಿಲ್ಲ."[೫೦] ಮುದುವೀಡು ಕೃಷ್ಣರಾಯರಂತವರ ಉಗ್ರ ಲೇಖನಗಳು ಜಯಂತಿಯಲ್ಲಿ ಪ್ರಕಟವಾಗಿ ಜನರನ್ನು ಜಾಗೃತಗೊಳಿಸಿದವು. ವರಕವಿ ದ.ರಾ.ಬೇಂದ್ರೆಯವರ 'ಒಂದೇ ಕರ್ನಾಟಕ' ಗೀತೆ ಜಯಂತಿಯಲ್ಲಿಯೇ ಪ್ರಕಟವಾಯಿತು.

ಜಯರಾಮಾಚಾರ್ಯರ ಕೀರ್ತನೆಗಳಲ್ಲಿ ಕನ್ನಡ ಹಾಡುಗಳನ್ನು ಹಾಡುವುದೇ ಇರಲಿ, ರಾಷ್ಟ್ರೀಯ ಶಾಲೆಗಳಲ್ಲಿ ಕನ್ನಡದ ಪ್ರಾರ್ಥನೆಗಳನ್ನು ಪ್ರಚಾರಕ್ಕೆ ತರುವುದೇ ಆಗಲಿ ರಾಷ್ಟ್ರೀಯ ಚಳುವಳಿಯ ಪಥ ಸಂಚಲನಕ್ಕೆ ಪ್ರಭಾತಫೇರಿಗೆ ಕನ್ನಡ

---

೫೦. ಆನಂದಕಂದ– ಕವಿ, ಕಾವ್ಯ, ವಿಮರ್ಶೆ–ಸಂಶೋಧನ ಮಹಾಪ್ರಬಂಧ, ಡಾ.ಎ.ಕೆ. ಕುಲಕರ್ಣಿ, ಪು. ೬೨

ಹಾಡುಗಳನ್ನು ಬರೆಯುವುದರಿಂದಾಗಲಿ, ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ನಡೆದಾಗ ನಾಡಗೀತೆ ರಚಿಸುವಲ್ಲಿಯಾಗಲಿ, ಆನಂದಕಂದರ ಒಂದೊಂದು ಕೆಲಸವೂ ಕನ್ನಡ ಕಟ್ಟುವ ಕಾಯಕದ ಹೃದಯಪೂರ್ವಕ ಅಭಿವ್ಯಕ್ತಿಗಳೇ ಆಗಿದ್ದವು. ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆ ೧೯೨೪ರ ಕಾಂಗ್ರೆಸ್ ಅಧಿವೇಶನದಲ್ಲಿ ನಾಡಗೀತೆಯಾಗಿ ಅಂಗೀಕಾರಗೊಳ್ಳುವವರೆಗೆ ಆನಂದಕಂದರ 'ಕರ್ನಾಟಕಾಂಬೆ ನೀ ಧನ್ಯೆ ಧನ್ಯೆ' ಎಂಬ ಗೀತೆ ನಾಡಗೀತೆಯಾಗಿತ್ತೆಂಬುದು ಅವರ ಕನ್ನಡಾಭಿಮಾನದ ಸೆಲೆ ಹಾಗೂ ಅದರ ಕ್ರಿಯಾತ್ಮಕ ರೂಪದ ಗಹನತೆಯ ಅರಿವಾಗುತ್ತದೆ.

'ಕನ್ನಡ ನಾಡಿನ ಮುಂಬಾನೊಳು
ಚೆಂಬಣ್ಣದ ಬೆಳಕಿದು ಏತರದು'

ಎಂಬ ಸುಂದರ ಕನಸುಗಳನ್ನು ಕಟ್ಟಿ ಹಾಡಿದ ಆನಂದಕಂದರು ಆ ಕನಸಿನ ಸಾಕಾರಕ್ಕೆ ರೂಪಿಸಿಕೊಂಡ ಕಾರ್ಯಯೋಜನೆಗಳು, ಸಹಕರಿಸಿ ನಿಂತ ಸ್ಫೂರ್ತಿಯುತ ಬರಹಗಳು, ಕನ್ನಡ ಅವರ ಅಸ್ತಿತ್ವದ ಕಣಕಣವನ್ನು ವ್ಯಾಪಿಸಿಕೊಂಡಿತ್ತು ಎಂಬ ಸಂಗತಿ ಮನದಟ್ಟಾಗುತ್ತದೆ. 'ಅರುಣೋದಯ'ದ ಅವರ ಕವಿತೆಗಳು ಕನ್ನಡಿಗರ ಸುಪ್ತ ಪ್ರಜ್ಞೆಯಲ್ಲಿ ಅಡಗಿರುವ ಅಭಿಮಾನದ ಅಂಶಗಳನ್ನೆಲ್ಲ ಬಡಿದೆಚ್ಚರಿಸುವಂತಿವೆ. ನನ್ನದು ಈ ಕನ್ನಡ ನಾಡು, ಎನಿತು ಇನಿದು ಈ ಕನ್ನಡ ನುಡಿಯು ಕನ್ನಡ ಜನನೀ, ಆ ಮಾಧವನೆಲ್ಲಿರುತಿಹನು, ರಾಮರಾಜನ ರಣದುಂದುಭಿ ಮುಂತಾದ ಕವನಗಳು ಕುವೆಂಪು, ಬೇಂದ್ರೆಯವರಷ್ಟೇ ಪ್ರಖರ ಕನ್ನಡತನವನ್ನು ತೀವ್ರವಾಗಿ ವ್ಯಕ್ತಗೊಳಿಸುತ್ತವೆ.

ಕಡಪಾ ರಾಘವೇಂದ್ರರಾಯರು ಏಕೀಕರಣದ ಚಳುವಳಿಯ ಅಗ್ರ ನೇತಾರರು. ಅವರನ್ನು ಕುರಿತು 'ಕಿರ್ಲೋಸ್ಕರ' ಪತ್ರಿಕೆ ಲಘುವಾಗಿ ಬರೆದಾಗ ಅದನ್ನು ಖಂಡಿಸಿ ಮರಾಠಿ ಭಾಷಾಂಧತೆಯ ವಿರುದ್ಧ ಕನ್ನಡಿಗರ ಜಾಗೃತಿಯನ್ನು 'ಜಯಂತಿ'ಯಲ್ಲಿಯ ಬರಹದ ಮೂಲಕ ಮಾಡಿದ ಪ್ರಸಂಗ ಅವರ ಕಠೋರ ನಿಷ್ಠೆಗೆ ಸಾಕ್ಷಿ. 'ಮಂಗನ ಮಲ್ಲಿನಾಥ' ಅಂಕಣದಲ್ಲಿ ನಾಡಿನ ಹೊರ ಹಾಗೂ ಒಳ ವಿದ್ರೋಹಿಗಳನ್ನು ವಿಡಂಬಿಸುವ ಮೂಲಕ ಎಚ್ಚರ ಮೂಡಿಸುವ ಪ್ರಯತ್ನವಾಗಿದೆ.

ಧಾರವಾಡದ ವಿದ್ಯಾವರ್ಧಕ ಸಂಘ ಕನ್ನಡ ಏಕೀಕರಣದ ವಿಷಯದಲ್ಲಿ ಆಡಿದ ಪಾತ್ರ ಚಾರಿತ್ರಿಕವಾದುದು. ಕನ್ನಡದ ಕನಸುಗಳೆಲ್ಲ ಸಾಕಾರಗೊಳ್ಳುವಲ್ಲಿ ಈ ಸಂಘ ನಾಡಿನ ಸರ್ವಶಕ್ತಿಗಳನ್ನು ಕ್ರೋಢೀಕರಿಸುವ ದಿಕ್ಕಿನಲ್ಲಿ ಪ್ರಮುಖ ಪಾತ್ರವಹಿಸಿದೆ. ಸಂಘದ ಕಾರ್ಯದರ್ಶಿಯಾಗಿ ಕನ್ನಡ ಏಕೀಕರಣದ ಧ್ವಜವನ್ನು ಮುಂಚೂಣಿಯಲ್ಲಿ

ಹಿಡಿದು ನಿಂತ ಆನಂದಕಂದರು ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಆ ಸ್ಥಾನದಲ್ಲಿದ್ದು ಸಂಘದ ಪತ್ರಿಕೆ ವಾಗ್ಭೂಷಣಕ್ಕೆ ವರಕವಿ ದ.ರಾ.ಬೇಂದ್ರೆಯವರ ಜತೆಗೆ ಸೇರಿ ವಿಶೇಷ ರೂಪ ನೀಡಿದರು.

ವಿಜಯನಗರ ಕುರಿತು ಬರೆಯಲಾದ ಅವರ ಕಾದಂಬರಿಗಳೂ ಕನ್ನಡಿಗರ ಪತನದ ಕತೆಯನ್ನು ಜ್ಞಾಪಿಸಿ ಮತ್ತೆ ಒಡಮುರಿದೇಳುವ ಸ್ಫೂರ್ತಿಯನ್ನು ತುಂಬುವ ಉದ್ದೇಶದಿಂದ ಬರೆಯಲ್ಪಟ್ಟಿದ್ದವು.

ಕರ್ನಾಟಕವನ್ನು ಶೈಕ್ಷಣಿಕವಾಗಿ ಕಟ್ಟುವ ಉದ್ದೇಶದಿಂದ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಾಗಬೇಕೆಂದು ಆನಂದಕಂದರು ಜಯಂತಿಯ ಮೂಲಕ ಪ್ರತಿಪಾದನೆ ಮಾಡುತ್ತಿದ್ದರು. ಅಷ್ಟೇ ಅಲ್ಲ, ಶ್ರೀ ಆರ್.ವಿ. ಜಹಗೀರದಾರರ ನೇತೃತ್ವದ ಸಂಘಟನಾತ್ಮಕ ಹೋರಾಟಕ್ಕೆ ಮುಕ್ತ ಬೆಂಬಲವಾಗಿ ನಿಂತಿದ್ದರು. ಬೆಳಗಾವಿಯ ವಿಭಜನೆಯ ವಿಷಯದಲ್ಲಿ ಆನಂದಕಂದರು ಆಮರಣಾಂತ ಉಪವಾಸಕ್ಕೆ ಸಿದ್ಧರಾದದ್ದು ಅವರ ಕೆಚ್ಚನ್ನು ಬಿಂಬಿಸುತ್ತದೆ. "ಸಾಹಿತ್ಯ ಸಮ್ಮೇಳನ, ಗ್ರಂಥಕರ್ತರ ಸಮ್ಮೇಳನ, ಶಿಕ್ಷಣ ಸಮ್ಮೇಳನ, ಏಕೀಕರಣ ಸಭೆ ಹೀಗೆ ಎಲ್ಲ ಸಭೆಗಳಿಗೆ ಅವರು ಹೋಗಿ ಕನ್ನಡ ಧ್ವಜ ಹಾರಾಡುವುದನ್ನು ನೋಡಿಯೇ ಊಟ ಮಾಡುತ್ತಿದ್ದರು."[೫೧]

"ಆನೆಗೊಂದಿಯ ದರ್ಶನವು ಕರ್ನಾಟಕದ ಕುಲಪುರೋಹಿತ ಆಲೂರು ವೆಂಕಟರಾಯರಲ್ಲಿ 'ಕರ್ನಾಟಕತ್ವ'ವನ್ನು ಜಾಗೃತಗೊಳಿಸಿದಂತೆ ೧೯೧೯ ರ ಧಾರವಾಡದ ಏಕೀಕರಣ ಪರಿಷತ್ತಿಗಾಗಿ ಕೂಡಿದ ಜನತಾ ಜನಾರ್ಧನನು ಶ್ರೀ ಬೆಟಗೇರಿಯ ಕೃಷ್ಣಶರ್ಮರ ಹೃದಯದಲ್ಲಿ ಕರ್ನಾಟಕತ್ವದ ಬೀಜವನ್ನು ಬಿತ್ತಿದನೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ."[೫೨] ಏಕೀಕರಣ ಪರಿಷತ್ತಿನ ಕಾರ್ಯಕರ್ತನಾಗಿ ಓಡಾಡುತ್ತಿದ್ದ ೧೯ರ ಹರೆಯದ ಆನಂದಕಂದರು ಪರಿಷತ್ತಿನ ಪ್ರತಿಯೊಂದು ಕಾರ್ಯಕ್ರಮಕ್ಕೂ ಹಾಜರಾಗುತ್ತಿದ್ದರು. ಇಂಥ ಸಭೆಯೊಂದರಲ್ಲಿ ಆನಂದಕಂದರು ಸ್ವಯಂಸೇವಕರಾಗಿ ಭಾಗವಹಿಸಿದಾಗ "ಕರ್ನಾಟಕ ಒಂದು ಪ್ರಾಂತವಾಗಬೇಕು ಎಂಬ ಬೇಡಿಕೆಯ ಗೊತ್ತುವಳಿ ಪಾಸಾದಾಗ 'ಕರ್ನಾಟಕ ಮಾತಾಕಿ ಜೈ' ಎಂದು ಮೈಮರೆತವರಾಗಿ ಕೂಗಿದಾಗ ಸಭೆಯೆಲ್ಲ ಬೆರಗುಗಣ್ಣಿನಿಂದ ನೋಡಿತಂತೆ. ಹೋರಾಟಕ್ಕೆ ಅಣಿಯಾದ ಅವರ ಈ ಕೂಗು ಬರಿ ಘೋಷಣೆಯಾಗಿರಲಿಲ್ಲ.

---

೫೧. ಜಯಂತಿ-೨೦ : ೯ ಫೆಬ್ರುವರಿ ೧೯೫೮, ಪು. ೩೦೧

೫೨. ಆನಂದ ಕಂದ, ಕವಿ, ಕಾವ್ಯ, ವಿಮರ್ಶೆ, ಪುಟ. ೯೨ ಸಂಶೋಧನ ಮಹಾ ಪ್ರಬಂಧ ಡಾ.ಎ.ಕೆ. ಕುಲಕರ್ಣಿ

ಅದನ್ನು ನನಸನ್ನಾಗಿ ಮಾಡಿಯೇ ತೀರುವ ಭೀಷ್ಮ ಪ್ರತಿಜ್ಞೆಯಾಗಿತ್ತು ಎಂಬುದು ಕನ್ನಡಿಗರಿಗೆ ಅವರ ಮುಂದಿನ ಜೀವನವು ತೋರಿಸಿಕೊಟ್ಟಿತು."[೫೩]

ಆನಂದಕಂದರ ಕಾವ್ಯ, ಕತೆ, ಕಾದಂಬರಿ, ರೂಪಕ, ಸಂಶೋಧನೆ. ವಿಮರ್ಶೆ, ಜಾನಪದ, ಪತ್ರಿಕಾ ಸಂಪಾದನೆ ಯಾವ ಪ್ರಕಾರದ ಸಾಹಿತ್ಯಿಕ ಅಭಿವ್ಯಕ್ತಿ ಮತ್ತು ತೊಡಗುವಿಕೆಯಾಗಿರಲಿ ಅದು ಕನ್ನಡದ ನಾಡು ನುಡಿಗಳನ್ನು ಕಟ್ಟಿ ಬೆಳೆಸುವ ಕನ್ನಡಿಗರನ್ನು ಒಂದುಗೂಡಿಸಿ ಅವರೆಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಾರಿಯಲ್ಲಿಯೇ ಪ್ರಯತ್ನಶೀಲವಾಗಿದ್ದವು. ಪ್ರತ್ಯಕ್ಷವಾಗಿ ಪರೋಕ್ಷವಾಗಿ ಅವರ ಬದುಕು ಕನ್ನಡದ ಮೂಲಕವೇ ಮಾನವೀತೆಯ ಅನಾವರಣಕ್ಕೆ ಸಾಧನವಾಗಿ ದುಡಿಯುವಲ್ಲಿ ಕ್ರಿಯಾಶೀಲವಾಗಿ ಸಾರ್ಥಕತೆ ಸಾಧಿಸಿತು ಎಂಬುದು ಅಂತಿಮವಾಗಿ ಕನ್ನಡಿಗರ ಮೇಲೆ ಆನಂದಕಂದರು ಹೊರಿಸಿದ ಬಹುದೊಡ್ಡ ಋಣ. ಆದರೆ ಆನಂದಕಂದರು ಇಂಥ ಯಾವ ನಿರೀಕ್ಷೆಯೂ ಇಲ್ಲದೆ ತಮ್ಮ ಬದುಕಿನ ದುರ್ಭರ ಸ್ಥಿತಿಗಳಲ್ಲಿಯೂ ಕನ್ನಡದ ಏಳ್ಗೆಗಾಗಿ ಶ್ರಮಿಸಿದರು. ಕನ್ನಡದ ಹಿತಾಸಕ್ತಿಗೆ ಧಕ್ಕೆ ಬಂದಾಗ ನೊಂದರು ಎಂಬುದನ್ನು ನೆನೆದಾಗ ಕನ್ನಡಿಗರು ಕನಿಷ್ಠ ಅವರನ್ನು ಗೌರವದಿಂದ ನೆನೆಯುವಲ್ಲಾದರೂ ಹಿಂದೆ ಬೀಳಬಾರದು ಎಂಬ ಭಾವನೆ ಮೂಡದಿರದು. ಜಯಂತಿಯನ್ನು ಮುಚ್ಚಬೇಕಾಗಿ ಬಂದಾಗ ಅವರು ಬರೆದುಕೊಂಡ ಮಾತುಗಳೊಂದಿಗೆ ಅವರ ಬದುಕಿನ ಈ ತ್ಯಾಗಪೂರ್ಣ ಗಾಥೆಯನ್ನು ಮುಗಿಸಲಾಗುವದು. "ಹುಟ್ಟಿನಿಂದಲೂ ಜಯಂತಿ, ಕರ್ನಾಟಕ, ಏಕೀಕರಣಕ್ಕಾಗಿ ದುಡಿಯಿತು. ಅದರ ಉದ್ದೇಶ ಸಿದ್ಧಿಯಾಗಿ ಕರ್ನಾಟಕ ಉದಯವಾಗಿರುವಾಗ ಜಯಂತಿ ತನ್ನ ಅಸ್ತಮಯ ಕಾಲವನ್ನು ಕಂಡುಕೊಳ್ಳಬೇಕಾದ ಪರಿಸ್ಥಿತಿ ಬಂದು ಕುಳಿತಿದೆ.[೫೪]

ಆನಂದಕಂದರ ಬದುಕು ಬರಹಗಳೆರಡೂ ಉಪೇಕ್ಷೆಗೆ ಗುರಿಯಾದದ್ದು ವಿಷಾದನೀಯವಾದರೂ ಕನ್ನಡ ಕಟ್ಟಿದ ಮಹಾನುಭಾವರ ಸಾಲಿನಲ್ಲಿ ಆನಂದಕಂದರ ಹೆಸರು ಚಿರಸ್ಮರಣೀಯವಾದುದು.

---

೫೩. ಅದೇ ಪು.೭೨
೫೪. ಜಯಂತಿ ೧೯೫೮ ಪು.೩೦೧

# ಭಾವಚಿತ್ರಗಳು



ಗದುಗಿನ ತೋಂಟದಾರ್ಯ ಮಠದ ಡಾ. ಸಿದ್ಧಲಿಂಗ ಸ್ವಾಮಿಗಳವರೊಂದಿಗೆ
(ಬೆಲವಳು)



೧೯೭೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ ಪದವಿ ನೀಡಿದ ಸಂಧರ್ಭ. (ಡಾ. ಬೆಟಗೇರಿ ಕೃಷ್ಣಶರ್ಮ. ಡಾ. ಮಲ್ಲಿಕಾರ್ಜುನ ಮನ್ಸೂರ, ಡಾ. ವಾಯ್, ನಾಗೇಶ ಶಾಸ್ತ್ರಿ.)
(ಬೆಲವಳು)



೧೯೭೮ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದ ಸಂದರ್ಭದಲ್ಲಿ ಇತರ ಪ್ರಶಸ್ತಿ ವಿಜೇತರೊಂದಿಗೆ. ಎಡದಿಂದ ಬಲಕ್ಕೆ ಶ್ರೀ ಎನ್. ಕೆ. ದೀಕ್ಷಿತ, ಶ್ರೀ ಎಸ್.ವಿ ಪರಮೇಶ್ವರ ಭಟ್ಟ, ಡಾ. ಬೆಟಗೇರಿ ಕೃಷ್ಣಶರ್ಮ, ಶ್ರೀರಂಗ, ಧರ್ಮವೀರ (ರಾಜ್ಯಪಾಲರು ಡಾ. ಎಸ್.ವಿ. ರಂಗಣ್ಣಾ ಡಾ. ಆರ್.ಸಿ.ಹೀರೆಮಠ.



ಬೆಲವಳು ಬಿಡುಗಡೆ ಸಂದರ್ಭದಲ್ಲಿ ಶ್ರೀ ಶಂಬಾ ಜೋಶಿ, ಡಾ. ಆರ್. ವಾಯ್, ಧಾರವಾಡಕರ, ಡಾ. ಬೆಟಗೇರಿ ಕೃಷ್ಣಶರ್ಮ, ಡಾ. ಸಿದ್ಧಲಿಂಗ ಸ್ವಾಮಿಗಳು.



ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಡಾ. ಗಂಗಾಧರ ಮಹಾಸ್ವಾಮಿಗಳೊಂದಿಗೆ.



೧೯೭೦ –೭೧ ಮೈಸೂರು ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ದ.ಪ. ಕರ್ಮರಕರ್, ಬೆಟಗೇರಿ ಕೃಷ್ಣಶರ್ಮ, ಆರ್.ಆರ್. ದಿವಾಕರ್, ದೇವನಾಥ ಮಹರ್ಷಿ, ದ.ರಾ.ಬೇಂದ್ರೆ



ಬೆಲವಳು ಬಿಡುಗಡೆ ಸಮಾರಂಭ ಶ್ರೀ ಎಸ್.ಎಸ್. ಕುಲಕರ್ಣಿಯವರಿಂದ ಸನ್ಮಾನ, ಜೊತೆ ಚೆನ್ನವೀರ ಕಣವಿ, ರಾ.ಯ. ಧಾರವಾಡಕರ, ಪಾಟೀಲ ಪುಟ್ಟಪ್ಪ, ಡಾ. ಆರ್.ಸಿ. ಹೀರೆಮಠ.



ಬೆಟಗೇರಿ ಕೃಷ್ಣಶರ್ಮರೊಂದಿಗೆ ಶ್ರೀ ಮತ್ತಿಗಟ್ಟಿ ಕೃಷ್ಣಮೂರ್ತಿ, ಮಗಳು ಶ್ರೀಮತಿ ಉಮಾ ಮತ್ತಿಗಟ್ಟಿ



ಬೆಟಗೇರಿ ಅವರ ಮನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತ್ ಡಾ. ಹಂಪಾ ನಾಗರಾಜ ಅವರಿಂದ ಕೃಷ್ಣಶರ್ಮ ಅವರಿಗೆ ಸನ್ಮಾನ . ಜೊತೆಯಲ್ಲಿ ಬೆಟಗೇರಿಯವರ ಹಿರಿಯ ಸಹೋದರ ಶ್ರೀಬಲರಾಮಪ್ಪ ಪಾಟೀಲ.



ಶ್ರೀ ಗೋರುರು ರಾಮಸ್ವಾಮಿ ಅಯ್ಯಂಗಾರ ಮುಂತಾದವರು. ಬೆಟಗೇರಿ ಕೃಷ್ಣಶರ್ಮ, ಡಾ. ರಂ. ಶ್ರೀ. ಮುಲಗಳಿ

 11

ಬೆಲವಳು ಬಿಡುಗಡೆ ಸಮಾರಂಭ ಶ್ರೀ ಎಸ್.ಎಸ್. ಕುಲಕರ್ಣಿಯವರಿಂದ ಸನ್ಮಾನ, ಜೊತೆ ಚೆನ್ನವೀರ ಕಣವಿ, ರಾ.ಯ. ಧಾರವಾಡಕರ, ಪಾಟೀಲ ಪುಟ್ಟಪ್ಪ, ಡಾ. ಆರ್.ಸಿ.ಹಿರೇಮಠ

 12

ಬೆಲವಳು ಬಿಡುಗಡೆ ಸಮಾರಂಭದಲ್ಲಿ ರಾ.ಯ ಧಾರವಾಡಕರ, ಪಾಟೀಲ ಪುಟ್ಟಪ್ಪ, ಬೆಟಗೇರಿ ಕೃಷ್ಣಶರ್ಮ, ಶಾಂತಾದೇವಿ ಮಾಳವಾಡ, ಸುರೇಶ ಬೆಟಗೇರಿ ದಂಪತಿಗಳು



ಡಾ॥ ಬೆಟಗೇರಿ ಕೃಷ್ಣಶರ್ಮ ದಂಪತಿಗಳು

(ಬೆಲವಳು)



ಡಾ॥ ಬೆಟಗೇರಿ ಕೃಷ್ಣಶರ್ಮ



ಡಾ॥ ಬೆಟಗೇರಿ ಕೃಷ್ಣಶರ್ಮ

